ಲೋಪದೋಷಗಳು ಬರುವುದು ಸಹಜ. ಈ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಸರ್ಕಾರ ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದೆ. ಇದರಲ್ಲಿ ಅರ್ಹರನ್ನು ಸೇರಿಸುವುದಕೂ. ಅನರ್ಹರನ್ನು ಬಿಟ್ಟು ಬಿಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ. ಮಾನ್ಯ ಸದಸ್ಯರು ಹೇಳಿದಹಾಗೆ ಇದರಲ್ಲಿ ರಾಜಕೀಯ ಇದೆ, ಜನತಾ ಪಕ್ಷದವರ ಕೈವಾಡ ಇದೆ ಎಂದು ಹೇಳುವುದು ಸತ್ಯಕ್ಕೆ ದೂರವಾದುದಾಗಿದೆ.

ಶ್ರೀ ಬಿ. ಆರ್. ಯಾವಗಲ್. — ಅಧ್ಯಕ್ಷರೇ, ನಿನ್ನೆ ಮಾನ್ಯ ಮಲ್ಲನಗೌಡ ಎಸ್. ಪಾಟೀಲ್ ಅವರ ಪ್ರಶ್ನೆ ಸಂಖ್ಯೆ ೧೮೪ (ಸಿ) ಗೆ ಉತ್ತರ ಕೊಡುವ ಸಮಯದಲ್ಲಿ ಕೊನೆಯ ಪ್ರಶ್ನೆಗೆ ಈ ಕೆಳಕಂಡಂತೆ ಉತ್ತರವನ್ನು ಕೊಡಲಾಗಿದೆ.

"ಕಾಯ್ದೆಯಲ್ಲಿ ಅಡಕವಾಗಿರುವ ಕಲಮುಗಳ ರೀತ್ಯಾ ಚುನಾವಣೆಗಳ ಪೂರ್ವಭಾವಿ ಸಿದ್ಧತೆಗೆ ಸುಮಾರು ೬ ತಿಂಗಳ ಕಾಲ ಬೇಕು. ಅದರಂತೆ ಎಲ್ಲಾ ಸಿದ್ಧತೆಗಳು ತ್ವರಿತಗತಿಯಲ್ಲಿ ನಡೆಯುತ್ತಿದೆ. ಪೂರ್ವಭಾವಿ ಸಿದ್ಧತೆಗಳು ಮುಗಿದ ಮೇಲೆ ಮಂತ್ರಿಮಂಡಲ ದಿನಾಂಕ ಗೊತ್ತುಪಡಿಸುವುದು''.

ಆದರೆ ಇವತ್ತಿನ ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆಯು "Legislature Highlights" ಕಲಮಿನ ೬ನೇ ಪ್ಯಾರಾದಲ್ಲಿ ಈ ರೀತಿ ಬಂದಿದೆ.

"That the Zilla Parishad and Panchayat elections would not be held till the end of the year became evident from a repaly given by Rural Development Minister Abdul Nazir Sab in which he said the priliminary work on the elections, which were in progress, would take another six months to complete. The earlier expectation was that the elections would be held in this summer".

ಆದುದರಿಂದ ಈ ತಪ್ಪನ್ನು ಅವರು ಸರಿಯಾಗಿ ತಿದ್ದಿಕೊಳ್ಳತಕ್ಕದ್ದು.

ರಾಜ್ಯದಲ್ಲಿ ತಲೆದೋರಿರುವ ಬರಗಾಲದ ಮೇಲಿನ ಚರ್ಚೆ

† ಶ್ರೀ ರಮೇಶ್‌ಕುಮಾರ್ (ಶ್ರೀನಿವಾಸಪುರ) —ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ದೀರ್ಘಕಾಲ ಎಂದರೆ ಸುಮಾರು ೪ ಗಂಟೆಗಳ ಕಾಲ ಬರಗಾಲದ ಬಗ್ಗೆ ಸರ್ಕಾರದ ವಿಫಲತೆಯ ಬಗ್ಗೆ ಅವರ ಅನಿಸಿಕೆಗಳನ್ನು ತಿಳಿಸಿದ್ದಾರೆ. ಒಂದು ವಿಷಯವನ್ನು ನಾನು ಪ್ರಥಮದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸದನದಲ್ಲಿ ರಾಜ್ಯಪಾಲರ ಭಾಷಣಕ್ಕೆ ಸ್ವಾಗತ ಮಾಡುತ್ತಾ ತಕ್ಷಣವೇ ಸರ್ಕಾರ ಪ್ರಸ್ತಾಪ ಮಾಡಿರತಕ್ಕ ವಿಷಯ ಎಂದರೆ, ಬರಗಾಲದ ಬಗ್ಗೆ ಇದು ಏನನ್ನು ತೋರಿಸುತ್ತದೆಂದರೆ, ಎಷ್ಟರ ಮಟ್ಟಿಗೆ ಸರ್ಕಾರಕ್ಕೆ ಈ ಬರಗಾಲದ ಪರಿಸ್ಥಿತಿಯಿಂದ ಆತಂಕ ಉಂಟಾಗಿದೆ ಎಂಬುದು. ಇದು ಅಷ್ಟು ಗಂಭೀರವಾಗಿದೆ. ಸರ್ಕಾರ ಇದನ್ನು ಎಷ್ಟು ಗಂಭೀರವಾಗಿ ಗ್ರಹಿಸಿದೆ ಎಂಬುದನ್ನು ಇದು ಎತ್ತಿ ತೋರಿಸುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಸಂಪ್ರದಾಯವಾಗಿ ಮಾತನಾಡುತ್ತಾ ಇದ್ದರು. ದೇಶದಲ್ಲಿ ಬರಗಾಲ ಬಂದರೆ, ಪ್ರವಾಹ ಬಂದರೆ ಯಾವುದಾದರೂ ನ್ಯಾಚುರಲ್ ಕೆಲಾಮಿಟೀಸ್ ಆದರೆ ಆ ಬಗ್ಗೆ ಪಕ್ಷಾತೀತವಾಗಿ ನೋಡತಕ್ಕದ್ದು ಬಹಳ ಒಳ್ಳೆಯದು. ನಾವೂ ಕೂಡ ಒಂದು, ಒಂದೂವರೆ ವರ್ಷಗಳ ಕಾಲ ವಿರೋಧ ಪಕ್ಷದಲ್ಲಿ ಕುಳಿತಿದ್ದೆವು.

(ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅಧ್ಯಕ್ಷ ಪೀಠವನ್ನಲಂಕರಿಸಿದರು)

೧೯೮೦ರಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಸ್ವಲ್ಪ ದಿವಸ ಮಾನ್ಯ ಬಂಗಾರಪ್ಪನವರು ರೆವಿನ್ಯೂ ಮಂತ್ರಿಗಳಾಗಿದ್ದರು. ಆಗಲೂ ಕೂಡಾ ಇಂತಹ ಸ್ಥಿತಿ ಉದ್ಭವ ಆದಾಗ ಅವರು ಮಾತನಾಡಿದ್ದಾರೆ. ಆಗ ಅವರು ಬರಗಾಲದ ಬಗ್ಗೆ ಹೆಚ್ಚು ಮಾತನಾಡಲಿಲ್ಲ. ಬೇಕಾದರೆ ಆ ಬಗ್ಗೆ

---

† ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ

ವರದಿಯನ್ನು ತರಿಸಿ ನೋಡಬಹುದು. ರಾಜಕಾರಣ ಹಾಗೂ ಅದರ ಜೊತೆ ಅವರ ಪ್ರವಾಸದ ವರದಿ ಬಗ್ಗೆ ಮಾತನಾಡಿದರು. ಏನೇನು ಮಾಡಿದರು ಏನೇನು ನೋಡಿದರು ಏನೇನು ಆಯಿತು ಎಂಬುದನ್ನು ಸುದೀರ್ಘವಾಗಿ ಹೇಳಿಕೊಂಡು ಹೋಗಿದ್ದಾರೆ.

ಶ್ರೀ ಪಟವರ್ಧನ ರತ್ನಾಕರ್.—ಅವರು ಬರಗಾಲ ಪ್ರದೇಶದಲ್ಲಿ ಪ್ರವಾಸ ಹೋದ ಬಗ್ಗೆ ಹೇಳಿದ್ದಾರೆ.

ಶ್ರೀ ರಮೇಶ್ ಕುಮಾರ್.—ಅದನ್ನು ನಾನು ಹೇಳುತ್ತೇನೆ. ವಿವರಕ್ಕೆ ನಾನು ಆ ನಂತರ ಬರುತ್ತೇನೆ. ಸಾರ್ವಜನಿಕ ಜೀವನದಲ್ಲಿ ಒಂದು ಮಹತ್ವದ ವಿಷಯವನ್ನು ಎಲ್ಲರೂ ತಿಳಿಯಬೇಕು. ಖಾಸಗೀ ಜೀವನದಲ್ಲಿ ನೋವು ಕಷ್ಟ ಗೊತ್ತಿದ್ದರೆ, ಅಂಥವರು ಸಾಮಾನ್ಯ ಜನಜೀವನದಿಂದ ದೂರ ಆಗದೇ ಹೋದರೆ ಮಾತ್ರ ಕೆಲವು ವಿಚಾರಗಳಲ್ಲಿ ಸ್ಪಷ್ಟವಾಗಿ, ನೈಜ ರೀತಿಯಲ್ಲಿ ಅವರು ಪ್ರತಿನಿಧಿಸುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಜೀವನದ ಶೈಲಿ ಬದಲಾವಣೆ ಆಗಿದ್ದರೆ, ನಾವು ಜನ ಸಾಮಾನ್ಯರಿಂದ ಬಹಳ ದೂರ ಹೋಗಿದ್ದರೆ ಅಥವಾ ನಮ್ಮ ವರ್ಗ ಬದಲಾವಣೆ ಆಗಿದ್ದರೆ, ಇಂಥ ವಿಚಾರಗಳನ್ನು ನಾವು ಪ್ರಸ್ತಾಪಿಸಿದರೆ, ನಾವು ಒಂದು ರೀತಿ ಏನೋ ಮಾಡಬೇಕು ಎನ್ನುವ ಹಾಗೆ, ಬಾಡಿಗೆ ಕೆಲಸ ಮಾಡಿದ ಹಾಗೆ ಇರುತ್ತದೆಯೇ ಹೊರತು ನಮ್ಮ ಸ್ಪಷ್ಟವಾದ ಅಭಿಪ್ರಾಯವನ್ನು ತಿಳಿಸುವುದಕ್ಕಾಗುವುದಿಲ್ಲ. ಮಾನ್ಯ ರತ್ನಾಕರ್ ಅವರೇ. ಶ್ರೀಮಂತರ ಮನೆಗಳಲ್ಲಿ ಯಾರಾದರೂ ಕಾಲವಾದರೆ, ಅವರಿಗೆ ದುಃಖ ಗೊತ್ತಿಲ್ಲದ ಕಾರಣ ಅವರ ಮನೆಯಲ್ಲಿ ಯಾರೂ ಅಳುವುದಿಲ್ಲ, ಅಲ್ಲಿಗೆ ಹೆಣ ನೋಡಲು ಬಂದ ಜನರೂ ಅಳುವುದಿಲ್ಲ. ಕಾರಣ ಅವರಿಗೂ ಇವರಿಗೂ ಸಂಪರ್ಕ ಇದ್ದರೆ ತಾನೇ? ಆಗ ಜನರನ್ನು ಮಜೂರಿ ಕೊಟ್ಟು ಕರೆಯಿಸಿಕೊಂಡು ಬಂದು ಅಳಿಸುತ್ತಾರೆ.

ಶ್ರೀ ಪಟವರ್ಧನ ರತ್ನಾಕರ್.—ನಮ್ಮ ಕಡೆಯೂ ಶ್ರೀಮಂತರು ಇದ್ದಾರೆ. ಅವರೂ ಅಳುತ್ತಾರೆ ಸ್ವಾಮಿ. ನಿಮ್ಮ ಕಡೆ ಹೇಗೋ ಕಾಣೆ.

ಶ್ರೀ ರಮೇಶ್ ಕುಮಾರ್.—ನಮ್ಮ ಕೋಲಾರಕ್ಕೆ ಬನ್ನಿ ತೋರಿಸುತ್ತೇನೆ. ಇವರು ಬರಗಾಲದ ಬಗ್ಗೆ ಮಾತನಾಡುವುದಕ್ಕೆ ಜನರನ್ನು ಇಟ್ಟುಕೊಂಡಿದ್ದರೆ ಚೆನ್ನಾಗಿ ಇರುತ್ತಿತ್ತೋ ಏನೋ, ಅಷ್ಟು ಅವಾಸ್ತವಿಕವಾದ ಅಷ್ಟೊಂದು ಟೊಳ್ಳು ಭಾಷಣವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮಾಡಿದರು. ಆ ಒಂದು ಸ್ಥಾನದಲ್ಲಿ ಹಿಂದೆ ಮಾನ್ಯ ಶಿವಪ್ಪನವರು ಕುಳಿತಿದ್ದರು, ಮಾನ್ಯ ಎಚ್.ಡಿ. ದೇವೇಗೌಡರು ಕುಳಿತಿದ್ದರು.

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ರಮೇಶ್‌ಕುಮಾರ್ ಅವರೇ, ಯಾರು ಯಾರು ಎಲ್ಲೆಲ್ಲಿ ಕುಳಿತಿದ್ದರು ಹಾಗೂ ಅವರ ಚರಿತ್ರೆ ಏನು ಎನ್ನುವುದರ ಕಡೆಗೆ ಚರ್ಚೆಯನ್ನು ತೆಗೆದುಕೊಂಡು ಹೋಗದೇ ಇಂತಹ ಭೀಕರ ಭಯಂಕರ ಬರಗಾಲದ ಪರಿಸ್ಥಿತಿ ಇರುವಾಗ ವ್ಯವಸ್ಥಿತ ರೀತಿಯಲ್ಲಿ ತಾವು ಚರ್ಚೆ ಮಾಡುತ್ತೀರೆಂದು ತಿಳಿದಿದ್ದೇವೆ. ಈ ಒಂದು ಚರ್ಚೆಯಲ್ಲಿ ರಾಜಕೀಯ ಬೆರೆಸಿಕೊಂಡು ವಿಷಯವನ್ನು ವಿಷಯಾಂತರ ಮಾಡಬೇಡಿ ಎಂದು ನಾನು ಕೇಳುತ್ತೇನೆ.

(ಗೊಂದಲ)

ಶ್ರೀ ಪಟವರ್ಧನ ರತ್ನಾಕರ್.—ಅವರು ಕೊಂಕಣ ಸುತ್ತಿಕೊಂಡು ಮೈಲಾರಕ್ಕೆ ಬರುತ್ತಾರೆ. ಅವರು ನೇರವಾಗಿ ಮಾತನಾಡುವುದಿಲ್ಲ.

ಶ್ರೀ ರಮೇಶ್ ಕುಮಾರ್.—ಮಾನ್ಯ ಉಮರಬ್ಬ ಅವರೇ, ತಾವು ಮಾನ್ಯ ಬಂಗಾರಪ್ಪನವರ ಭಾಷಣವನ್ನು ಕೇಳಿದಿರೋ ಇಲ್ಲವೋ ಗೊತ್ತಿಲ್ಲ. ನಾವು ಆಡಳಿತ ಪಕ್ಷದಲ್ಲಿ ಸೇರಿದ್ದೇವೆ. ಇವೊತ್ತು ದೇಶದಲ್ಲಿ ಬರಗಾಲದ ಪರಿಸ್ಥಿತಿ ಬಂದಿದೆ. ನಾವು ಇಲ್ಲಿ ಬರಗಾಲದ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಮಾನ್ಯ ಬಂಗಾರಪ್ಪನವರು ಆ ರೀತಿ ಮಾತನಾಡಿಲ್ಲದಿದ್ದರೆ ನಾವು ಈ ರೀತಿ ಮಾತನಾಡುವುದು ತಪ್ಪು ಆಗುತ್ತದೆ. ಅವರು ಮಾತನಾಡುವಾಗ ರಾಜಕೀಯವನ್ನು ಬಿಟ್ಟು ಬೇರೆ ಮಾತನಾಡಲಿಲ್ಲ ಮಾನ್ಯ ಉಮರಬ್ಬನವರು ಈ ರೀತಿ ಹೇಳಿದರೆ ನಾನು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ? ವಿಧಾನಸಭೆ ''ಒನ್‌ವೇ ಟ್ರಾಫಿಕ್'' ಅಲ್ಲ. ಕೊಡುವುದಕ್ಕೂ ತಯಾರು ಇರಬೇಕು. ಕೊಟ್ಟ ಮೇಲೆ ತೆಗೆದುಕೊಳ್ಳುವುದಕ್ಕೂ ತಯಾರು ಇರಬೇಕು. ಸುಮಾರು ೪ ಗಂಟೆಗೂ ಮೀರಿ ನಿಮ್ಮ ನಾಯಕರು ಏನೇನೆಲ್ಲಾ ಮಾತನಾಡಿದ್ದಾರೆ ಎಂಬುದನ್ನು ನಾವು ಸಾವಧಾನವಾಗಿ ಕೇಳಿದ್ದೇವೆ ನಾನು ಅವರಷ್ಟು ಹೇಳುವುದಕ್ಕೆ ಶಕ್ತನಲ್ಲ. ನನಗೆ ಆ ಒಂದು ಶಕ್ತಿ ಬರಬೇಕಾದರೆ ಇನ್ನೂ ಕಾಲಬೇಕಾಗುತ್ತದೆ.

ಶ್ರೀ ಬಿ. ಎ. ಉಮರಬ್ಬ.—ಅಧ್ಯಕ್ಷಿಣಿಯವರೇ, ಮಾನ್ಯ ಸದಸ್ಯರು... .....

(ಗೊಂದಲ)

ಛೇರ್ಮನ್.—ರನ್ನಿಂಗ್ ಕಾಮೆಂಟರಿ ಮಾಡಬೇಡಿ. ನಿಮಗೆ ಮಾತನಾಡಲು ಅವಕಾಶ ಕೊಟ್ಟಾಗ ಮಾತನಾಡಿ. ಇಬ್ಬರ ಮಧ್ಯೆ ಚರ್ಚೆ ಬೇಡ.

(ಗೊಂದಲ)

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷಿಣಿಯವರೇ, ಅವರು ಆ ರೀತಿ.........

ಛೇರ್ಮನ್.—ಭಾಷಣಕಾರರು ಮಾತನಾಡುವಾಗ ಮಧ್ಯೆ ಬೇರೆಯವರು ಮಾತನಾಡಬೇಡಿ.

(ಗೊಂದಲ)

ಶ್ರೀ ಬಿ. ಎ. ಉಮರಬ್ಬ.—ಅವಕಾಶ ಇದ್ದರಲ್ಲವೇ ಮಾತನಾಡುವುದು.

ಛೇರ್ಮನ್.—ನಿಮಗೆ ಮಾತನಾಡುವುದಕ್ಕೆ ಅವಕಾಶ ಬಂದಾಗ ಸಂಪೂರ್ಣ ಮಾತನಾಡಿ. ಅವರು ಮಾತನಾಡುವಾಗ ನೀವು ಮಧ್ಯೆ ಮಾತನಾಡಬೇಡಿ.

೨-೦೦ ಪಿ. ಎಂ.

ಶ್ರೀ ಪಟಮಕ್ಕಿ ರತ್ನಾಕರ್.—ಈ ವಿಷಯವನ್ನು ಅವರು ಹೇಳುತ್ತಾರೆಂದು ನಾವು ನಿರೀಕ್ಷಣೆ ಮಾಡಿರಲಿಲ್ಲ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ರಮೇಶ ಕುಮಾರ್‌ರವರು ಟೊಳ್ಳು ಭಾಷಣವನ್ನು ಮಾನ್ಯ ವಿರೋಧಪಕ್ಷದ ನಾಯಕರು ಮಾಡಿದರು ಎಂದು ಹೇಳಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಬಂಗಾರಪ್ಪನವರು "ಕೋಳಿ" ಭಾಷಣವನ್ನು ಮಾಡಿದರು ಎಂದು ಮಾನ್ಯ ರಮೇಶ್ ಕುಮಾರ್‌ರವರು ಹೇಳಿದರೆಂದು ಮಾನ್ಯ ಸದಸ್ಯರಾದ ಸ್ವಾಮಿರಾವ್‌ರವರು ಹೇಳಿದ್ದಾರೆ. ಅದು ರೆಕಾರ್ಡ್‌ಗೆ ಹೋಗಿದೆ. "ಕೋಳಿ ಭಾಷಣ" ಎಂಬ ಪದವನ್ನು ರೆಕಾರ್ಡ್‌ನಿಂದ ತೆಗೆಸಬೇಕು. ರಮೇಶ ಕುಮಾರ್‌ರವರು ಹೇಳಿದ್ದು "ಟೊಳ್ಳು ಭಾಷಣ" ಎಂದು.

ಶ್ರೀ ರಮೇಶ್ ಕುಮಾರ್.—ನೀವು ಹೇಳಿದ್ದೆಲ್ಲಾ ಮುಗಿಯಿತೆ ? ಅದು ಕೋಳಿ ಭಾಷಣವೋ, ನಾಯಿ ಭಾಷಣವೊ, ಈಗ ಅದು ಬೇಡ. ನಾನು ಹೇಳಿದ್ದು ಟೊಳ್ಳು ಭಾಷಣ ಎಂದು. ನಾನು ಹೇಳುವುದನ್ನು ತಾವು ದಯವಿಟ್ಟು ಕೇಳಬೇಕು. ಮಾನ್ಯ ಸ್ವಾಮಿರಾಯರಿಂದ ನಾನು ಏನನ್ನೂ ಕಲಿಯಬೇಕಾಗಿಲ್ಲ. ಅವರಿಗಿಂತಲೂ ಮೊದಲೇ ನಾನು ಈ ಸದನಕ್ಕೆ ಸದಸ್ಯನಾಗಿ ಬಂದಿದ್ದೇನೆ. ಅವರೂ ಮತ್ತು ಅವರ ನಾಯಕರೂ ಸ್ವಲ್ಪ ಮಾತನಾಡಿದರೂ ಸಾಕು ಹಳಿ ತಪ್ಪುತ್ತಾರೆ. ಆದರೆ ನಾವು ಇಡೀ ದಿವಸ ಮಾತನಾಡಿದರೂ ನಮಗೆ ಏನೂ ಆಗುವುದಿಲ್ಲ. ನಿನ್ನೆಯ ದಿವಸ ಮಾನ್ಯ ವಿರೋಧಪಕ್ಷದ ನಾಯಕರಾದ ಬಂಗಾರಪ್ಪನವರು ಮಾತನಾಡುತ್ತಾ.........

ಶ್ರೀ ರಾಜವರ್ಧನ್.—ಛೇರ್ಮನ್‌ರವರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್. ಈ ಸದನದಲ್ಲಿ ಮಾನ್ಯ ಸದಸ್ಯರು ಇನ್ನೊಬ್ಬರ ರೀತಿ ಮಾತನಾಡಬೇಕು ಎಂದು ಏನಾದರೂ ನಿಯಮ ಇದೆಯೆ ? ಅವರು ತಮ್ಮ ಮನಸ್ಸಿನ ಭಾವನೆಗಳನ್ನು ತಮ್ಮದೇ ಆದ ರೀತಿಯಲ್ಲಿ ನಿಯಮಗಳನುಸಾರವಾಗಿ ವ್ಯಕ್ತಗೊಳಿಸಲು ಅವರಿಗೆ ಸ್ವಾತಂತ್ರ್ಯ ಇಲ್ಲವೆ ?

ಛೇರ್ಮನ್.—ಅವರದೇ ಆದ ರೀತಿಯಲ್ಲಿ ಮಾತನಾಡಲು ಸ್ವಾತಂತ್ರ್ಯ ಇದೆ.

ಶ್ರೀ ರಮೇಶ್ ಕುಮಾರ್.—೧೯೮೦ನೇ ಇಸವಿಯಲ್ಲಿ ನನ್ನ ಕ್ಷೇತ್ರದಲ್ಲಿ ಬಹಳ ಧಾರುಣವಾದ ಪರಿಸ್ಥಿತಿ ಇದ್ದಾಗ ಮಾನ್ಯ ವಿರೋಧ ಪಕ್ಷದ ನಾಯಕರಾದ ಬಂಗಾರಪ್ಪನವರು ಆಗ ಕಂದಾಯ ಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ಅವರು ನನ್ನ ಕ್ಷೇತ್ರಕ್ಕೆ ಬಂದಿದ್ದರು. ಅದೇರೀತಿ, ಇತ್ತೀಚೆಗೆ ಅವರು ವಿರೋಧ ಪಕ್ಷದ ನಾಯಕರಾದ ಮೇಲೂ ಕೂಡ ನನ್ನ ಕ್ಷೇತ್ರಕ್ಕೆ ಬಂದಿದ್ದಾರೆ. ಅವರು ನನ್ನ ಕ್ಷೇತ್ರಕ್ಕೆ ಬಂದಿದ್ದಾಗ ಸುಮಾರು ರಾತ್ರಿ ೧೦ ಗಂಟೆ ಆಗಿತ್ತು ಎಂದು ಕಾಣಿಸುತ್ತದೆ. ಬಂದವರು ಅಲ್ಲಿ ೧೦ ನಿಮಿಷ

ಕಾಲ ಇದ್ದರು. ಆ ಸಂದರ್ಭದಲ್ಲಿ ಅವರು ತಹಸೀಲ್ದಾರ್ ಮತ್ತಿತರ ಕೆಲವು ಅಧಿಕಾರಿಗಳನ್ನು ಮಾತನಾಡಿಸಿಕೊಂಡು ಬಂದರು. ಅದೇರೀತಿ ಇತ್ತೀಚೆಗೆ ನನ್ನ ಕ್ಷೇತ್ರಕ್ಕೆ ಅವರು ಭೇಟಿ ನೀಡಿದಾಗ ಸುಮಾರು ೩ ಗಂಟೆ ಸಮಯ. ಬಂದವರೇ ೧೫ ನಿಮಿಷಕಾಲ ಅಲ್ಲಿಯ ಕೆಲವರ ಹತ್ತಿರ ಮಾತನಾಡಿಕೊಂಡು ಈ ಸರ್ಕಾರದವರು ಜನತಾ ಬಟ್ಟೆಯನ್ನು ಏನು ಕೊಟ್ಟಿದ್ದಾರೆ ಅದನ್ನು ಹಾಕಿಕೊಂಡರೆ ಮೈಯೆಲ್ಲಾ ಕಾಣಿಸುತ್ತದೆ ಎಂದು ಮಾತನಾಡಿಕೊಂಡು ಹೊರಟರು. ಸ್ವಾಮಿ, ನನಗಾದರೂ ಅನ್ನಿಸುತ್ತದೆ, ಇವರು ಯಾವ ಉದ್ದೇಶಕ್ಕೋಸ್ಕರ ನನ್ನ ಕ್ಷೇತ್ರಕ್ಕೆ ಭೇಟಿ ನೀಡಿದ್ದರು ಎಂದು. ಬರಗಾಲದ ಬಗ್ಗೆ ಇವರು ಒಂದು ಮಾತನ್ನೂ ಅಲ್ಲಿ ಮಾತನಾಡಿಲ್ಲ.

ಮಾನ್ಯ ಸಭಾಧ್ಯಕ್ಷಿಣಿಯವರೆ, ನಾನೂ ಕೂಡ ಹಿಂದೆ ಕಾಂಗ್ರೆಸ್ ಪಕದಲ್ಲಿದ್ದವನು. ನಾನು ಅಲ್ಲಿಂದ ಬಂದು ಆಡಳಿತ ಪಕ್ಷಕ್ಕೆ ಸೇರಿಕೊಂಡಿದ್ದೇನೆ. ಇದನ್ನು ಹೇಳಿಕೊಳ್ಳುವುದರಲ್ಲಿ ನನಗೆ ನಾಚಿಕೆ ಏನೂ ಇಲ್ಲ. ಜನತಾ ಪಕ್ಷದ ಕೆಲವು ಜನರು ಕಾಂಗ್ರೆಸ್‌ನವರ ಹತ್ತಿರ ಹೇಳಿದಂತೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರೂ ಕೂಡ ಹಲವರು ನನ್ನ ಹತ್ತಿರ ಬಂದು ಏನೇನೋ ಹೇಳಿದ್ದಾರೆ, ಆದರೆ ಅದನ್ನೆಲ್ಲಾ ಮನಸ್ಸಿಗೆ ಹಚ್ಚಿಕೊಳ್ಳಬೇಡಿ ಎಂದು ನಾನು ಅವರಿಗೆ ಹೇಳಿದ್ದೇನೆ......

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ರಮೇಶ್ ಕುಮಾರ್ ರವರು ನಮ್ಮ ಪಕ್ಷದ ನಾಯಕರಾದ ಬಂಗಾರಪ್ಪನವರ ಭಾಷಣಕ್ಕೆ ಉತ್ತರವನ್ನು ಕೊಡುತ್ತಿದ್ದಾರೋ ಅಥವಾ ಬರಗಾಲದ ಬಗ್ಗೆ ಅವರು ಭಾಷಣ ಮಾಡುತ್ತಿದ್ದಾರೋ ? ಸದನದ ಮುಂದೆ ಬರಗಾಲದ ಬಗ್ಗೆ ಬಹಳ ಗಂಭೀರ ವಿಷಯ ಚರ್ಚೆಗೆ ಬಂದಿರುವಾಗ ಅದರ ಬಗ್ಗೆ ಮಾತನಾಡಿ ತಮ್ಮ ಸಲಹೆಗಳೇನಾದರೂ ಇದ್ದರೆ ಅದನ್ನು ಕೊಡುವುದನ್ನು ಬಿಟ್ಟು ಬಂಗಾರಪ್ಪನವರ ಭಾಷಣಕ್ಕೆ ಉತ್ತರ ಕೊಡುತ್ತಿರುವುದು ಸರಿಯಲ್ಲ.

ಚೇರ್ಮನ್.—ಅವರು ಮಾತನಾಡುವುದಕ್ಕೆ ತಾವು ಬಿಡಿ. ಅವರು ಬರಗಾಲದ ಬಗ್ಗೆ ಮಾತನಾಡುತ್ತಾರೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಅವರು ಬರಗಾಲದ ಬಗ್ಗೆ ಮಾತನಾಡುವುದನ್ನು ಬಿಟ್ಟು ಬಂಗಾರಪ್ಪನವರು ಹಾಗೆ ಹೇಳಿದರು, ಬಂಗಾರಪ್ಪನವರು ಹೀಗೆ ಹೇಳಿದರು ಎಂದು ಹೇಳುತ್ತಿದ್ದಾರೆ.

ಶ್ರೀ ರಮೇಶಕುಮಾರ್.—ಮಾನ್ಯ ಅಧ್ಯಕ್ಷಿಣಿಯವರೆ, ಕಾಂಗ್ರೆಸ್ ಪಕ್ಷದವರು ಮಾತನಾಡುವಾಗ ಲೆಲ್ಲಾ ಕೇಂದ್ರ ಸರ್ಕಾರವನ್ನು ನೀವು ಅಭಿನಂದಿಸಿಲ್ಲ ಕೇಂದ್ರ ಸರ್ಕಾರವನ್ನು ನೀವು ಅಭಿನಂದಿಸಿಲ್ಲ, ಕೇಂದ್ರದವರು ನಿಮಗೆ ಬಹಳಷ್ಟು ಸಹಾಯ ಮಾಡಿದ್ದಾರೆ, ಆದರೂ ನಿಮ್ಮ ಮುಖ್ಯ ಮಂತ್ರಿಗಳು ಅವರನ್ನು ಟೀಕೆ ಮಾಡುತ್ತಾರೆ ಎಂದು ಹೇಳುತ್ತಿರುತ್ತಾರೆ. ಆದ್ದರಿಂದ ನಾನಾದರೂ ಅವರಿಗೆ ಹೇಳುತ್ತೇನೆ, ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಅವರನ್ನು ಅಭಿನಂದಿಸದಿದ್ದರೂ ಅವರು ಸಂಭದ್ರವಾಗಿದ್ದಾರೆ ಅವರ ಬಗ್ಗೆ ನಾವು ವಕಾಲತ್ತನ್ನು ಹಾಕದಿದ್ದರೂ ಪರವಾಗಿಲ್ಲ ಅವರಿಗೆ ಯಾವುದೇ ರೀತಿಯಲ್ಲೂ ಧಕ್ಕೆ ಇಲ್ಲ. ಅವರ ಪರ ವಕಾಲತ್ತನ್ನು ಹಾಕುವುದಕ್ಕೆ ನಾವೇನೂ ಏಜೆಂಟ್ ಗಿರಿಯನ್ನು ತೆಗೆದುಕೊಂಡಿಲ್ಲ ರಾಜ್ಯದ ಆಡಳಿತ ಸೂತ್ರವನ್ನು ನಮ್ಮ ಜನತಾ ಸರ್ಕಾರ ಹಿಡಿದುಕೊಂಡು ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದೆ. ನಮ್ಮ ರಾಜ್ಯಕ್ಕೆ ಎಲ್ಲೆಲ್ಲಿ ಕೇಂದ್ರ ಸರ್ಕಾರದಿಂದ ಸಹಾಯ ಬಂದಿದೆ ಅಲ್ಲೆಲ್ಲಾ ನಾವು ಅವರನ್ನು ಅಭಿನಂದಿಸಿಯೇ ಇದ್ದೇವೆ. ಆದರೆ ನೀವು ಎಷ್ಟು ಸಾರಿ ಕೇಂದ್ರದವರನ್ನು ಅಭಿನಂದಿಸಿದ್ದೀರಿ ಎಂಬುದನ್ನು ಹೇಳುತ್ತೀರಾ ? ಕಾಂಗ್ರೆಸ್ ಪಕ್ಷದ ಸದಸ್ಯರು ಮಾತುಮಾತಿಗೂ ಅಲ್ಲಿ ದುರುಪಯೋಗವಾಗಿದೆ, ಇಲ್ಲಿ ದುರುಪಯೋಗವಾಗಿದೆ ಎಂದು ಹೇಳುತ್ತಾರೆಯೇ ಹೊರತು, ನಿರ್ದಿಷ್ಟವಾಗಿ ಇಂಥ ಕಡೆ ಇಂತಿಷ್ಟು ದುರುಪಯೋಗ ಆಗಿದೆಯೆಂದು ಏನಾದರೂ ಲಿಖಿತ ಮೂಲಕವಾಗಿ ನಿಮ್ಮಲ್ಲಿ ಯಾರಾದರೂ ದೂರು ಕೊಟ್ಟಿದ್ದೀರಾ ? ನೀವು ನಿರ್ದಿಷ್ಟವಾಗಿ ದೂರು ಕೊಟ್ಟಿದ್ದು ಅದರ ಮೇಲೆ ಸರ್ಕಾರದವರು ಕ್ರಮ ತೆಗೆದುಕೊಂಡಿಲ್ಲದಿದ್ದರೆ ಆಗ ನೀವು ಹೇಳುವ ಮಾತನ್ನು ಒಪ್ಪಿಕೊಳ್ಳುತ್ತೇವೆ. ವಿರೋಧಪಕ್ಷದ ನಾಯಕರು ಮಾತನಾಡುತ್ತಾರೆಂದರೆ ಆಡಳಿತಪಕ್ಷಕ್ಕೆ ಹೆದರಿಕೆ ಆಗುವಂತಿರಬೇಕು. ಅಂಕಿಅಂಶಗಳ ಆಧಾರವನ್ನು ಇಟ್ಟುಕೊಂಡು ಜವಾಬ್ದಾರಿಯುತವಾಗಿ ಮಾತನಾಡಬೇಕು. ಬರಗಾಲ ಪ್ರದೇಶದಲ್ಲಿ ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಖರ್ಚುಮಾಡಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿರುತ್ತೇವೆ ಅದರಂತೆ ಖರ್ಚು ಮಾಡುತ್ತಾರೆ. ಆ ಹಣ ಸದುಪಯೋಗವಾಗಿದೆಯೆ ? ಅಥವಾ ದುರುಪಯೋಗ ಆಗಿದೆಯೇ ಎಂಬು

ದನ್ನು ಪರಿಶೀಲಿಸುವ ಅಧಿಕಾರವನ್ನು ನಮಗೆ ಸರ್ಕಾರ ಕೊಟ್ಟಿದೆ. ಇಷ್ಟೆಲ್ಲಾ ಇದ್ದರೂ ನೀವು ಮಾತ ನಾಡುವಾಗ ಅಲ್ಲಿ ದುರುಪಯೋಗ ಆಗಿದೆ, ಇಲ್ಲಿ ದುರುಪಯೋಗ ಆಗಿದೆ, ಬರಗಾಲ ಕಾಮಗಾರಿ ಸರಿಯಾಗಿ ಆಗಿಲ್ಲ ಎಂದು ಸಾಕ್ಷ್ಯಾಧಾರವಿಲ್ಲದೆ ಹೇಳುವುದು ಸರಿಯಲ್ಲ. ನಿರ್ದಿಷ್ಟವಾದ ಪ್ರಕರಣಗಳನ್ನು ಕೊಟ್ಟು ಇದರಲ್ಲಿ ಇಂತಿಷ್ಟು ಹಣ ದುರುಪಯೋಗ ಆಗಿದೆ ಎಂದು ಲಿಖಿತಮೂಲಕ ಕೊಟ್ಟರೆ ಅದನ್ನು ಒಪ್ಪಿಕೊಳ್ಳಬಹುದು. ಅದುಬಿಟ್ಟು ಏಕಾಏಕಿ ಈ ಸದನಕ್ಕೆ ಬಂದು ಬರಗಾಲ ಕಾಮಗಾರಿ ಸರಿಯಾಗಿ ಆಗಿಲ್ಲ, ಕೊಟ್ಟ ಹಣವೆಲ್ಲಾ ದುರುಪಯೋಗವಾಗಿದೆ ಎಂದು ಹೇಳುವುದು ಸರಿಯಲ್ಲ......

ಶ್ರೀ ಬಿ. ಎ. ಉಮರಬ್ಬ.—ನಿಮ್ಮ ಕ್ಷೇತ್ರದ ಲೋಕಸಭಾ ಸದಸ್ಯರಾದ ವೆಂಕಟೇಶ್‌ರವರನ್ನು ನೀವು ಕೇಳಿ.

ಛೇರ್ಮನ್.—ಮಾನ್ಯ ಸದಸ್ಯರು ಮಾತನಾಡುವಾಗ ಬೇರೆ ಸದಸ್ಯರು ಮಧ್ಯೆ ಮಧ್ಯೆ ಮಾತನಾಡ ಬಾರದು.

ಶ್ರೀ ರಮೇಶ್‌ಕುಮಾರ್.—ಮಾತನಾಡಲಿ ಬಿಡಿ. ಅವರು ಮಧ್ಯೆ ಮಧ್ಯೆ ಮಾತನಾಡುತ್ತಿದ್ದರೆ ನನಗೂ ಸ್ವಲ್ಪ ಟೈಂ ಸಿಗುತ್ತದೆ.

ಶ್ರೀ ವೀರಣ್ಣ.—ಗುಬ್ಬಿ ಕ್ಷೇತ್ರದ ಶಾಸಕರಾದ ಶಿವನಂಜಪ್ಪನವರನ್ನು ಕೇಳಿ, ಬರ ಪರಿಹಾರ ಕಾಮಗಾರಿ ನನ್ನ ಕ್ಷೇತ್ರದಲ್ಲಿ ಬಹಳ ಚೆನ್ನಾಗಿ ಆಗಿದೆ ಎಂದು ಅವರೇ ಒಪ್ಪಿಕೊಂಡಿದ್ದಾರೆ. ಅದು ಪತ್ರಿಕೆ ಯಲ್ಲೂ ಕೂಡ ಬಂದಿದೆ. ಅದನ್ನು ಮಾನ್ಯ ಎದುರು ಪಕ್ಷದ ಸದಸ್ಯರು ಪರಾಂಬರಿಸಿದರೆ ಗೊತ್ತಾಗು ತ್ತದೆ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಸಚಿವರಾದ ಬಸವಣ್ಣಪ್ಪನವರು ಏನು ಹೇಳಿದ್ದಾರೆಂಬು ದನ್ನು ನೋಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಶಿಕಾರಿಪುರದ ಶಾಸಕನಾಗಿ ನಾನು ಆ ವಿಚಾರವನ್ನು ಹೇಳು ತ್ತೇನೆ. ಮಾನ್ಯ ಬಸವಣ್ಣಪ್ಪನವರು ಏನು ಹೇಳಿದ್ದಾರೆ ಎಂಬ ಬಗ್ಗೆ ಚರ್ಚೆಮಾಡಬೇಕಾದರೆ ೧ ಗಂಟೆ ಕಾಲ ಅವಕಾಶ ಕೊಡಬೇಕು.

ಶ್ರೀ ರಮೇಶ್‌ಕುಮಾರ್.—ಇತ್ತೀಚೆಗೆ ಮಾನ್ಯ ಬೂಟಾಸಿಂಗ್‌ರವರು ನಮ್ಮ ರಾಜ್ಯಕ್ಕೆ ಭೇಟಿ ನೀಡಿದಾಗ ನಮ್ಮ ಮಂತ್ರಿಗಳು ಹೋಗಿ ಮನವಿ ಮಾಡಿಕೊಂಡಿದ್ದಾರೆ. ದೆಹಲಿಗೆ ಹೋಗಿ ಅಲ್ಲಿಯ ಸಚಿವರ ಕಛೇರಿಯ ಬಾಗಿಲುಬಾಗಿಲಿಗೂ ಅಲೆದಿದ್ದಾರೆ, ಅಷ್ಟೇ ಅಲ್ಲ ಕರ್ನಾಟಕದ ಮುಖ್ಯ ಮಂತ್ರಿ ಗಳು, ಬೇರೆ ಮಂತ್ರಿಗಳು ಕೇಂದ್ರ ಸರ್ಕಾರದ ಮೊರೆ ಹೋಗಿದ್ದಾರೆ. ಕೇಂದ್ರದ ಮಂತ್ರಿಗಳ ಮುಂದೆ ಮೊಣಕಾಲೂರಿ ಪ್ರಾರ್ಥನೆ ಮಾಡಿಕೊಂಡಿದ್ದಾರೆ. ಆದರೂ ಏನೂ ಪ್ರಯೋಜನ ಆಗಿಲ್ಲ. ಮಾನ್ಯ ಬೂಟಾಸಿಂಗ್‌ರವರು ಬಂದು ವೈಮಾನಿಕ ವೀಕ್ಷಣೆ ಮಾಡಿಕೊಂಡು ಹೊರಟುಹೋದರು. ನಮ್ಮ ರಾಜ್ಯಕ್ಕೆ ಬರಗಾಲ ಪರಿಹಾರಕ್ಕೆ ನೆರವು ನೀಡುತ್ತೇವೆಂದು ಹೇಳಿಹೋಗಿದ್ದಾರೆ, ಅದನ್ನು ನಾವು ಕಾದು ನೋಡಬೇಕಾಗಿದೆ. ಈ ಬರಗಾಲದ ಭೀಕರ ಪರಿಸ್ಥಿತಿಯನ್ನು ನಾವು, ನೀವೆಲ್ಲರೂ ಪಕ್ಷಾತೀತವಾಗಿ ನೋಡಬೇಕು. ಇವೊತ್ತು ರಾಜ್ಯದಲ್ಲಿ ದನಕರುಗಳು ಹೊಟ್ಟೆಗಿಲ್ಲದೆ ಸತ್ತುಹೋಗುತ್ತಿವೆ. ನಮ್ಮ ರಾಜ್ಯದಲ್ಲಿ ಬರಗಾಲ ಬಹಳ ಭೀಕರವಾಗಿದೆ, ನೆರವು ನೀಡಬೇಕೆಂದು ಕೇಂದ್ರದವರಲ್ಲಿ ಪ್ರಾರ್ಥಿಸಿ ಕೊಳ್ಳುವವರೆಗೂ ಅಲ್ಲಿಂದ ಯಾರೂ ಕೂಡ ಬರಲಿಲ್ಲ.

ಈ ರೀತಿ ನಾವು ಮಾತನಾಡಿದರೆ ಇದು ರಾಜಕಾರಣ ಆಗುತ್ತದೆಯೋ ನಮ್ಮ ನಾಯಕರಲ್ಲಿ ಹೇಳಿಕೊಂಡಿ ದ್ದೇವೆ. ಈ ಒಂದು ತೀವ್ರವಾದಂತಹ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ನಾವು ಯಾವ ರೀತಿ ಕಷ್ಟ ಪರಿಸ್ಥಿತಿಯಲ್ಲಿ ಮಕ್ಕಳನ್ನು ಸಾಕುವುದಕ್ಕೆ ಕೆಲವು ತಾಯಂದಿರು ಮೈ ಮಾರಿಯಾದರೂ ಮಕ್ಕಳನ್ನು ಸಾಕುತ್ತಾರೆ ಆ ಪರಿಸ್ಥಿತಿ, ಆ ಒಂದು ಸನ್ನಿವೇಶ ಈಗ ಇದೆ. ನಮಗೆ ಲಜ್ಜೆ ಪ್ರಶ್ನೆಯೇ ಇಲ್ಲ. ಮಾನ ಮರ್ಯಾದೆ ಇಲ್ಲ, ಯಾರ ಕಾಲು ಬೇಕಾದರೂ ಹಿಡಿಯುತ್ತೇವೆ. ಜನರಿಗೆ ನಂಬಿಕೆಗೆ ದ್ರೋಹ ಮಾತ್ರ ಮಾಡುವುದಿಲ್ಲ. ದನಕರುಗಳನ್ನು ಮೇವಿಲ್ಲದೆ ಸಾಯುವುದಕ್ಕೆ ಬಿಡುವುದಿಲ್ಲ. ಶಕ್ತಿ ಮೀರಿ ಪ್ರಯತ್ನ ಮಾಡುತ್ತೇವೆ. ಒಂದು ವಿಷಯವಾಗಿ ಕಂಪ್ಲೇಂಟ್ ಕೊಟ್ಟರು. ಯಾವುದೋ ಒಂದು ಕೆಲಸಕ್ಕೆ ಮೂರು ಲಕ್ಷ ರೂಪಾಯಿಗಳ ಬಟವಾಡೆ ಮಾಡಿದ್ದಾರೆ ಆದರೆ ಅಲ್ಲಿ ಹತ್ತು ನಯಾ ಪೈಸೆಯ ಕೆಲಸವೂ ಆಗಿಲ್ಲ ವೆಂದು ಕಂಪ್ಲೇಂಟ್ ಕೊಟ್ಟಿದ್ದಾರೆ. ಕೋಲಾರಕ್ಕೆ ಡಿ.ಆರ್.ಡಿ.ಎಸ್, ತನಿಖಾಧಿಕಾರಿಗಳನ್ನು ಕಳುಹಿ

ಸುವಂತೆ ಅರ್ಜಿ ಕೊಟ್ಟಿದ್ದಾರೆ. ಆದರೆ ಅಲ್ಲಿಗೆ ಮಂಜೂರಾಗಿರುವಂಥ ಹಣ ಹದಿನಾರು ಸಾವಿರ ರೂಪಾಯಿಗಳು ಮಾತ್ರ. ತನಿಖಾಧಿಕಾರಿಗಳು ಬಂದಾಗ ಅರ್ಜಿ ಕೊಟ್ಟಂಥವರು ಸಾಬೀತು ಮಾಡಲು ಚೈತನ್ಯ ಅವರಿಗೆ ಇರಲಿಲ್ಲ. ಪಿ.ಡಬ್ಲ್ಯೂಡಿ. ಇರಿಗೇಷನ್ ಇಲಾಖೆಗಳಲ್ಲಿ ಅರ್ಜಿಗಳನ್ನು ಕೊಟ್ಟರು. ವಿಜಿಲೆನ್ಸ್ ತಂಡ ತಂಡವಾಗಿ ಅಲ್ಲಿ ಇರತಕ್ಕಂಥ ಇಂಜಿನಿಯರುಗಳು, ವಿಚಾರಿಸುವುದರೊಳಗಾಗಿ ಎಲ್ಲ ಕೆಲಸವೂ ಆಯಿತು. ಇದರ ಉದ್ದೇಶವೇನೆಂದರೆ ಅಧಿಕಾರಿಗಳ ಮೇಲೆ ಅರ್ಜಿ ಕೊಡಕೂಡದು. ವಿಜಿಲೆನ್ಸ್ ವಿಚಾರವಾಗಿ ಬಂದರೆ ಅಧಿಕಾರಿಗಳು ಫೀಲ್ಡ್ ಅಧಿಕಾರಿಗಳ ಜೊತೆಯಲ್ಲಿಯೇ ಇದ್ದು. ಬಿಡುವುದು ಆ ವೇಳೆಯಲ್ಲಿ ಅಲ್ಲಿಯ ಕೆಲಸ ನಿಲ್ಲುತ್ತದೆ. ಆದರಿಂದ ಜನರಿಗೆ ಏನೂ ಪ್ರಯೋಜನವಾಗಿಲ್ಲ ಈ ರೀತಿಯಾಗಿ ಹಳ್ಳಿಗಾಡಿನಲ್ಲಿ ಪ್ರಚಾರ ಮಾಡುತ್ತಾರೆ. ನಾನೇ ವಿಜಿಲೆನ್ಸ್ ಕಮೀಷನರ್ ಜೊತೆ ಸ್ವತಃ ಮನವಿ ಮಾಡಿಕೊಂಡು ಬಂದಿದ್ದೇನೆ. ಅರ್ಜಿ ಕೊಟ್ಟರೆ ಅವರ ವಿಳಾಸ ಕೊಡಬೇಕು, ಅವರ ಹೆಸರು ಇರಬೇಕು, ಇಷ್ಟೆಲ್ಲಾ ಮಾಹಿತಿಯನ್ನು ಪಡೆದು ಬಂದು ತನಿಖೆಯನ್ನು ಮಾಡಿ. ಅವರು ಕೊಟ್ಟಿರ ತಕ್ಕಂಥ ಅರ್ಜಿಯಲ್ಲಿ ಯಾವುದೇ ಮಾಹಿತಿಯು ಸಿಗದೇ ಹೋದಂತಹ ಸಂದರ್ಭದಲ್ಲಿ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅಧಿಕಾರಿ ಯಾರೇ ಇರಲಿ, ಕಾನೂನು ರೀತಿ ಶಿಕ್ಷೆ ವಿಧಿಸಿ ಎಂದು ಹೇಳು ತ್ತೇನೆ. ಈಗ ಈ ರೀತಿ ಆಗುವುದು ಸ್ವಲ್ಪ ಕಡಿಮೆಯಾಗಿದೆ. ಈ ರೀತಿಯ ಅರ್ಜಿಗಳು ಬಂದರೆ ಬರ ಪರಿಹಾರಕ್ಕೆ ಕೆಲಸ ನಿಲ್ಲಿಸಬೇಕೆಂದು ನೀವು ಶಿಫಾರಸ್ಸು ಮಾಡುತ್ತೀರಾ ? ಈ ಸರ್ಕಾರ ಇದನ್ನು ಹೀಗೆಯೇ ಬಿಡುವುದಕ್ಕಾಗುವುದಿಲ್ಲ, ನೋಡಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಇದು ಯಾವ ಧಾಟಿ ? ಇದನ್ನು ಬಿಡುವುದಕ್ಕಾಗುವುದಿಲ್ಲ, ನೋಡಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ, ಇದು ಒಬ್ಬ ದೃಢಕಾಯ ಮನುಷ್ಯ ತಲೆಯನ್ನು ಮೇಲ್ಭಾಗಕ್ಕೆ ಕಾಣಿಸಿಕೊಂಡು ಕುಳಿತುಕೊಂಡಿರುತ್ತಾನೆ, ಬಂದು ಹೋಗುವವರಿಗೆಲ್ಲಾ ನಾನು ಎದ್ದರೆ ಸರಿಹೋಗುವುದಿಲ್ಲ ಎಂದು ಎಲ್ಲರನ್ನು ಹೆದರಿಸುತ್ತಿರು ತ್ತಾನೆ. ಇದನ್ನು ನೋಡಿ ಎಲ್ಲರೂ ಹೆದರಿ ಪಕ್ಕಕ್ಕೆ ಹೋಗುತ್ತಿದ್ದರು. ಯಾರೋ ಒಬ್ಬ ಸವಕಲು ಮನುಷ್ಯ ಇವತ್ತಲ್ಲ ನಾಳೆ ಸಾಯಲೇಬೇಕೆಂದು ನಿರ್ಧರಿಸಿ ಅವನನ್ನು ಹೆದರಿಸುತ್ತಾನೆ. ಆಗ ನೋಡಿದರೆ ಆ ಮನುಷ್ಯನಿಗೆ ಕಾಲು ಕುಂಟು, ಇದೇ ಅವನ ಗುಟ್ಟು. ಆಮೇಲೆ ಆ ಊರಿನ ಎಲ್ಲಾ ಜನರೂ ಸೇರಿ ಅವನನ್ನು ಅಪಹಾಸ್ಯ ಮಾಡಿ ಬಿಟ್ಟರು. ಸುಮ್ಮ ಸುಮ್ಮನೆ ನಾನು ಬಿಡುವುದಿಲ್ಲ, ನೋಡುವುದಿಲ್ಲ ಎಂದರೆ ಈ ಸರ್ಕಾರ ಬಿದ್ದು ಹೋಗುತ್ತದೆಯೋ ? ನಾವು ಯಾವ ಕೆಲಸಕ್ಕೂ ಲಾಯಕ್ಕು ಬೀದಿಯಲ್ಲಿ ರುವುದಕ್ಕೂ ಲಾಯಕ್ಕು ಎಲ್ಲದಕ್ಕೂ ಲಾಯಕ್ಕೂ ನಾವು ತಯಾರಾಗಿ ಬಂದಿರುವವರು. ನಾವು ಇದಕ್ಕೇ ಬಂದಿದ್ದೇವೆ ಎಂದು ಹೇಳಿದರೆ ಸ್ವಲ್ಪ ತೊಂದರೆಯಾಗುತ್ತದೆ. ಸ್ವಲ್ಪ ಮಾನಸಿಕ ಸಮ ತೋಲನ ಕೂಡ ಹೆಚ್ಚು ಕಡಿಮೆ ಆಗುತ್ತದೆ. ನಮಗೆ ಅಂಥ ಸ್ಥಿತಿ ಬಂದಿಲ್ಲ.

ಇನ್ನು ಗ್ರೌಂಡ್ ವಾಟರ್ ಬಗ್ಗೆ ಪ್ರಸ್ತಾಪ ಮಾಡಬಹುದು ಎಂದು ನಾನು ಬಹಳ ಆಶೆಯನ್ನು ಇಟ್ಟುಕೊಂಡಿದ್ದೆ. ಮಹಾರಾಷ್ಟ್ರದಲ್ಲಿ ಗ್ರೌಂಡ್ ವಾಟರ್ ಸೆಲ್ ರೂರಲ್ ಡೆವಲಪ್‌ಮೆಂಟ್ ಇಲಾಖೆಗೆ ಸಂಬಂಧಪಟ್ಟಂತೆ ಇದೆ. ಅವರು ಇಡೀ ರಾಜ್ಯದಲ್ಲಿ ಗ್ರೌಂಡ್ ವಾಟರ್ ಎಲ್ಲೆಲ್ಲಿ ಸಿಗುತ್ತದೆ ಎಂದು ಸರ್ವೆ ಮಾಡಿದ್ದಾರೆ. ಗ್ರೌಂಡ್ ವಾಟರ್ ಭೂ ಗರ್ಭದಲ್ಲಿರತಕ್ಕಂಥ ಜಲವನ್ನು ಹೊರಗೆ ತೆಗೆಯುವುದಕ್ಕೆ ಪ್ರಯತ್ನ ಮಾಡಿದರೆ ಸೋರ್ಸಸ್ ಎಕ್ಸಾಸ್ಟ್ ಆಗುತ್ತದೆ, ಅವರು ಇದಕ್ಕೆ ವ್ಯಾಪಕ ವಾದಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಇದು ಶಾಶ್ವತವಾಗಿ ಬರ ಬರತಕ್ಕಂಥ ಪ್ರದೇಶ ಗಳಲ್ಲಿ ಪರಿಹಾರ ಕೊಡುವುದಕ್ಕೆ ಒಂದು ಮಾರ್ಗ. ನಾನು ಮಾನ್ಯ ಕಂದಾಯ ಮಂತ್ರಿಗಳನ್ನು ನಮ್ಮ ರಾಜ್ಯದಲ್ಲಿ ಈ ವ್ಯವಸ್ಥೆಯನ್ನು ನೀವು ಮಾಡಬೇಕು ಎಂದು ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ. ಗ್ರೌಂಡ್ ವಾಟರ್ ಸೆಲನ್ನು ಏರ್ಪಾಡು ಮಾಡಿ ರಾಜ್ಯದ ಎಲ್ಲಾ ಭಾಗಗಳಲ್ಲಿ ಸರ್ವೆ ಮಾಡಿಸಬೇಕು. ಸರ್ವೆ ಮಾಡಿ ಭೂಗರ್ಭದಲ್ಲಿ ಜಲದ ಪೂರ್ಣ ಪ್ರಯೋಜನ ಜನರಿಗೆ ದೊರೆಯುವಂತಾಗಬೇಕು.

ಅದೇ ರೀತಿ ಮಹಾರಾಷ್ಟ್ರ ಸರ್ಕಾರದಲ್ಲಿ ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಂ ಎಂದು ಇಟ್ಟುಕೊಂಡಿದ್ದಾರೆ. ನಮ್ಮಲ್ಲಿ ವ್ಯವಸಾಯ ಕಾರ್ಮಿಕರಿಗೆ ಅಗ್ರೇರಿಯನ್ ಲೇಬರ್ ಎಂದು ಹೇಳು ತ್ತಾರೆ, ಅಗ್ರಿಕಲ್ಚರ್ ಲೇಬರ್ ಎಂದು ಹೇಳುತ್ತಾರೆ, ಅಗ್ರೇರಿಯನ್ ಸೆಕ್ಟ್ ಎಂದು ಹೇಳುತ್ತಾರೆ ಇವರು ಯಾವಾಗಲೂ ಬರಗಾಲದವರೇ. ಕೃಷಿ ಕಾರ್ಮಿಕರು ಅವರಿಗೆ ಸ್ವಂತ ಜಮೀನು ಇಲ್ಲ. ಬೇರೆಯವರ ಜಮೀನಿನಲ್ಲಿ ಹೀಗೆ ಬೆಳಿಗ್ಗೆಯಿಂದ ಸಂಜೆಯವರೆಗೂ ಕೆಲಸ ಮಾಡಿ ಹೊಟ್ಟೆ ಹೊರೆದುಕೊಳ್ಳುತ್ತಾರೆ. ಖಾಯಂ ಆಗಿ ವರ್ಷ ಪೂರ್ತಿ ಅವರುಗಳು ಕೆಲಸವಿಲ್ಲದೇ ಉಳಿಯಬೇಕಾದಂಥ ಪರಿಸ್ಥಿತಿ ಇದೆ.

ಇವರೆಲ್ಲರೂ ಅವಿದ್ಯಾವಂತರು, ಅನಕ್ಷರಸ್ಥರು, ನಿರುದ್ಯೋಗಿಗಳು ಇವರಿಗೆ ಆಸ್ತಿಪಾಸ್ತಿ ಏನೂ ಇಲ್ಲ. ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಮ್‌ನಲ್ಲಿ ಇಂಥ ಜನರಿಗೆ ಖಾಯಂ ಆಗಿ ಉದ್ಯೋಗ ಕೊಡಿಸತಕ್ಕಂಥ ವ್ಯವಸ್ಥೆಯನ್ನು ಮಹಾರಾಷ್ಟ್ರ ಸರ್ಕಾರ ಹಾಕಿಕೊಂಡಿದೆ. ಕಾಂಗ್ರೆಸ್ ಸರ್ಕಾರದವರು ಒಳ್ಳೆಯ ಕೆಲಸವನ್ನು ಅಲ್ಲಿ ಮಾಡಿದ್ದಾರೆ. ನಾವು ಇವೊತ್ತಿನ ದಿವಸ ಅವರನ್ನು ಅನುಸರಿಸಬೇಕಾಗುತ್ತದೆ. ಮೇಲಾಗಿ ಈ ಶಾಪಕ್ಕೆ ತುತ್ತಾಗುತ್ತಿರುವವರು ಕೃಷಿ ಕಾರ್ಮಿಕರು. ಇವರಿಗೆ ಈ ಕೆಲಸ ಮಾಡಿದರೆ ಬಹಳ ಮಟ್ಟಿಗೆ ಸೌಕರ್ಯ ಮಾಡಿದಂತಾಗುತ್ತದೆ. ಈ ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಮನ್ನು ಇಲ್ಲಿ ಜಾರಿಗೆ ತರಬೇಕು ಎಂದು ಮಾನ್ಯ ಕಂದಾಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಕುಡಿಯುವ ನೀರಿನ ವಿಚಾರ ತಮಗೆ ಗೊತ್ತಿದೆ. ಬಹುಶಃ ಕಳೆದೆರಡು ವರ್ಷಗಳಲ್ಲಿ ಈ ಸದನದಲ್ಲಿ ನಾನು ಸದಸ್ಯನಾಗಿರಲಿಲ್ಲ. ಕಳೆದ ಎರಡು ವರ್ಷಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಕೊಟ್ಟಂಥ ಆದ್ಯತೆ ಮೇರೆಗೆ ಬಹಳ ಮಟ್ಟಿಗೆ ನಮಗೆ ಅದು ಸಹಾಯಕವಾಗಿದೆ. ಮೇಲಾಗಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಿದ್ದಾರೆ. ಆದರೂ ಈ ಕಡೆಗೆ ಆದ್ಯತೆ ಕೊಡದೇ ಇದ್ದರೆ ಈ ಬರಗಾಲದ ಜೊತೆಗೆ ಕುಡಿಯುವ ನೀರಿನ ಸಮಸ್ಯೆಯೂ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ತೀವ್ರ ಆಗುತ್ತಿತ್ತು. ಇಷ್ಟಾದರೂ ಕೂಡ ಹ್ಯಾಮ್ಲೆಟ್ ವಿಲೇಜಸ್ ಇದ್ದರೂ ಅಲ್ಲಿ ಬೋರ್‌ವೆಲ್ ಹಾಕುವುದಕ್ಕೆ ಆಗಿಲ್ಲ. ಅಲ್ಲಿ ಕಾನೂನು ಅಡ್ಡ ಬರುತ್ತದೆ. ಎಂದು ಹೇಳುತ್ತಾರೆ. ೧೦—೫೦ ಜನ ಇರತಕ್ಕಂಥ ಹಳ್ಳಿ, ಅದು ನಮ್ಮ ಲೆಕ್ಕದಲ್ಲಿಲ್ಲ ಎಂದು ಹೇಳುತ್ತಾರೆ. ಸಣ್ಣ ಹಳ್ಳಿಯೇ ಆಗಿರಬಹುದು, ದೊಡ್ಡ ಹಳ್ಳಿಯೇ ಆಗಿರಬಹುದು. ಎಲ್ಲೆಲ್ಲಿ ಕುಡಿಯುವ ನೀರಿನ ಅಭಾವ ಇದೆ. ಈ ಕಾನೂನು ಚೌಕಟ್ಟಿನಲ್ಲಿ ನಿಯಮಗಳನ್ನು ಸಡಿಲಿಸಿ ಎಲ್ಲರಿಗೂ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಬೇಕು. ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ ಕೆಲವು ಕಡೆ ಹ್ಯಾಮ್ಲೆಟ್ ವಿಲೇಜಸ್ ಇದ್ದರೂ ಬೋರ್‌ವೆಲ್‌ಗಳನ್ನು ಹಾಕುತ್ತಿಲ್ಲ. ೨೫೦ ಜನ ಕಡಿಮೆ ಇರತಕ್ಕಂಥ ಪ್ರದೇಶಗಳಿಗೆ ಹಾಕಬಾರದು ಎಂದು ಹೇಳುತ್ತಾರೆ. ಆ ರೀತಿ ಹೇಳುವುದು ತಪ್ಪಾಗುತ್ತದೆ. ಮನುಷ್ಯನಿಗೆ ಬಾಯಾರಿಕೆ ಸಮಸ್ಯೆಗಳನ್ನು ಆಧರಿಸಿ ಬರುವುದಿಲ್ಲ. ಜನಹಿತ ಲಕ್ಷಣಗಳನ್ನು ಅವಲಂಬಿಸಿಕೊಂಡು ಬಾಯಾರಿಕೆ ಬರುತ್ತದೆ. ಆದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ನಮ್ಮಲ್ಲಿ ಈಗ ಇರತಕ್ಕಂಥ, ಲಭ್ಯ ಇರತಕ್ಕಂಥ ನೀರಿನ ಬಗ್ಗೆ ಪುನರ್ ಆಲೋಚನೆ ಮಾಡಬೇಕಾಗುತ್ತದೆ. ನಮ್ಮಲ್ಲಿ ನೀರಿನ ಬಗ್ಗೆ ವ್ಯವಸ್ಥೆ ಇದೆ. ಬಹಳ ಹಳೆಯ ವ್ಯವಸ್ಥೆಯನ್ನೇ ಅನುಸರಿಸಿಕೊಂಡು ಬರುತ್ತಿದ್ದೇವೆ. ಟೆಕ್ನಿಕಲ್ ಆಗಿ ಹೊಸ ಇನ್ನೊಂದು ವ್ಯವಸ್ಥೆಯನ್ನು ಕಂಡುಹಿಡಿಯಬೇಕಾದರೆ ಡ್ರಿಪ್ ಇರಿಗೇಷನ್‌ನಲ್ಲಿ ಎಷ್ಟು ನೀರು ಸಿಕ್ಕಿದರೆ, ಆ ವ್ಯವಸ್ಥೆಯನ್ನು ಮಾಡಿದರೆ ಡ್ರಿಪ್ ಇರಿಗೇಷನ್ ಮುಖಾಂತರ ಎಷ್ಟು ಜಮೀನನ್ನು ಸಾಗು ಮಾಡುತ್ತಿದ್ದಾರೆ, ಎಷ್ಟು ಮಾಡಿದರೂ ಅನುಕೂಲ ಇರುವುದಿಲ್ಲ. ಸ್ಪ್ರಿಂಕ್ಲರ್ ಇರಿಗೇಷನ್ ಇದೇ ರೀತಿ ಲಭ್ಯ ಇರತಕ್ಕಂಥ ಒಂದು ಗ್ರೌಂಡ್ ವಾಟರ್ ಸೆಲನ್ನು ಕ್ರಿಯೇಟ್ ಮಾಡಿ ಭೂಗರ್ಭದಲ್ಲಿ ಜಲವನ್ನು ಹೊರಗೆ ತೆಗೆಯತಕ್ಕಂಥ ಹೊಸ ಹೊಸ ವಿಧಾನಗಳನ್ನು ಪಾಲಿಸಿದರೆ ಅದರ ಪೂರ್ಣ ಪ್ರಯೋಜನವನ್ನು ಹೆಚ್ಚು ಜಮೀನಿಗೂ ಸಿಗತಕ್ಕಂಥ ರೀತಿಯಲ್ಲಿ ಸರ್ಕಾರ ಕೆಲಸ ಮಾಡಬೇಕು. ಈ ರೀತಿ ಕೆಲವು ಹೊರದೇಶಗಳಲ್ಲಿಯೂ ಕೂಡ ಇದನ್ನು ಮಾಡಿದ್ದಾರೆ. ಇದು ಹೆಚ್ಚು ಕಡಿಮೆ ಇದ್ದರೂ ಮಾಡಬೇಕಾದಂಥ ಅಗತ್ಯ ಇದೆ.

ಸೆಂಟ್ರಲ್ ಸ್ಟಡಿ ಟೀಮ್‌ನವರಿಗೆ ಡಿಸೆಂಬರ್ ತಿಂಗಳಲ್ಲಿ ನಮ್ಮ ರಾಜ್ಯ ಸರ್ಕಾರವು ಮನವಿಯನ್ನು ಕೊಟ್ಟಮೇಲೆ ಇವೊತ್ತಿಗೂ ಉತ್ತರ ಬಂದಿಲ್ಲ. ಪ್ಲಾನಿಂಗ್ ಕಮಿಷನ್‌ರವರ ಅನುಮತಿಯ ಪ್ರಕಾರ ಯಾವುದೇ ರಾಜ್ಯ ಸರ್ಕಾರ ಅರ್ಜಿಯನ್ನು ಸಲ್ಲಿಸಿದಮೇಲೆ ೧೫ ದಿವಸಗಳೊಳಗೆ ಸೆಂಟ್ರಲ್ ಸ್ಟಡಿ ಟೀಮ್‌ನವರು ರಾಜ್ಯಕ್ಕೆ ಭೇಟಿ ಕೊಡಬೇಕು. ರಾಜ್ಯದ ಎಲ್ಲಾ ಸ್ಥಿತಿಗತಿಗಳನ್ನು ಚೆನ್ನಾಗಿ ಅಧ್ಯಯನ ಮಾಡಬೇಕು. ಮತ್ತು ವರದಿಯನ್ನು ಪ್ಲಾನಿಂಗ್ ಕಮಿಷನ್‌ಗೆ ಸಲ್ಲಿಸಬೇಕು. ಬರಗಾಲಕ್ಕೆ ಹಣವನ್ನು ಒದಗಿಸುವುದಕ್ಕೆ ಕೇಂದ್ರ ಸರ್ಕಾರದ ಸ್ಟಡಿ ಟೀಮ್ ಕೊಡತಕ್ಕಂಥ ರಿಪೋರ್ಟ್ ಇಲ್ಲಿಯವರೆವಿಗೂ ಏನಾಗಿದೆ ಎಂದರೆ ಅದು ಬಹಳ ಸೀಕ್ರೆಟ್‌ಆಗಿಯೇ ಇದೆ. ತಾವು ಕೂಡ ಒತ್ತಾಯಪಡಿಸಬೇಕು, ಸರ್ಕಾರ ಕೂಡ ಇದಕ್ಕೆ ಒತ್ತಾಯಪಡಿಸಬೇಕು. ಸ್ಟಡಿ ಟೀಮ್ ರಾಜ್ಯಕ್ಕೆ ಭೇಟಿ ಕೊಟ್ಟನಂತರ ಕೂಡ

ತಕ್ಕಂಥ ರಿಪೋರ್ಟ್ ಏನು ಇದೆ ಅವುಗಳನ್ನು ಸೀಕ್ರೆಟ್‌ಆಗಿ ಇಡಬಾರದು. ಅದನ್ನು ಬಹಿರಂಗ ಮಾಡಬೇಕು. ಅದು ಎಲ್ಲರಿಗೂ ತಿಳಿಯುವಂತೆ ಮಾಡಬೇಕು. ಕನಿಷ್ಟಪಕ್ಷ ನಮಗಾದರೂ ತಿಳಿಯುವಂತೆ ಮಾಡಬೇಕು. ಸ್ಟಡಿ ಟೀಮ್‌ನವರು ಏನು ರೆಕಮೆಂಡೇಷನ್ಸ್ ಮಾಡಿರುತ್ತಾರೆ ಅದು ರಾಜ್ಯ ಸರ್ಕಾರಕ್ಕೆ ತಿಳಿದು ಅದರ ಸವಲತ್ತು ತಕ್ಷಣ ದೊರೆಯುವಂತೆ ಆಗಬೇಕು. ಮಾನ್ಯ ಸದಸ್ಯರು ಹೇಳಿದರು ಎಲ್ಲಾ ಕಡೆಗೂ ಬಹಳ ತೊಂದರೆಯಾಗಿದೆ ಎಂದು. ಸೊಂಡೂರಿನಲ್ಲಿ ಸುಮಾರು ೧೫೦ ದನಗಳು ಸತ್ತುಹೋಗಿದೆ ಎಂದು ಹೇಳಿದರು. ನಾನು ಸಂಬಂಧಪಟ್ಟವರಿಂದ ಈ ವಿಚಾರವನ್ನು ತಿಳಿದುಕೊಳ್ಳಲಾಗಿ ಆ ಊರಿನಲ್ಲಿರತಕ್ಕಂಥ ದನಗಳನ್ನೆಲ್ಲಾ ಸೇರಿಸಿದರೂ ೧೫೦ ಆಗುವುದಿಲ್ಲ. ಅದು ಒಂದು ಸಣ್ಣ ಊರು. ಹ್ಯಾಮ್‌ಲೆಟ್ ವಿಲೇಜ್, ಊರೆಲ್ಲ ಸೇರಿಸಿದರೂ ೧೫೦ ದನಗಳು ಅಲ್ಲಿ ಇಲ್ಲವೆಂದು ಹೇಳಿದರೆ ಸತ್ತುಹೋದ ದನಗಳು ಯಾರದು? ಅದಕ್ಕೆ ಯಾರು ಯಾಜಮಾನರು ಎಲ್ಲಿ ಸತ್ತದ್ದು ಒಂದಕ್ಕೂ ವಿವರಗಳಿಲ್ಲ.

ಮಾನ್ಯ ಅಧ್ಯಕ್ಷರೇ ಫಾಡರನ್ನು ಹೊರಗಿನ ರಾಜ್ಯಗಳಿಂದ ಪ್ರೊಕ್ಯೂರ್ ಮಾಡುತ್ತಿದ್ದಾರೆ. ಫಾಡರನ್ನು ಫಾರೆಸ್ಟ್‌ನಲ್ಲಿ ಮತ್ತಿತರ ಜಾಗಗಳಲ್ಲಿ ಬೆಳೆಯುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ಇರಿಗೇಟ್ ಮಾಡುತ್ತಿದ್ದಾರೆ, ಬೋರ್‌ವೆಲ್‌ಗಳನ್ನು ತೋಡಿ ಫಾರೆಸ್ಟ್‌ನಲ್ಲಿ ಹುಲ್ಲು ಬೆಳೆಯಲು ಮಾಡುತ್ತಿದ್ದಾರೆ. ಹುಲ್ಲನ್ನು ಸೇರಿಸಿ ಬಹುಶಃ ಗೋಶಾಲೆಗಳನ್ನು ಮಾಡಿರತಕ್ಕಂಥ ಒಂದು ಹೊಸ ವ್ಯವಸ್ಥೆಯಲ್ಲಿ ಎಲ್ಲೂ ಮಾಡದೆ ಇರತಕ್ಕಂಥ ಪ್ರಯೋಗದಿಂದ ಹೆಚ್ಚು ಕಡಿಮೆಯಾಗಿದ್ದರೆ ಅದಕ್ಕೆ ಸೂಕ್ತವಾದ ಸಲಹೆಗಳನ್ನು ಕೊಡಬೇಕೇ ಹೊರತು ಈ ರೀತಿ ಟೀಕೆ ಮಾಡತಕ್ಕಂಥದ್ದಲ್ಲ. ನಾವು ಎಲ್ಲವನ್ನು ಮಾಡಿಬಿಡುತ್ತೇವೆ, ಎಲ್ಲರೂ ಕೂಡ ಸಂಪದ್ಭರಿತರನ್ನಾಗಿ ಮಾಡಿಬಿಡುತ್ತೇವೆಂದು ಹೇಳುವುದಕ್ಕೆ ಆಗುವುದಿಲ್ಲ. ಹೊಸದಾಗಿ ಯಾವುದೇ ಪದ್ಧತಿಗಳನ್ನು ಜಾರಿಗೆ ತರಬೇಕಾದರೆ ಕೆಲವು ನ್ಯೂನ್ಯತೆಗಳು ಇರಬಹುದು. ಆದರೆ ಮಾನವೀಯತೆಯ ದೃಷ್ಟಿಯಿಂದ ನೋಡಿ ಆ ನ್ಯೂನ್ಯತೆಗಳಿಗೆ ಪರಿಹಾರವನ್ನು ಕಂಡುಹಿಡಿಯಬೇಕೇ ಹೊರತು ಅದನ್ನು ದೊಡ್ಡ ತಪ್ಪು ಎಂದು ಹೇಳತಕ್ಕಂಥದ್ದು ಒಳ್ಳೆಯದಲ್ಲವೆಂದು ನಾನು ಸ್ಪಷ್ಟಪಡಿಸುತ್ತೇನೆ.

ಇವೊತ್ತಿನದಿವಸ ಸನ್ಮಾನ್ಯ ಮುಖ್ಯ ಮಂತ್ರಿಗಳು ಎಲ್ಲಾ ಜಿಲ್ಲೆಗಳಿಗೂ ಭೇಟಿಯನ್ನು ಕೊಟ್ಟಿದ್ದಾರೆ. ಕೋಲಾರ ಜಿಲ್ಲೆಗೆ ಮಾತ್ರ ಬಂದಿಲ್ಲ. ಮಾನ್ಯ ರೆವಿನ್ಯೂ ಮಂತ್ರಿಗಳೂ ಕೂಡ ಭೇಟಿಯನ್ನು ಕೊಟ್ಟಿದ್ದಾರೆ. ಯಾವುದೇ ಮಂತ್ರಿಗಳನ್ನು ಅವರು ತಮ್ಮಲ್ಲಿ ಕಾರು ಇಟ್ಟುಕೊಂಡು, ನಮ್ಮಿಂದ ಪರ್ಮಿಷನ್ ತೆಗೆದುಕೊಂಡು ನಮ್ಮ ಊರುಗಳಿಗೆ ಬರಬೇಕೆಂದು ಯಾರೂ ಹೇಳಬೇಕಾಗಿಲ್ಲ. ಬರಗಾಲದ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಮಂತ್ರಿಗಳು ಹೋಗದೆ ಇದ್ದರೆ ಯಾರು ತಾನೇ ಸುಮ್ಮನೆ ಇರುತ್ತಾರೆ, ನಮಗೆ ನಮ್ಮ ಜಿಲ್ಲೆಯನ್ನು, ನಮ್ಮ ಕಾನ್‌ಸ್ಟಿಟ್ಯೂಯನ್ಸಿಯನ್ನು ಕಾಪಾಡಿಕೊಳ್ಳಬೇಕೆಂಬ ಪ್ರಜ್ಞೆ ನಮಗೆ ಇರುವುದಿಲ್ಲವೇ? ಅದನ್ನೇ ತಿಳಿದುಕೊಂಡು ಅವರುಗಳು ಪ್ರವಾಸ ಮಾಡಿರಕ್ಕಂಥದಾಗಿರುತ್ತದೆ, ಅವರು ಎಲ್ಲಿಗೇ ಹೋಗಿರಲಿ ೧೦-೧೫ ನಿಮಿಷಗಳ ಕಾಲ ಹೋಗಿ ಭೇಟಿನೀಡಿ ನಾವು ಕೊಟ್ಟಿರತಕ್ಕಂಥ ಪಟ್ಟಿಯಮೇಲೆಯೇ ಭಾಷಣ ಮಾಡಿದ್ದಾರೆ. ಅನೇಕ ವಿಚಾರಗಳನ್ನು ಅವರು ತೆಗೆದುಕೊಂಡಿರುತ್ತಾರೆ. ಸುಮಾರು ೧೨ ಕೋಟಿ ರೂಪಾಯಿಗಳಷ್ಟು ಮೇಜರ್ ಇರಿಗೇಷನ್‌ಗೂ, ಮೈನರ್ ಮತ್ತು ಮಿಡಿಯಮ್ ಇರಿಗೇಷನ್‌ಗೆ ೫.೫ ಕೋಟಿ ರೂಪಾಯಿಗಳನ್ನು ಸರ್ಕಾರದವರು ಖರ್ಚು ಮಾಡಿದ್ದಾರೆ. ಸುಮಾರು ೫-೬ ತಿಂಗಳವರೆಗೆ ಇದೇ ಪರಿಸ್ಥಿತಿಯನ್ನು ನಾವು ಎದುರಿಸಬೇಕಾಗಿದೆ. ಕೇಂದ್ರದಿಂದ ಎಷ್ಟು ಸಹಾಯ ಲಭ್ಯವಾಗುತ್ತದೆಯೋ ಅದು ನಮಗೆ ಖಚಿತವಾಗಿ ಗೊತ್ತಾಗುತ್ತಿಲ್ಲ. ಆದರೂ ೭೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಸರ್ಕಾರ 'ಸನ್ನದ್ಧವಾಗಿದೆ' ಇಷ್ಟು ಖರ್ಚು ಮಾಡಿದರೆ ಎಲ್ಲವೂ ಪೂರ್ಣವಾಗಿ ಸರಿಹೋಗುತ್ತದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ರಾಜ್ಯದ ರಿಸೋರ್ಸಸ್ ಮೊಬಲೈಸ್ ಆಗಿಲ್ಲವೆಂದು ಮಾನ್ಯ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಮಾನ್ಯ ಪ್ರಧಾನಿಯವರು ಬೆಂಗಳೂರಿಗೆ ಬಂದಿದ್ದಾಗ ಪತ್ರಿಕಾ ಪ್ರತಿನಿಧಿಗಳನ್ನು ಬೇಟಿಮಾಡಿದ ಸಂದರ್ಭದಲ್ಲಿ ಸ್ವಲ್ಪ ಹಾಸ್ಯಾಸ್ಪದವಾದ ರೀತಿಯಲ್ಲಿ ನಾವು ಏನು ನೋಟುಗಳನ್ನು ಪ್ರಿಂಟ್ ಮಾಡಲಿಕ್ಕೆ ಆಗುತ್ತದೆಯೇ? ಹಣದ ಕೊರತೆ ಇದ್ದರೆ ರಾಜ್ಯ ಸರ್ಕಾರಗಳು ರಿಸೋರ್ಸಸ್ಸನ್ನು ಮೊಬಲೈಸ್ ಮಾಡಬೇಕು, ಹಣವನ್ನು ಪ್ರಿಂಟ್ ಮಾಡಬೇಕೆಂದು ಹೇಳಿದರೆ ಅದು ಸಾಧ್ಯವಾಗುವುದಿಲ್ಲವೆಂದು ಹೇಳಿರುತ್ತಾರೆ. ತಮಗೆ ಗೊತ್ತಿದೆ, ಇರತಕ್ಕಂಥ ಪ್ಲಾನಿಂಗ್ ಎಕ್ಸ್‌ಪೆಂಡೀಚರನ್ನು ಕಡಿಮೆ ಮಾಡಿದರೂ ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ಗೆ ಕಡಿಮೆಮಾಡಬಾರದೆಂದು ಸರಕಾರ ನಿಗಧಿತವಾಗಿ ಹಣವನ್ನು ಖರ್ಚುಮಾಡುತ್ತಿದೆ. ಹೀಗೆ ಎಲ್ಲೆಲ್ಲಿ ನಿಗದಿತವಾಗಿ ಹಣವನ್ನು ಖರ್ಚುಮಾಡಬೇಕೋ ಅಲ್ಲಿ ಹಾಗೂ ಎಲ್ಲಿ ಹಣವನ್ನು ಹೆಚ್ಚು ಖರ್ಚು ಮಾಡ

ಬೇಕೋ ಅಲ್ಲಿ ಅಗತ್ಯವಾಗಿ ಹಣವನ್ನು ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ. ೧೯೮೨ನೇ ಇಸವಿಯಲ್ಲಿ ನಾನು ಈ ಮನೆಯ ಸದಸ್ಯನಾಗಿರಬೇಕಾದರೆ ಮಾನ್ಯ ಮಲ್ಲಿಕಾರ್ಜುನಖರ್ಗೆಯವರು ಕಂದಾಯ ಸಚಿವರಾಗಿ ಉತ್ತರವನ್ನು ಕೊಟ್ಟಿದ್ದರು. ದಯವಿಟ್ಟು ಅವರು ಏನೇನು ಇಂಪ್ಲಿಮೆಂಟ್ ಮಾಡಿದ್ದಾರೆ ಎಂಬುದನ್ನು ಹೇಳಲಿ?

ಇನ್ನು ಮಾನ್ಯ ವಿರೋಧಪಕ್ಷದ ಸದಸ್ಯರು ಮಾತನಾಡಿ ದನಕರುಗಳನ್ನು ರೈತರು ಕಟುಕರಿಗೆ ಮಾರುತ್ತಿದ್ದಾರೆಂದು ಹೇಳಿದರು. ಯಾರು ಈ ರೀತಿ ಹೇಳಿದರು ಇವರಿಗೆ ಯಾರು ಸಿಕ್ಕಿದರು ಎಂದು ನಾನು ಕೇಳುತ್ತೇನೆ. ಇದರ ಬಗ್ಗೆ ಮಾನ್ಯ ಸದಸ್ಯರು ಉತ್ತರ ಕೊಡಲಿ. ಇಂದಿನ ಪರಿಸ್ಥಿತಿಯಲ್ಲಿ ನಾವು ದನಕರುಗಳನ್ನು ಕಟುಕರಿಗೆ ಕಳುಹಿಸಿದರೆ ಆನಂದವಾಗುತ್ತದೆಯೇ? ಇಂದು ಊಹೆಗೆ ಸಿಗದಿರತಕ್ಕಂಥ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಇದಕ್ಕೆ ತಾತ್ಕಾಲಿಕ ಪರಿಹಾರವನ್ನು ಮಾಡಿದರೆ ಸಾಲದು. ಒಂದು ಶಾಶ್ವತವಾದ ಪರಿಹಾರವನ್ನು ಮಾಡಬೇಕಾಗುತ್ತದೆಂದು ನಾನು ಹೇಳುತ್ತೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಫ್ಯಾಮಿನ್ ಕಮಿಷನ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ನಮ್ಮ ನೆರೆ ಮೂರು ನಾಲ್ಕು ರಾಜ್ಯಗಳಲ್ಲಿ ಇದೆ. ೧೯೭೬ನೇ ಇಸವಿಯಲ್ಲೇ ಮೈಸೂರು ಪ್ರಾಂತ್ಯ ಬೇರೆ ಇದ್ದಾಗ ಫ್ಯಾಮಿನ್ ಕಮಿಷನ್‌ಬೇಕೆಂದು ಇತ್ತು. ಅದನ್ನು ಇವೊತ್ತಿನವರೆಗೆ ಮಾಡಲಿಲ್ಲ. ದಯವಿಟ್ಟು ಈಗಲಾದರೂ ಕೂಡ ಅತಿಶೀಘ್ರವಾಗಿ ಇದಕ್ಕೆ ಆದ್ಯತೆಯನ್ನು ಕೊಟ್ಟು, ಇಡೀ ರಾಜ್ಯ ಇದರ ವ್ಯಾಪ್ತಿಯೊಳಗೆ ಬರುವಂತೆ ಒಂದು ಫ್ಯಾಮಿನ್ ಕಮಿಷನ್ ತರಬೇಕೆಂದು ಸರ್ಕಾರದಲ್ಲಿ ನಾನು ವಿನಯಪೂರ್ವಕವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಈಗ ರಿಲೀಫ್ ಕಮಿಟಿಗಳೆಂದು ಮಾಡಿದ್ದಾರೆ. ಸರ್ಕಾರದವರು ಒಂದು ಆಜ್ಞೆಯನ್ನು ಕಳುಹಿಸಿ ಕೊಟ್ಟಿದ್ದಾರೆ. ತಾಲ್ಲೂಕು ಲೆವೆಲ್‌ನಲ್ಲಿ ಕಮಿಟಿಗಳು ಒಮ್ಮೆ ನಿರ್ಣಯವನ್ನು ತೆಗೆದುಕೊಂಡ ಮೇಲೆ ಡಿಸ್ಟ್ರಿಕ್ಟ್ ಲೆವೆಲ್ ಕಮಿಟಿಯಲ್ಲಿ ಅದನ್ನು ರೆಕ್ಟಿಫೈ ಮಾಡತಕ್ಕಂಥ ಅಧಿಕಾರವನ್ನು ಕೊಟ್ಟಿದೆ. ಇದಕ್ಕೆ ಏನು ಕಾರಣವೋ ಗೊತ್ತಿಲ್ಲ. ಈ ರೀತಿಯಾದ ಆಜ್ಞೆಯನ್ನು ಸರ್ಕಾರದವರು ಕಳುಹಿಸಿರುವುದರಿಂದ ನಮಗೆ ಬಹಳ ತೊಂದರೆಯಾಗಿದೆ. ತಾಲ್ಲೂಕು ಲೆವೆಲ್ ಕಮಿಟಿಯಲ್ಲಿ ತಹಶೀಲ್ದಾರರು ಕಾರ್ಯದರ್ಶಿಗಳಾಗಿದ್ದು ಉಪ ವಿಭಾಗಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಆಯಾ ಕ್ಷೇತ್ರದ ಸನ್ಮಾನ್ಯ ಶಾಸಕರು ಕೂಡ ಇದರ ಸದಸ್ಯರಾಗಿರುತ್ತಾರೆ. ನಮ್ಮ ಈ ಸಮಿತಿಯು ತೀರ್ಮಾನಮಾಡಿದ್ದಕ್ಕೆ ಒಪ್ಪಿಗೆ ಕೊಟ್ಟು ಆಯಾ ಕೆಲಸವನ್ನು ಮಂಜೂರು ಮಾಡಬೇಕು. ಮತ್ತೆ ಇದು ಡಿಸ್ಟ್ರಿಕ್ಟ್ ಲೆವಲ್‌ಗೆ ಹೋಗಬೇಕಾದಂಥ ಅವಶ್ಯಕತೆ ಇರಕೂಡದು. ಇದರಿಂದ ಕಾಲವಿಳಂಬವಾಗುತ್ತದೆಯಲ್ಲದೆ ಅನಾವಶ್ಯಕ ತೊಂದರೆಯೂ ಕೂಡ ಆಗುತ್ತದೆ. ಇದಕ್ಕೆ ಒಪ್ಪಿಗೆ ಇಲ್ಲದಿದ್ದರೆ ಕೆಲಸ ತೆಗೆದುಕೊಳ್ಳುವುದಕ್ಕೆ ಆಗುವುದೇ ಇಲ್ಲ. ದಯವಿಟ್ಟು ಈ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ತಾಲ್ಲೂಕ್ ಮಟ್ಟದ ಕಮಿಟಿಯವರು ಒಮ್ಮೆ ಅಪ್ರೂವ್ ಮಾಡಿದರೆ ಸಾಕು. ಆದರ ಮೇಲೆ ಸರ್ಕಾರದವರು ಸಂಬಂಧಪಟ್ಟ ಇಲಾಖೆಯವರು ಕೆಲಸ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

೨-೩೦ ಪಿ. ಎಂ.

ಮತ್ತೇ ಪ್ರಾರಂಭದಲ್ಲಿ ಕೆಲವು ಮಾನ್ಯ ಸ್ನೇಹಿತರು ಅಭ್ಯಂತರ ಮಾಡಿ ಮಧ್ಯದಲ್ಲಿ ಅವರಿಗೆ ಸಂಬಂಧವಿಲ್ಲದ ವಿಚಾರಗಳನ್ನು ಹೇಳಿದ್ದರಿಂದ ಅವರು ಕುಳಿತುಬಿಟ್ಟರು. ಈಗ ಮತ್ತೇ ಅವರು ಏಳಬೇಕಾಗುತ್ತದೆ. ಏನು ಹೇಳಬೇಕಾದರೂ ಅದಕ್ಕೆ ಯಾವುದಾದರೂ ಸೈದ್ಧಾಂತಿಕವಾದ ನೆಲೆಗಟ್ಟು ಇರಬೇಕು. ಕನ್ವಿಕ್ಷನ್ ಇರಬೇಕು. ಶ್ರೀಮಾನ್ ಆಂಟೋನಿಯವರು ಕೇರಳ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ದಿವಂಗತ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ಕೇರಳ ರಾಜ್ಯಕ್ಕೆ ಪ್ರವಾಸ ಹೋಗಿದ್ದಾಗ ಯಾವುದೋ ಕಾರ್ಯಕ್ರಮಕ್ಕೆ ಹೋಗುವುದಿತ್ತು. ಅದು ಒಂದು ಧಾರ್ಮಿಕ ಸಂಸ್ಥೆಗೆ ಸಂಬಂಧಪಟ್ಟ ಕಾರ್ಯಕ್ರಮ. ನಾನು ಅದರಲ್ಲಿ ಪಾಲ್ಗೊಳ್ಳುವುದಿಲ್ಲ, ಅದು ನಮ್ಮ ಸೆಕ್ಯುಲರಿಸಂ ಇಮೇಜ್‌ಗೆ ಅಡ್ಡ ಬರುತ್ತದೆ. ಆದ್ದರಿಂದ ಪ್ರಧಾನ ಮಂತ್ರಿಗಳು ಬಂದಾಗ ಹೋಗುವುದಿಲ್ಲ ಎಂದು ಅವರು ಹೊರಗುಳಿದರು. ಇದನ್ನು ನಾವು ಕನ್ವಿಕ್ಷನ್ ಎಂದು ಕರೆಯುತ್ತೇವೆ. ವಿಶ್ವ ಕನ್ನಡ ಸಮ್ಮೇಳನ ಮಾಡಬೇಡಿ, ಬರಗಾಲ ಇದೆಯೆಂದು ಹೇಳಿ, ಅದಕ್ಕೆ ನಾವು ಬರುವುದಿಲ್ಲವೆಂದು ಹೇಳಿದವರು ಬಂದರು. ಪ್ರಧಾನ ಮಂತ್ರಿಗಳೂ ಕೂಡ ಬಂದರು.

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಸದಸ್ಯರು ಕನ್ವಿಕ್ಷನ್ ಬಗ್ಗೆ ಹೇಳುತ್ತಿದ್ದಾರೆ. ಈ ಕಡೆಯಿಂದ ಆ ಕಡೆಗೆ ಹೋದ ಅವರ ಕನ್ವಿಕ್ಷನ್ ಎಷ್ಟು? ಇನ್ನೊಬ್ಬರಿಗೆ ಹೇಳುವಾಗ, ಅದನ್ನು ಹೇಳುವಂಥ ನೈತಿಕ ಹಕ್ಕು ಇದ್ದರೆ ಮಾತ್ರ ಅದು ರಿಲೆವೆಂಟ್ ಆಗುತ್ತದೆ. ಇಲ್ಲದಿದ್ದರೆ ಅವರು ಹೇಳುವುದು ಇರ್ರಿಲೆವೆಂಟ್ ಆಗುತ್ತದೆ.

ಶ್ರೀ ವೇದಾಂತ ಹೆಮ್ಮಿಗೆ.—ಅತ್ತೆಯನ್ನು ಕಂಡರೆ ಆಗದ ಸೊಸೆಗೆ ಕುಡಿಯುವ ನೀರಿನಲ್ಲಿ ಕಲ್ಲು ಸಿಕ್ಕಿತು ಎಂದು ಹೇಳಿದ ಹಾಗೆ ಇವರು ಹೇಳುತ್ತಿದ್ದಾರೆ.

ಶ್ರೀ ಬಿ. ಎ. ಉಮರಬ್ಬ.—ಅದು ಕುಡಿಯುವ ನೀರಿನಲ್ಲಿ ಅಲ್ಲ. ಮೊಸರಲ್ಲಿ ಕಲ್ಲು ಸಿಕ್ಕಿತು ಎಂದು ಗಾದೆ ಮಾತು ಹೇಳಲಿಕ್ಕೂ ನಿಮಗೆ ಬರುವುದಿಲ್ಲ.

ಶ್ರೀ ರಮೇಶಕುಮಾರ್.—ಇಲ್ಲಿ ಮಾನ್ಯ ಬಸವಲಿಂಗಪ್ಪ, ಕೆ. ಎಚ್. ಪಾಟೀಲರು ಇದ್ದಾರೆ. ಹಿಂದೆ ಶ್ರೀ ಬೊಮ್ಮಾಯಿ ಅವರು ವಿರೋಧ ಪಕ್ಷದ ನಾಯಕರಾಗಿದ್ದರು. ಪಿ. ಎ. ಸಿ. ಚೇರ್ಮನ್‌ರಾಗಿದ್ದರು. ಆಗ ನಾನು ಸಮಿತಿಯ ಸದಸ್ಯನಾಗಿದ್ದೆ. ನಾನು ಹೇಗಿದ್ದೆ, ನನ್ನ ನಿಷ್ಠೆ ಹೇಗಿತ್ತು ಎನ್ನುವುದು ಇವರಿಗೆಲ್ಲಾ ಗೊತ್ತಿದೆ. ಇದಲ್ಲದೆ ಪಕ್ಷದ ಸಭೆಗಳಲ್ಲಿ ನನ್ನ ಕನ್ವಿಕ್ಷನ್ ಏನಿತ್ತು ನನ್ನ ಧೋರಣೆ ಏನಿತ್ತು ಎಂಬುದು ನಿಮಗೆ ಗೊತ್ತಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೇ, ವಿಷಯ ಎಲ್ಲೆಲ್ಲಿಗೋ ಹೋಗುತ್ತಿದೆ.

ಶ್ರೀ ರಮೇಶ್ ಕುಮಾರ್.—ಯಾವ ಸಿದ್ಧಾಂತದಲ್ಲಿ ನಂಬಿಕೆ ಇರುತ್ತದೆಯೋ, ನಮ್ಮ ಜೀವನದಲ್ಲಿ ಬೆಳೆದುಕೊಂಡು ಬಂದಿರತಕ್ಕ ಪರಿಸರದಲ್ಲಿ ಆಗಿರತಕ್ಕಂಥ ಕಷ್ಟನಷ್ಟಗಳನ್ನು ಗಮನದಲ್ಲಿಟ್ಟುಕೊಂಡು ಯಾವ ರೀತಿ ನಡೆದುಕೊಳ್ಳಬೇಕು, ಆ ಸಿದ್ಧಾಂತಕ್ಕೆ ಹೇಗೆ ಕಟ್ಟುಬೀಳತಕ್ಕದ್ದು ಎಂಬುದು ನಮ್ಮ ಜೀವನ ಶೈಲಿಯಾಗುತ್ತದೆ. ಇವರು ಚುಚ್ಚಿ ಚುಚ್ಚಿ ಹೆಚ್ಚು ವಿಷಯ ಹೊರಬರುವಂತೆ ಮಾಡುತ್ತಾರೆ.

ಶ್ರೀ ಬಿ. ಎ. ಉಮರಬ್ಬ.—ಹಾಗೆ ಬಂದಾಗಲೇ ಸತ್ಯ ಹೊರಬರುವುದು.

ಶ್ರೀ ರಮೇಶ್ ಕುಮಾರ್.—ಹಿಂದೆ ಶ್ರೀಮಾನ್ ದೇವರಾಜ್ ಅರಸು ಅವರು ವಿರೋಧಪಕ್ಷದಲ್ಲಿ ಇದ್ದರು ..

ಶ್ರೀ ಪಟಮಕ್ಕಿ ರತ್ನಾಕರ್.—ಅಧ್ಯಕ್ಷರೇ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ಇದೇನು ಬರಗಾಲದ ವಿಚಾರದ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆಯೋ? ಅವರು ಹೇಳುತ್ತಿರುವ ವಿಚಾರಕ್ಕೂ ಬರಗಾಲಕ್ಕೂ ಏನು ಸಂಬಂಧ? ಅದು ನಮಗೆ ಬೇಕು. ಈಗ ಪಕ್ಷಾಂತರದ ಬಗ್ಗೆ ಮಾತನಾಡುವ ಅವಶ್ಯಕತೆ ಇದೆಯೆ?

ಚೇರ್ಮನ್.—ಅವರು ಬರಗಾಲದ ಬಗ್ಗೆಯೇ ಮಾತನಾಡುತ್ತಿದ್ದಾರೆ.

ಶ್ರೀ ಬಿ. ಎ. ಉಮರಬ್ಬ.—ಇನ್ನೂ ಅನೇಕ ಜನರು ಮಾತನಾಡುವವರಿದ್ದಾರೆ ವಿಶೇಷ ಸಲಹೆಗಳನ್ನು ಸಂಬಂಧಪಟ್ಟ ವಿಷಯದ ಬಗ್ಗೆ ಕೊಟ್ಟರೆ ಪ್ರಯೋಜನ ಆದೀತು. ಅದು ಬಿಟ್ಟು ದೇವರಾಜ ಅರಸುರವರ ಬಗ್ಗೆ ಮಾತನಾಡುವುದಾದರೆ, ವೇದಾಂತದ ಬಗ್ಗೆ ಮಾತನಾಡುವುದಾದರೆ ನಾನು, ಶ್ರೀಮಾನ್ ಹೆಮ್ಮಿಗೆ ಮತ್ತು ಮಾನ್ಯ ಸದಸ್ಯರು ಪ್ರತ್ಯೇಕರಾಗಿ ಕುಳಿತು ಮಾತನಾಡೋಣ.

(ಗೊಂದಲ)

ಚೇರ್ಮನ್.—ಮಾನ್ ರಮೇಶ್ ಕುಮಾರ್‌ರವರೇ, ನೀವು ವಿಷಯದ ಬಗ್ಗೆ ಮಾತನಾಡಿ. ಬೇರೆ ಏನೂ ಹೇಳುವುದು ಬೇಡ.

ಶ್ರೀ ರಮೇಶ್ ಕುಮಾರ್.—ಶ್ರೀ ರತ್ನಾಕರ್ ಅವರು ಮಾತನಾಡಿ ನಾನು ಬರಗಾಲದ ಬಗ್ಗೆ ಮಾತನಾಡುತ್ತಿದ್ದೇನೆಯೆಂದು ಕೇಳಿದರು. ನಾನು ಕೇಳುತ್ತೇನೆ. ಅವರ ನಾಯಕರು ವಿಷಯವನ್ನು ಬಿಟ್ಟು ಮಧ್ಯೆ ಮಧ್ಯೆ ಎಷ್ಟು ಬೇರೆ ವಿಷಯಗಳನ್ನು ಪ್ರಸ್ತಾಪ ಮಾಡಿಲ್ಲ? ಅವರು ಎಷ್ಟು ಸಮಯ ತೆಗೆದುಕೊಂಡಿದ್ದಾರೆ?

ಶ್ರೀ ಬಿ. ಎ. ಉಮರಬ್ಬ.—ಯಾರು ಏನೇ ಮಾತನಾಡಿದರೂ, ಅಂತಿಮವಾಗಿ ಉತ್ತರ ಕೊಡಲಿಕ್ಕೆ ಮಾನ್ಯ ಕಂದಾಯ ಮಂತ್ರಿಗಳು ಇದ್ದಾರೆ...

(ಗೊಂದಲ)

ಚೇರ್ಮನ್.—ಮಾನ್ಯ ರಮೇಶ್ ಕುಮಾರ್‌ರವರೇ, ನೀವು ಸಾಕಷ್ಟು ಸಮಯ ತೆಗೆದುಕೊಂಡಿದ್ದೀರಿ. ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಿ.

ಶ್ರೀ ರಮೇಶ್ ಕುಮಾರ್.—ನಾನು ಕೂಡ ಟೀಕೆ ಮಾಡಿದ್ದೇನೆ ಮತ್ತು ಕೆಲವು ಉತ್ತಮವಾದ ಸಲಹೆಗಳನ್ನು ಕೂಡ ಕೊಟ್ಟಿದ್ದೇನೆ. ಅವರಿಗೆ ನನ್ನ ಕನ್ನಡ ಅರ್ಥವಾಗುತ್ತಿಲ್ಲವೋ ಏನೋ ? ನನ್ನ ಮಾತೃಭಾಷೆ ತೆಲುಗು. ಆದರೂ ಕೂಡ ಕಷ್ಟಪಟ್ಟು ಕನ್ನಡ ಕಲಿತು ಮಾತನಾಡುತ್ತಿದ್ದೇನೆ. ನನಗೆ ತಿಳಿದಿರತಕ್ಕಂಥ ಕನ್ನಡದಲ್ಲಿ ಕ್ಲಿಯರ್ ಆಗಿ ಬರಗಾಲದ ಬಗ್ಗೆ ಹೇಳಿದ್ದೇನೆ. ಗ್ರೌಂಡ್ ವಾಟರ್ ಬಗ್ಗೆ ಹೇಳಿದ್ದೇನೆ. ಅವರು ಕಿವಿಯಲ್ಲಿ ಹತ್ತಿ ಇಟ್ಟುಕೊಂಡು ಕುಳಿತಿದ್ದಾರೆಯೋ ಗೊತ್ತಿಲ್ಲ. ನಾನು ಮಾತನಾಡುವಾಗ ವಿವರಗಳನ್ನು ಕೊಟ್ಟು, ಅಂಕಿಅಂಶಗಳನ್ನು ಕೊಟ್ಟು ಮಾತನಾಡಿದ್ದೇನೆ, ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ನಮ್ಮ ಖಾಸಗಿ ಜೀವನದ ಶೈಲಿ ಬದಲಾದರೆ, ಮುಂಚೆಗಿಂತ ಆರ್ಥಿಕ ಸ್ಥಿತಿಗತಿಗಳು ಉನ್ನತ ಮಟ್ಟಕ್ಕೆ ಹೋದರೆ, ಸಾಮಾನ್ಯ ಜನಜೀವನದಿಂದ ನಾವು ದೂರವಾದರೆ ಹೆಚ್ಚು ಉತ್ತಮವಾದ ಸಲಹೆಗಳನ್ನು ನಮ್ಮಿಂದ ಕೊಡುವುದಕ್ಕೆ ಆಗುವುದಿಲ್ಲ. ಆಗ ಇಂತಹ ಒಂದು ಪರಿಸ್ಥಿತಿ ಉದ್ಭವವಾಗುತ್ತದೆ,

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಅಧ್ಯಕ್ಷಿಣಿಯವರೇ,

ಚೇರ್ಮನ್.—ಮಧ್ಯೆ ಏಕೆ ತಾವು ಮಾತನಾಡುತ್ತೀರಿ ?

ಶ್ರೀ ಬಿ. ಎ. ಉಮರಬ್ಬ.—ಬರಗಾಲದ ವಿಷಯ ಬಿಟ್ಟು ಇವರು ಇದೇ ರೀತಿ ಮಾತನಾಡುತ್ತಾ ಹೋದರೆ...

ಚೇರ್ಮನ್.—ಅವರ ಅಭಿಪ್ರಾಯ ಅವರು ಹೇಳುತ್ತಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಇದು ಚರ್ಚೆಯಾಗಬೇಕೆಂಬುದು ನಮ್ಮ ಉದ್ದೇಶ. ಆದರೆ ಒಬ್ಬರು ಮಾತನಾಡುವಾಗ ಮಧ್ಯೆ ಮಧ್ಯೆ ಎದ್ದು ನಿಂತರೆ ಚರ್ಚೆಯಾಗುವುದು ಸಾಧ್ಯ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಎಷ್ಟು ಹೊತ್ತು ಮಾತನಾಡಿದರು. ಯಾರಾದರೂ ಮಧ್ಯೆ ಎದ್ದು ನಿಂತು ಮಾತನಾಡಿದ್ದಾರೆಯೇ ?

ಚೇರ್ಮನ್.—ಹೌದು. ಎಲ್ಲರೂ ನಿಶ್ಶಬ್ದವಾಗಿ ಕುಳಿತು ಕೇಳಿದ್ದರು.

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಪಕ್ಷದವರಿಗೆ ನೀವು ಅಡ್ಡಿ ಮಾಡಿದರೆ, ನೀವು ಮಾತನಾಡುವಾಗ ಅವರು ಅಡ್ಡಿ ಮಾಡುತ್ತಾರೆ. ಹಾಗೇನಾದರೂ ಮಾತನಾಡುವಾಗ ಅನ್‌ಪಾರ್ಲಿಮೆಂಟರಿ ಪದವೇನಾದರೂ ಉಪಯೋಗಿಸಿದರೆ ಸಭೆಯನ್ನು ಹತೋಟಿಯಲ್ಲಿ ತರಲು ಮಾನ್ಯ ಅಧ್ಯಕ್ಷಿಣಿಯವರು ಇದ್ದಾರೆ. ಅದು ಬಿಟ್ಟು ಈ ರೀತಿ ಮಧ್ಯೆ ಮಧ್ಯೆ ಎದ್ದು ನಿಂತು ಮಾತನಾಡುವುದು ಸರಿಯಲ್ಲ.

ಶ್ರೀ ಬಿ. ಎ. ಉಮರಬ್ಬ.—ಅಡ್ಡ ಮಾತನಾಡಬೇಕೆಂದು ನನ್ನ ಉದ್ದೇಶ ಅಲ್ಲ. ಇನ್ನೂ ಬಹಳ ಜನರು ಮಾತನಾಡುವವರಿದ್ದಾರೆ. ಅವರಿಗೂ ಟೈಂ ಸಿಗಬೇಕಲ್ಲ ?

ಚೇರ್ಮನ್,—ನೀವು ಮಧ್ಯೆ ಪ್ರವೇಶ ಮಾಡಿದ್ದರಿಂದ ತಡವಾಯಿತು, ಇಲ್ಲದೇ ಹೋಗಿದ್ದಾಗ ಇಷ್ಟು ಹೊತ್ತಿಗೆ ಅವರು ಮಾತನಾಡಿ ಮುಗಿಸುತ್ತಿದ್ದರು.

ಶ್ರೀ ರಮೇಶ್ ಕುಮಾರ್.—ಅವರು ನಿನ್ನೆ ಮಾತನಾಡಿದ್ದೆಲ್ಲ ಕೇಳಿ ನಾನು ಇಷ್ಟೆಲ್ಲ ಮಾತನಾಡ ಬೇಕಾಗಿತ್ತು. ಇಲ್ಲದಿದ್ದರೆ ಕುಳಿತುಕೊಂಡುಬಿಡುತ್ತಿದ್ದೆ. ಕೆಲವು ಜನಗಳಿಗೆ ತಾವು ನೇರವಾಗಿ ಕಾಣುತ್ತಿರುವಂಥ, ಸುತ್ತಮುತ್ತ ನಡೆಯುತ್ತಿರುವ ವಿದ್ಯಮಾನಗಳೇ ಗೊತ್ತಿಲ್ಲದೆ ಅಥವಾ ತಿಳಿದು ಕೊಳ್ಳಲಿಕ್ಕೆ ಹೋಗದೆ ನಾಲ್ಕು ಅಥವಾ ಐದು ಗಂಟೆ ಬೇಕಾದರೂ ಮಾತನಾಡಲು ಮಾತ್ರ ಆಗುತ್ತದೆ. ಆಗ ನಾವು ಹೇಗೆ ಸುಮ್ಮನೆ ಕುಳಿತಿರುವುದು ? ಹಾಗೆ ಮಾತನಾಡುವವರು ಯಾವ್ಯಾವ ಸಂದರ್ಭಗಳಲ್ಲಿ ಹೇಗೆ ಬದುಕಿದ್ದರು, ಯಾವ ವಿಷಯಗಳಿಗಾಗಿ ಹೋರಾಡಿದರು ಎಂಬುದನ್ನು ನಾವೂ ನೋಡಬೇಕಲ್ಲವೇ?

ಇವೊತ್ತಿನ ದಿವಸ ದೇವರಾಜ ಅರಸರು ಬದುಕಿಲ್ಲ. ಅವರು ಮುಖ್ಯಮಂತ್ರಿಗಳಾಗಿ ಈ ಕಡೆ ಕುಳಿತಿದ್ದಾಗ ಇದೇ ಬಂಗಾರಪ್ಪನವರು ಆ ಕಡೆ ವಿರೋಧ ಪಕ್ಷದ ನಾಯಕ ಸ್ಥಾನದಲ್ಲಿ ಕುಳಿತು. ನೀವು ನೀವು ಪನಾಮಾ ಸಿಗರೇಟ್ ಹಿಂದೆ ಸೇದುತ್ತಿದ್ದವರು ಇಂದು ಪೈಪ್ ಬಳಸೋ ಮಟ್ಟಕ್ಕೆ ಹೇಗೆ ಬಂದಿರಿ. ಎಂದು ಚುಚ್ಚಿದ್ದರು. ನಿನ್ನೆಯೂ ಸಹ ಬಂಗಾರಪ್ಪನವರು ಮಾತನಾಡುವಾಗ ಹೆಚ್ಚು ಕಡಿಮೆ ಅದೇ

ಘಾಟಿಯಲ್ಲೇ ಮಾತನಾಡಿದರು. ಏನೆಂದರೆ ನಿಮ್ಮ ನೇತೃತ್ವದಲ್ಲಿ ದನಕರುಗಳು ಸಾಯುತ್ತಿವೆ, ಜನಗಳಿಗೆ ಕುಡಿಯಲು ನೀರಿಲ್ಲ. ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂದರು. ಮಾನ್ಯ ಸಭಾಧ್ಯಕ್ಷಿಣಿಯವರೇ, ನನ್ನ ಪ್ರದೇಶದಲ್ಲಿ ಹಿಂದೆ ಬರಗಾಲ ಬಂದಿದ್ದಾಗ ಅವರು ಏನೇನು ಮಾಡಿದ್ದರು, ಇವೊತ್ತು ಜನತಾ ಸರ್ಕಾರ ಏನೇನು ಮಾಡಿದೆ ಎಂಬುದನ್ನು ಆಗಲೇ ನಾನು ಹೇಳಿ ವ್ಯತ್ಯಾಸ ತೋರಿಸಿ ಕೊಟ್ಟಿದ್ದೇನೆ. ಹೇಳುವುದಕ್ಕೇನು ಎಲ್ಲರೂ ಹೇಳಬಹುದು. ಉಪ್ಪಿಟ್ಟು ತಿಂದು ಬದುಕುತ್ತಿದ್ದ ಜನ ಇವತ್ತು ಬಾದಾಮಿ ತಿಂದು ಹೊಟ್ಟೆ ಕರಗಿಸಿಕೊಳ್ಳುವ ಮಟ್ಟಕ್ಕೆ ಇವರು ಹೇಗೆ ಬಂದರು ಎಂದು ನಾನು ಕೇಳುತ್ತೇನೆ. ಈ ಗಾದೆ ಅವರಿಗೆ ರುಚಿಸೀತೇ ? ಬಡತನದ ಜೀವನ ಶೈಲಿಯೇ ಗೊತ್ತಿಲ್ಲದ ಈ ಜನ ಕೇವಲ ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳುವುದರಲ್ಲೇ ತೊಡಗಿದ್ದ ಈ ಜನ ಇವತ್ತು ನಾಟಕೀಯವಾಗಿ ಮಾತನಾಡುತ್ತಾ ಬರಗಾಲದ ಬಗ್ಗೆ, ಬವಣೆಯ ಬಗ್ಗೆ ನೈಜ ಸ್ಥಿತಿಯನ್ನು ಮಂಡಿಸಲು ಸಾಧ್ಯವಿಲ್ಲ. ಒಂದು ಪಕ್ಷ ಅವರು ಹಾಗೆ ಮಾಡಲು ವಿಫಲ ಪ್ರಯತ್ನ ನಡೆಸಿದರೂ ಅದಕ್ಕೆ ಬೆಲೆ ಕಟ್ಟಲು ಜನ ಸಿದ್ಧರಿಲ್ಲ.

† ಶ್ರೀ ಪಟಮಕ್ಕಿ ರತ್ನಾಕರ.—ಮಾನ್ಯ ಅಧ್ಯಕ್ಷಿಣಿಯವರೇ, ಅದೇನೋ ಉಪ್ಪಿನಕಾಯಿ ಉಪ್ಪಿಟ್ಟೋ ಎಂದು ಇವರು ಹೇಳುತ್ತಿದ್ದಾರಲ್ಲ ಅದನ್ನು ಅವರು ಹಿಂತೆಗೆದುಕೊಳ್ಳಬೇಕು. ನಮ್ಮ ನಾಯಕರಾಗಲೀ, ನಾವೇ ಆಗಲಿ ಎಂದಿಗೂ ಹಾಗೇ ಇದ್ದವರಲ್ಲ.

ಶ್ರೀ ಬಿ. ಎ. ಉಮರಬ್ಬ.—ಯಾರು ಬಾದಾಮಿ ಸಪ್ಲೈ ಮಾಡುತ್ತಿರುವುದು ? ಇವರೇ ಏನಾದರೂ ಆ ಕೆಲಸ ಮಾಡುತ್ತಿದ್ದಾರೆಯೋ ?

ಶ್ರೀ ರಮೇಶ್ ಕುಮಾರ್.—ಮಾನ್ಯ ರತ್ನಾಕರ್‌ರವರೇ ನಾನೂ ನೀವೂ ಇನ್ನೂ ಉಪ್ಪಿಟ್ಟು ತಿನ್ನೋ ಸ್ಥಿತೀಲೇ ಇದ್ದೀವಿ. ಕುಳಿತುಕೊಳ್ಳಿ. ಸುಮ್ಮನೆ ಏಕೆ ಎದ್ದು ನಿಲ್ಲುತ್ತೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಆಗಲೇ ತಮ್ಮ ಪಕ್ಷದ ಎಲ್ಲಾ ಸದಸ್ಯರು ಒಂದು ತಿಂಗಳ ಸಂಬಳವನ್ನು ಮುಖ್ಯ ಮಂತ್ರಿಗಳ ಬರಪರಿಹಾರಕ್ಕೆಂದು ಕೊಡುವುದಾಗಿ ಹೇಳಿದರು. ನಮ್ಮ ಮುಖ್ಯಮಂತ್ರಿಗಳು ನಮಗೆ ಅನೇಕ ಸುತ್ತೋಲೆಗಳನ್ನು ಕಳುಹಿಸಿಕೊಟ್ಟಿದ್ದಾರೆ. ಅದರಲ್ಲೇನಿದೆ ಎಂದರೆ ಮಂತ್ರಿಗಳು ವಾರದ ಐದೂ ದಿವಸ ತಮ್ಮ ಸ್ವಂತ ಜಿಲ್ಲೆಗಳಲ್ಲಿದ್ದು ಪರಿಹಾರ ಕಾರ್ಯಗಳ ಉಸ್ತುವಾರಿ ನೋಡಿಕೊಳ್ಳುವಂತೆ ಸೂಚಿಸಿದ್ದಾರೆ. ಅಲ್ಲದೆ ಇಂಥ ಸಮಯದಲ್ಲಿ ಯಾವ ಮಂತ್ರಿಯೇ ಆಗಲಿ ಸಭೆ ಸಮಾರಂಭಗಳಲ್ಲಿ ಭಾಗವಹಿಸಬಾರದು, ದುಂದುವೆಚ್ಚಕ್ಕೆ ಅವಕಾಶ ಕೊಡಬಾರದು, ಒಂದು ಪಕ್ಷ ಸಭೆ ಸಮಾರಂಭ ಮಾಡುವುದೇ ಆದರೆ ತುಂಬ ಸರಳ ರೀತಿಯಲ್ಲಿ ಮಾಡಬೇಕೆಂದಿದ್ದಾರೆ. ಹಾಗೆಯೇ ನಮ್ಮ ಮುಖ್ಯ ಮಂತ್ರಿಗಳು ನಮ್ಮ ಶಾಸಕ ಮಂತ್ರಿಗಳ ಒಂದು ತಿಂಗಳ ಸಂಬಳವನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆಂದು ಕೊಡಲು ತೀರ್ಮಾನ ತೆಗೆದುಕೊಂಡಿದ್ದಾರೆ. ಆ ತೀರ್ಮಾನಕ್ಕೆ ನಾವೆಲ್ಲ ಬದ್ಧರಿದ್ದೇವೆ. ಅದನ್ನು ನಮ್ಮ ಪಕ್ಷ ಮಾಡುತ್ತದೆ.

ಮಾನ್ಯ ಪ್ರಕಾಶ್‌ರವರು ಬಳ್ಳಾರಿಯಲ್ಲಿ ದೊಡ್ಡ ಸನ್ಮಾನ ಸಮಾರಂಭ ಮಾಡಿಸಿಕೊಂಡರು ಎಂದು ನಿನ್ನೆ ಅವರು ಆರೋಪಿಸಿದರು. ಪ್ರಕಾಶರೇನು ಆನೆಮೇಲೆ ಅಂಬಾರಿ ಸೇವೆ ಮಾಡಿಸಿಕೊಂಡ್ರೇನು ? ಶಾಲು ಹೊದೆಸಿಕೊಂಡರೇನು ? ಇದ್ಯಾವುದನ್ನೂ ಅವರು ಅಲ್ಲಿ ಮಾಡಲಿಲ್ಲ. ಅದಕ್ಕೇ ಇಷ್ಟು ಹೇಳುತ್ತೇನೆ. ಬಡತನ ನಿವಾರಣೆಯ ಪ್ರಯತ್ನದಲ್ಲಾಗಲೀ, ಪ್ರಜಾಪ್ರಭುತ್ವದ ಮೌಲ್ಯರಕ್ಷಣೆಯಲ್ಲಾಗಲೀ, ಹಳ್ಳಿಗಾಡಿನ ಏಳಿಗೆಯಲ್ಲಾಗಲೀ ಅವರಿಗಿಂತ ನಮಗೆ ಜಾಸ್ತಿ ಕಾಳಜಿ ಇಲ್ಲದಿದ್ದರೂ ಅವರಿಗೆ ಸರಿಸಮಾನವಾಗಿ ನಮಗೂ ಕಾಳಜಿ ಇದೆ. ನಾಟಕೀಯವಾಗಿ ಪ್ರತಿಪಾದಿಸುವುದಕ್ಕೂ ನೈಜವಾದ ಹಿನ್ನೆಲೆಯಲ್ಲಿ ಬದುಕಿ ಅದನ್ನೇ ಮನಸ್ಸಿಗೆ ನೋವಾದರೂ ಪರವಾಗಿಲ್ಲ ಎಂದು ಹೇಳುವುದಕ್ಕೂ ಬಹಳ ವ್ಯತ್ಯಾಸ ಇದೆ. ಈ ದೇಶದ ಜನ ಕೂಡ ಸಮಯ ಕಳೆದಂತೆ ಪ್ರಜ್ಞಾವಂತರಾಗುತ್ತಿದ್ದಾರೆ. ಆ ಜನ ಏನು ತೀರ್ಮಾನ ಕೊಡುತ್ತಾರೋ ಅದಕ್ಕೆ ನಾವು ಯಾವಾಗಲೂ ಅವರ ಆಶೀರ್ವಾದವೆಂದೇ ಬದ್ಧರಾಗಿರುತ್ತೇವೆ. ಏಕೆಂದರೆ ಜನತೆಗೆ ಚೆನ್ನಾಗಿ ಈಗ ತಿಳಿವಳಿಕೆ ಬಂದಿದೆ.

ಮಾನ್ಯ ಖರ್ಗೆಯವರು ಈಗ ಬಂದಿದ್ದಾರೆ. ನಾನು ಆಗ ಹೇಳಿದಾಗ ಅವರಿರಲಿಲ್ಲ. ಅವರು ಕಂದಾಯ ಮಂತ್ರಿಗಳಾಗಿದ್ದಾಗ ಏನೇನು ಮಾಡುತ್ತೇನೆಂದು ಹೇಳಿದ್ದರೋ ಅದನ್ನೆಲ್ಲ ರೆಕಾರ್ಡ್ಸ್ ತೆಗೆಸಿ ನೋಡಲಿ. ಅಲ್ಲದೆ ಇಂಥ ಕಷ್ಟದ ಸಮಯದಲ್ಲಿ ಸರ್ಕಾರ ಎದುರಿಸುವ ಕಷ್ಟಕಾರ್ಪಣ್ಯಗಳೆಷ್ಟು

ಎಂಬುದು ಅವರಿಗೂ ತಿಳಿದಿದೆ. ಅದನ್ನೆಲ್ಲಾ ಅವರು ಆಗಲೇ ಹೇಳಿಕೊಂಡಿದ್ದಾರೆ. ಅಂಥ ಕಷ್ಟಗಳನ್ನೆಲ್ಲ ಬಿಡಿಸಿಕೊಂಡು ಸರ್ಕಾರ ಇನ್ನೂ ಮುಂದೆ ಹೋಗಿ ಪರಿಹಾರದಲ್ಲಿ ತೊಡಗಿರುವಾಗ.........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ಮನೆಯಿಂದ ಮತ್ತು ಈ ಮನೆಯಿಂದ ಒಟ್ಟು ೧(ಸದಸ್ಯರ ಸಮಿತಿ ಮಾಡಿ ರಾಜ್ಯದಲ್ಲಿ ಪ್ರವಾಸಮಾಡಿ ಏನೇನು ಪರಿಹಾರ ಮಾಡಬೇಕೆಂದು, ನಾನು ಏನು ರಿಪೋರ್ಟ್ ಕೊಟ್ಟಿದ್ದೇನೆ. ಅದನ್ನು ಯುನಾನಿಮಸ್ಸಾಗಿ ಒಪ್ಪಿಕೊಂಡು ಅದೇ ರೀತಿ ಕೆಲಸ ಮಾಡುವುದಕ್ಕೆ ನೀವು ಏಕೆ ಮುಂದಾಗುತ್ತಿಲ್ಲ ?

ಶ್ರೀ ರಮೇಶ್ ಕುಮಾರ್.—ಆ ಪ್ರಶ್ನೆಗೆ ಕಂದಾಯ ಮಂತ್ರಿಗಳು ಉತ್ತರ ಹೇಳುತ್ತಾರೆ. ನಾನು ಏಕೆ ಹೇಳಲಿ ? ಇಷ್ಟನ್ನು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೂ, ಮಧ್ಯೆಮಧ್ಯೆ ಪ್ರವೇಶಿಸಿ ಮಾತಾಡುತ್ತಿದ್ದ ಸ್ವಾಮಿಯವರಿಗೂ ಮತ್ತು ನನ್ನ ವಿರೋಧ ಪಕ್ಷದ ಸದಸ್ಯರೆಲ್ಲರಿಗೂ ನನ್ನ ನಮಸ್ಕಾರಗಳನ್ನು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷಿಣಿಯವರೇ, ವಿರೋಧ ಪಕ್ಷದ ನಾಯಕರು ಮತ್ತೆ ನಮ್ಮ ಸ್ನೇಹಿತರು ಬಹಳ ಸುದೀರ್ಘವಾದ ಭಾಷಣಗಳನ್ನು ಬರಗಾಲದ ಮೇಲೆ ಮಾಡಿದ್ದಾರೆ. ಈಗ ಮುಖ್ಯವಾಗಿ ಕೆಲವು ಅಂಶಗಳನ್ನು ಈ ಸದನದ ಗಮನಕ್ಕೆ ನಾನು ತರಲು ಇಷ್ಟಪಡುತ್ತೇನೆ. ನಮ್ಮ ಕಂದಾಯ ಸಚಿವರು ಕೊಟ್ಟಿರತಕ್ಕಂಥ ಹೇಳಿಕೆಯಲ್ಲಿ ಬರಗಾಲದ ಬಗ್ಗೆ ಬೇಕಾದಷ್ಟು ಕಂಟ್ರಾಡಿಕ್ಟ್ರಿ ಆದ ಮೆಟೀರಿಯಲ್ ಇದೆ. ಹೆಚ್ಚಿನ ವಿವರಣೆಗಳಿಗೆ ಹೋಗುವ ಅವಶ್ಯಕತೆ ಇಲ್ಲ. ಅದರಲ್ಲಿ ಮುಖ್ಯವಾದದ್ದೇನೆಂದರೆ, ಅವರು ಹೇಳುತ್ತಾರೆ. ೧೯೮೫ರ ಆಗಸ್ಟ್ ಕೊನೆಯ ವೇಳೆಗೆ ೧೫,೮೦೦ ಗ್ರಾಮಗಳು ತೀವ್ರ ಪರಿಸ್ಥಿತಿಯಲ್ಲಿದ್ದವೆಂದು. ಆದರೆ ಕಂದಾಯ ಮಾಫಿ ಮತ್ತು ೧೦೦ ಪರ್ಸೆಂಟ್ ಸಸ್ಪೆನ್‌ಷನ್, ೫೦ ಪರ್ಸೆಂಟ್ ಸಸ್ಪೆನ್‌ಷನ್ ಲೆಕ್ಕಾಚಾರವನ್ನು ೧೪ ಸಾವಿರ ಹಳ್ಳಿಗಳಿಗೆ ಮಾತ್ರ ತೋರಿಸಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—ಅದರಲ್ಲಿ ಸಸ್ಪೆನ್‌ಷನ್‌ದು ಹೋದವರ್ಷದ್ದೂ ಸೇರಿದೆ. ಅಂದರೆ ೧೯೮೪-೮೫ರದೂ ಸೇರಿದೆ. ನೋಟಿಫಿಕೇಷನ್ ಇಷ್ಯೂ ಆಗುವುದು ತಡವಾಗುತ್ತದೆ ಅಷ್ಟೇ. ಅಲ್ಲಿಯವರೆಗೂ ನಾವು ಕಾಯದೆ ಮೊದಲೇ ತೀರ್ಮಾನ ತೆಗೆದುಕೊಂಡಾಗಲೇ ಈ ವರ್ಷದ ಫಿಗರ್ಸ್ ಸೇರಿಸಿಕೊಂಡಿದ್ದೇವೆ.

ಶ್ರೀ ಯು. ಭೂಪತಿ.—ಅದೇ ರೀತಿಯಾಗಿ ಬರಗಾಲಕ್ಕೆ ತುತ್ತಾದ ಜನತೆಯ ಚಿತ್ರಣವನ್ನು ಕೊಟ್ಟಿದ್ದಾರೆ. ಸಣ್ಣ ರೈತರು ಅತಿ ಸಣ್ಣ ರೈತರ ಒಟ್ಟು ೧೬.೩೨ ಲಕ್ಷ ಕುಟುಂಬಗಳು ಬರಗಾಲಕ್ಕೆ ತುತ್ತಾಗಿವೆ. ಅನಂತರ ಕೃಷಿ ಕಾರ್ಮಿಕರು ೨೪.೬೩ ಲಕ್ಷ ಬರಗಾಲಕ್ಕೆ ಒಳಗಾಗಿದ್ದಾರೆಂದು ಹೇಳಿ, ಅದೇ ಹೇಳಿಕೆಯಲ್ಲಿ ಕೊನೆಗೆ ಒಂದು ಕಡೆ ಹೇಳುತ್ತಾರೆ, ನಾವು ದಿನಕ್ಕೆ ಒಂದು ಕೋಟಿಯಂತೆ ೮ ಲಕ್ಷ ಜನರಿಗೆ ಉದ್ಯೋಗವನ್ನು ಒದಗಿಸುವ ಯೋಜನೆಯನ್ನು ಮಾರ್ಚಿ ಅಂತ್ಯದೊಳಗಾಗಿ ಮಾಡುತ್ತೇವೆ ಎಂದು. ಅವರು ಹೇಳುವ ಪ್ರಕಾರ ಈಗಾಗಲೇ ಸುಮಾರು ೨೩ ಲಕ್ಷ ಕೃಷಿ ಕಾರ್ಮಿಕರು ತೊಂದರೆಗೆ ಒಳಗಾಗಿ, ನಮ್ಮ ಸರ್ಕಾರ, ಜನತಾ ಸರ್ಕಾರ, ಕೇವಲ ೮ ಲಕ್ಷ ಜನರಿಗೆ ದಿನಕ್ಕೆ ಒಂದು ಕೋಟಿ ಹಣಕಾಸು ಒದಗಿಸುವ ಮೂಲಕ ಕೆಲಸ ಕೊಡುವ ಯೋಜನೆ ಹಾಕುತ್ತಿದ್ದಾರೆಂದರೆ ಇಲ್ಲಿಯವರೆಗೆ ಎಷ್ಟು ಜನಕ್ಕೆ ಕೆಲಸ ಕೊಟ್ಟಿದ್ದಾರೆ ? ಸರಾಸರಿ ೫೦ ಸಾವಿರ ಜನರಿಗೆ ಉದ್ಯೋಗಗಳನ್ನು ಕೊಟ್ಟಿದ್ದೇವೆಂದು.

ಶ್ರೀ ಜಿ. ನಾರಾಯಣ ಕುಮಾರ್.—೫೦ ಸಾವಿರ ಅಲ್ಲ, ೫ ಲಕ್ಷ,

ಶ್ರೀ ಯು. ಭೂಪತಿ.—ಕೆಲವೊಮ್ಮೆ ಮಾತನಾಡುವಾಗ ತಪ್ಪಾಗುವುದು ಸಹಜ. ಆದರೆ ಬರೀ ತಪ್ಪು ಮಾತಾಡುವುದು ನಿಮಗೆ ಸಹಜ.

ಶ್ರೀ ಜಿ. ನಾರಾಯಣ ಕುಮಾರ್.—ಓಹೋ, ಇವರೇನು ದೊಡ್ಡ ಪಂಡಿತರೋ !

ಶ್ರೀ ಯು. ಭೂಪತಿ.—ನಾನು ಪಂಡಿತನಲ್ಲದ್ದರಿಂದ ತಪ್ಪು ಮಾತನಾಡಿದ್ದುದು. ನನ್ನ ಅಭಿಪ್ರಾಯ ಇಷ್ಟೇ. ೨೩ ಲಕ್ಷ ಕೃಷಿ ಕಾರ್ಮಿಕರು ತೊಂದರೆಗೆ ಒಳಗಾಗಿರುವಾಗ ಕೇವಲ ೫ ಲಕ್ಷ ಜನರಿಗೆ ಕೆಲಸವನ್ನು ಕೊಟ್ಟಿದ್ದೇವೆಂಬ ಸ್ಟೇಟ್‌ಮೆಂಟನ್ನು ನಮ್ಮ ಕಂದಾಯ ಸಚಿವರು ಹೇಳಿದಾಗಲೂ ಕೂ ಈ ಸರ್ಕಾರ ಬರಗಾಲದ ವಿಶ್ಲೇಷಣೆಯನ್ನು ಯಾವರೀತಿ ಮಾಡಿದೆ ? ಎಲ್ಲಾ ರೀತಿಯಿಂದಲೂ

ಅಭಾವವನ್ನು ಎದುರಿಸುತ್ತಿದ್ದೇವೆ. ಕೆಲಸವನ್ನು ಯಾವ ರೀತಿ ಜನರಿಗೆ ಕೊಡುತ್ತಿದ್ದೇವೆ ಎಂಬ ಹೇಳಿಕೆಯನ್ನು ಸರ್ಕಾರ ಮೊದಲಿನಿಂದಲೂ ಕೊಡುತ್ತಾ ಬಂದಿದೆ.

ಈ ರೀತಿಯಾದ ಹೇಳಿಕೆಯನ್ನು ಸರ್ಕಾರ ಮೊದಲಿನಿಂದಲೂ ಕೊಡುತ್ತಾ ಬಂದಿದೆ. ತಾವು ಈ ಒಂದು ಪರಿಸ್ಥಿತಿಯನ್ನು ಯುದ್ಧದ ರೀತಿಯಲ್ಲಿ ಎದುರಿಸುತ್ತೇವೆಂದು ಹೇಳಿ ಇವೊತ್ತಿನ ದಿವಸ ಈಗಿನ ಪರಿಸ್ಥಿತಿಯ ಅರ್ಧದಷ್ಟು ಎದುರಿಸುವುದಕ್ಕೆ ತಮಗೆ ಸಾಧ್ಯವಿಲ್ಲ ಎನ್ನುವ ಆಪಾದನೆಯನ್ನು ನಾನು ಮಾಡಬೇಕಾಗಿದೆ. ಅವರು ಹೇಳಿರತಕ್ಕ ಅಂಕಿ ಅಂಶಗಳ ಪ್ರಕಾರ ನಾನು ಈ ಆಪಾದನೆಯನ್ನು ಮಾಡಬೇಕಾಗಿದೆ. ಇವು ನಾನು ಸೃಷ್ಟಿ ಮಾಡಿದಂಥ ಅಂಕಿ ಅಂಶಗಳಲ್ಲ. ಅದರ ಜೊತೆಯಲ್ಲಿ ಇವೊತ್ತು ಕೃಷಿ ಕಾರ್ಮಿಕರು ತೊಂದರೆಗೆ ಒಳಗಾಗಿರತಕ್ಕ ಅಂಕಿ ಅಂಶವನ್ನು ಕೊಡಬೇಕಾಗಿದೆ. ಆರ್‌ಎನ್‌ಜಿಎಸ್ ಸ್ಕೀಮಿನ ಪ್ರಕಾರ ಹಳ್ಳಿಗಳಲ್ಲಿರತಕ್ಕ ಗ್ರಾಮ ಲೆಕ್ಕಾಧಿಕಾರಿಗಳು, ಕೆಲಸವನ್ನು ಬಿಟ್ಟು ಬರತಕ್ಕ ಜನಗಳ ಪಟ್ಟಿಯನ್ನು ತಯಾರು ಮಾಡಿ ಪ್ರತಿಯೊಂದು ಹಳ್ಳಿಗಳಿಂದ ತಾಲ್ಲೂಕು ಮಟ್ಟಕ್ಕೆ ತಾಲ್ಲೂಕು ಮಟ್ಟದಿಂದ ಜಿಲ್ಲೆಗೆ ಜಿಲ್ಲೆಯಿಂದ ರಾಜ್ಯಕ್ಕೆ ಕಳುಹಿಸುವ ಪದ್ಧತಿ ಏನು ಇವೆ, ಇದರಲ್ಲಿ ಮೂಲಭೂತವಾಗಿ ಒಂದು ಲೋಪದೋಷ ಅಡಗಿದೆ. ಇದಕ್ಕೆ ಕಾರಣ ಏನು ಎಂದರೆ, ಯಾವ ವಿಲೇಜ್ ಅಕೌಂಟೆಂಟ್ ಸಹ ಹಳ್ಳಿಯಲ್ಲಿ ಎಷ್ಟು ಜನರಿಗೆ ಸರಿಯಾದ ಕೆಲಸಬೇಕು ಎಂಬ ಬಗ್ಗೆ ಸರಿಯಾದಂತಹ ನಿಯಮವನ್ನು ಅನುಸರಿಸಿ ಪಟ್ಟಿಯನ್ನು ತಯಾರು ಮಾಡುವುದಿಲ್ಲ ಎಂಬುದು ಎಲ್ಲಾರಿಗೂ ಗೊತ್ತಿರತಕ್ಕ ವಿಚಾರ. ಮೂಲಭೂತವಾಗಿ ಇಲ್ಲಿ ಬಂದಿರತಕ್ಕ ಅಂಶವೇನೆಂದರೆ ೨೩ ಲಕ್ಷ ಕೃಷಿ ಕಾರ್ಮಿಕರಿಗೆ ಉದ್ಯೋಗ ಒದಗಿಸಬೇಕೆಂದು ಇದ್ದಾರೆ ಒಂದು ವೇಳೆ ಇದೆ ಸರಿಯೆಂದು ಇಟ್ಟುಕೊಂಡರೆ ಇವೊತ್ತಿನ ದಿವಸ ಅಭಾವಕ್ಕೆ ತುತ್ತಾಗಿರುವ ಶೇಕಡ ೩೦ರಷ್ಟು ಜನರು ಗೋವಾದಲ್ಲಿ ಕೆಲಸ ಮಾಡಲು ವಲಸೆ ಹೋಗಿದ್ದಾರೆ. ನಮ್ಮ ಗ್ರಾಮಗಳಲ್ಲಿ ಇವತ್ತು ಶೇಕಡ ೩೦ರಷ್ಟು ಜನ ಇಲ್ಲ. ಸರ್ಕಾರ ಅದರ ಜೊತೆಯಲ್ಲಿ ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಡುವಾಗ ನಾವು ಎಲ್ಲಾ ರೀತಿಯ ಕೆಲಸಗಳನ್ನು ತೆಗೆದುಕೊಂಡಿದ್ದೇವೆಂದು ಹೇಳುತ್ತಾರೆ. ಎಲ್ಲಾ ಯೋಜನೆಗಳನ್ನು ತೆಗೆದುಕೊಂಡಿದ್ದೇವೆಂದು ಅವರು ಹೇಳುತ್ತಾರೆ. ಆದರೆ ಎನ್‌ಆರ್‌ಇಪಿ ಸ್ಕೀಮ್, ಆರ್‌ಎಲ್‌ಜಿಪಿ ಸ್ಕೀಮ್‌ಗಳಲ್ಲಿ, ಡಿಪಿಎಸ್ ಸ್ಕೀಮ್‌ಗಳಲ್ಲಿ ಬರಗಾಲ ಇರಲಿ ಇಲ್ಲದೆ ಹೋಗಲಿ ಎಲ್ಲಾ ಸಂದರ್ಭಗಳಲ್ಲಿ ಯೋಜನೆ ಅನ್ವಯ ಕೆಲಸ ನಡೆದೆ ನಡೆಯುತ್ತದೆ ಇವುಗಳನ್ನು ತಾವು ಏಕೆ ಬರಗಾಲದಲ್ಲಿ ಸೇರಿಸುತ್ತೀರಿ ? ಬರಗಾಲ ಇಲ್ಲದೆ ಇದ್ದರೂ ಕೂಡ ಈ ಸ್ಕೀಮ್ ನಡೆಯುತ್ತದೆ, ಆದರೆ ವರದಿ ಕೊಡಬೇಕಾದರೆ ಅದನ್ನು ಕೂಡ ಸೇರಿಸಿ ಈ ಎಲ್ಲಾ ಕೆಲಸಗಳನ್ನು ಮಾಡುತ್ತಾ ಇದ್ದೇವೆಯೆಂದು ಹೇಳುತ್ತೀರಿ. ಬರಗಾಲದ ಹೆಡ್‌ನಲ್ಲಿ, ಸ್ಕೇರ್ಸಿಟಿ ಹೆಡ್‌ನಲ್ಲಿ ನೀವು ಕೊಟ್ಟಿರತಕ್ಕ ಹಣ ಎಷ್ಟು ? ನೀವು ಒಪ್ಪಿಕೊಂಡಿರತಕ್ಕ ೫೫ ಕೋಟಿಗಳನ್ನು ಕೊಟ್ಟಿದ್ದೀರೋ ? ಶಾಸಕರ ಬರಗಾಲ ಅಧ್ಯಯನ ಸಮಿತಿಯ ಒಂದು ಶಿಫಾರಸು ಏನು ಇದೆ, ಆದರಂತೆ ೩ ದಿನಗಳಿಗೆ ಎರಡು ಕೋಟಿ ಖರ್ಚು ಮಾಡಬೇಕು ನಮ್ಮ ಸರ್ಕಾರ ದಿನಕ್ಕೆ ಒಂದು ಕೋಟಿ ಖರ್ಚು ಮಾಡಿ ೮ ಲಕ್ಷ ಜನರಿಗೆ ಉದ್ಯೋಗ ಒದಗಿಸುತ್ತೇವೆಂದು ಎಲ್ಲರಿಗೂ ಉದ್ಯೋಗವನ್ನು ಒದಗಿಸಲು ಸಾಧ್ಯವಿಲ್ಲ. ಒಂದು ಕೋಟಿ ಖರ್ಚು ಮಾಡಿ ೮ ಲಕ್ಷ ಜನರಿಗೆ ಉದ್ಯೋಗವನ್ನು ಒದಗಿಸಬೇಕಾದರೆ ೬೪ ಲಕ್ಷ ರೂಪಾಯಿಗಳು ಕೂಲಿಗಾಗಿ ಹೋಗುತ್ತದೆ, ೭.೮೦ ಪೈಸೆ ಪ್ರಕಾರ. ಇನ್ನು ಉಳಿದ ಮೊತ್ತದಲ್ಲಿ ಸಾಮಾನುಗಳನ್ನು ಖರೀದಿ ಮಾಡಬೇಕಾಗುತ್ತದೆ. ಅಂದರೆ ಮೆಟೀರಿಯಲ್ ಕಂಪೋನೆಂಟ್ಸ್‌ಗೆ ಇದು ಸಾಕಾಗುವುದಿಲ್ಲ. ಏಕೆ ಎಂದು ಹೇಳಿದರೆ ಒಂದು ದಿವಸಕ್ಕೆ ೨ಕೋಟಿ ರೂಪಾಯಿಗಳನ್ನು ಸಮಿತಿ ಶಿಫಾರಸು ಮಾಡಿದೆ. ಮೂರು ದಿನಕ್ಕೆ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟರೆ ಹೇಗೆ ? ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇಲ್ಲಿಯೇ ಇದ್ದಾರೆ, ಈ ರೀತಿಯಾಗಿ ಸರ್ಕಾರದವರು ನಮ್ಮ ಬರಗಾಲ ಪರಿಸ್ಥಿತಿಯನ್ನು ಸೂಕ್ತವಾದ, ಸನ್ನದ್ಧ ರೀತಿಯಲ್ಲಿ ಎದುರಿಸಿ ಕೆಲಸ ಮಾಡಬೇಕು ಇವರು ಪದೇ ಪದೇ ಹೇಳಿಕೆಯನ್ನು ಕೊಡುವುದನ್ನು ಬಿಟ್ಟು ಈ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರದ ಸಹಾಯವಿಲ್ಲದೆ ಎದುರಿಸಲು ಸಾಧ್ಯವಿಲ್ಲ. ಆ ರೀತಿಯ ಸಂಪನ್ಮೂಲ ನಮ್ಮಲ್ಲಿ ಇಲ್ಲ ಎಂಬುದನ್ನು ಸರ್ಕಾರ ಒಪ್ಪಿಕೊಳ್ಳಬೇಕು. ಆದರ ಜೊತೆಯಲ್ಲಿ ರಾಜ್ಯ ಸರ್ಕಾರ ಈ ಒಂದು ಪರಿಸ್ಥಿತಿಯನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕು. ಕೇಂದ್ರ ಸರ್ಕಾರಕ್ಕೆ ಇದುವರೆವಿಗೂ ಅನೇಕ ಮನವಿಗಳನ್ನು ಎಂದರೆ ಮೂರುಮನವಿಗಳನ್ನು ಕೊಟ್ಟರು. ಮೊನ್ನೇ ತಾನೆ ೨೭೦ ಕೋಟಿ ರೂಪಾಯಿಗಳ ಒಂದು ಮನವಿಯನ್ನು ಕೊಟ್ಟಾಗಿದೆ. ಒಂದು ಸಾರಿ ಕೇಂದ್ರ ಸರ್ಕಾರದ ಕೃಷಿ ಮಂತ್ರಿಗಳ ಕರ್ನಾಟಕಕ್ಕೆ ಭೇಟಿಯ ಕಾರ್ಯಕ್ರಮ ಕೊಡುವುದು ನಿಗಧಿಯಾಯಿತು. ಆದರೆ ಅವರಿಗೆ ಮೈಯಲ್ಲಿ ಹುಷಾರಿಲ್ಲ ಎಂಬ ಒಂದೇ ಒಂದು ಕಾರಣಕ್ಕಾಗಿ ಅವರ ಕಾರ್ಯಕ್ರಮವನ್ನು ರದ್ದು ಮಾಡಿದರು.

ಇದರಿಂದ ಎಷ್ಟು ಲಕ್ಷ ಜನ ಸತ್ತರೂ ಪರವಾಗಿಲ್ಲ. ಮಾನ್ಯ ಮಂತ್ರಿಗಳಿಗೆ ಕೇವಲ ಹುಂಪಾರಿಲ್ಲ ಎನ್ನುವ ಕಾರಣಕ್ಕಾಗಿ ಅವರ ಕಾರ್ಯಕ್ರಮವನ್ನು ಏಕಾಏಕಿ ರದ್ದು ಮಾಡಿದರು. ಮತ್ತೊಬ್ಬರು ಹೇಳದೆ ಕೇಳದೆ ಹೆಲಿಕಾಪ್ಟರ್‌ನಲ್ಲಿ ಬಂದು ಕೋಲಾರದ ಮೂರು ಹಳ್ಳಿಗಳನ್ನು, ಬೆಂಗಳೂರಿನ ಸುತ್ತಮುತ್ತಲಿನ ಮೂರು ಹಳ್ಳಿಗಳನ್ನು ನೋಡಿಕೊಂಡು ಕರ್ನಾಟಕದಲ್ಲಿ ಭಾರಿ ಬರಗಾಲ ಇದೆ, ಎಂದು ಹೇಳಿಕೊಂಡು ಹೋದರು. ಇದು ಕರ್ನಾಟಕದಲ್ಲಿ ಬರಗಾಲ ಪರಿಸ್ಥಿತಿಯನ್ನು ಅಧ್ಯಯನ ಮಾಡತಕ್ಕ ರೀತಿ, ಇದು ಕೇಂದ್ರ ಸರ್ಕಾರದ ಹೊಣೆಯಲ್ಲವೆ? ಕರ್ನಾಟಕ ಜನರು ಕೇಂದ್ರ ಸರ್ಕಾರದ ಸಹಾಯವನ್ನು ಕೇಳ ಬೇಕೆ? ನಾವು ಭಾರತ ದೇಶದ ಒಂದು ಅಂಗವಲ್ಲವೆ? ನಾವು ಸಹಾಯ ಮಾಡಿಯೆಂದು ಇವರನ್ನು ಬೇಡಬೇಕೆ? ಇಂತಹ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರದ ಹಣ ಬರದಿದ್ದರೆ, ನಾವು ಅವರ ಜೊತೆ ಹೋರಾಟ ಮಾಡುವ ಹಕ್ಕು ನಮಗಿದೆ. ಅದರ ಜೊತೆಯಲ್ಲಿ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಲು ಆಗಿಂದಾಗ್ಗೆ ಸರ್ಕಾರ ಮೆಟಿರಿಯಲ್ಸ್ ಕಳುಹಿಸಿಕೊಟ್ಟಿರುವುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಇದರ ಜೊತೆಯಲ್ಲಿ ಶಾಶ್ವತವಾದ ಪರಿಹಾರಗಳನ್ನು ಮಾಡುವುದಕ್ಕೆ ನಿಮ್ಮ ಪ್ರಯತ್ನ ಏನು. ಎಂದರೆ ಮಾನ್ಯ ಕಂದಾಯ ಸಚಿವರು ಹೇಳುತ್ತಾ ಇದ್ದಾರೆ ೩ ವರ್ಷಗಳಿಂದ ಸತತವಾಗಿ ಬರಗಾಲ ಬಿದ್ದಿದ್ದರೂ ಬರಗಾಲದ ಪ್ರದೇಶಗಳನ್ನು ಬೆಳೆಸುವುದಿಲ್ಲವೆಂದು. ಅದಕ್ಕೆ ಏನು ಗ್ಯಾರಂಟಿ ನಮ್ಮ ಕರ್ನಾಟಕ ರಾಜ್ಯ ಸಂಪೂರ್ಣವಾಗಿ ಮಳೆಯ ಮೇಲೆ ಆಧಾರಿತವಾದ ರಾಜ್ಯ ಏಕೆ ಎಂದರೆ ಇದು ವಿಶ್ವೇಶ್ವರಯ್ಯ ನವರ ಕಾಲದಿಂದ ನೀರಾವರಿ ಮತ್ತು ವಿದ್ಯುಚ್ಛಕ್ತಿಯಲ್ಲಿ ಬಹಳ ಮುಂದುವರಿದ ರಾಜ್ಯ, ಇತರ ರಾಜ್ಯಗಳಿಗೆ ಹೋಲಿಸಿ ನೋಡಿದರೆ ಪಂಜಾಬ್ ಒಂದು ಬಿಟ್ಟು ನಮ್ಮ ರಾಜ್ಯ ಮುಂದುವರಿದಿದೆ. ಇವೊತ್ತಿನ ದಿವಸ ಎಲ್ಲಾ ರಾಜ್ಯಗಳಿಗಿಂತ ನಾವು ಹಿಂದೆ ಬಿದ್ದಿದ್ದೇವೆ. ಏಕೆ? ಹಿಂದಿನ ಸರ್ಕಾರಗಳು ಮಾಡಿದ ಕೆಲಸಗಳು ಏನು? ಈ ಕಡೆ ಕುಳಿತಿರುವವರು ಆ ಕಡೆ, ಕುಳಿತಿರುವವರು ಈ ಕಡೆ ಬೆರಳುಮಾಡಿ ತೋರಿಸುವುದು ಆಗಿದೆ. ಆದರೆ ಆಗಿರತಕ್ಕ ಕೆಲಸಗಳು ಏನು ಇಲ್ಲ. ಕರ್ನಾಟಕದಲ್ಲಿ ಕಳೆದ ೩೮ ವರ್ಷಗಳಿಂದ ಗಣನೀಯವಾಗಿ ಆಗಿರತಕ್ಕ ಸಾಧನೆ ಏನಾಗಿದೆ. ಒಂದು ವೇಳೆ ನಾವು ಪ್ರಯತ್ನ ಮಾಡಿ ಈಗ ಮಾಡಿರತಕ್ಕ ನೀರಾವರಿ ಯೋಜನೆಗಳಿಗೆ ಸರಿಯಾದಂತಹ ರೀತಿ ಯಲ್ಲಿ ಹಣವನ್ನು ಖರ್ಚು ಮಾಡಿದ್ದಾರೆ ಇವೊತ್ತು ಕರ್ನಾಟಕ ರಾಜ್ಯದಲ್ಲಿ ಇಂತಹ ಪರಿಸ್ಥಿತಿ ಉದ್ಭವ ವಾಗುತ್ತಲೇ ಇರಲಿಲ್ಲ. ಅವರ ಜೊತೆಯಲ್ಲಿ ಕಾವೇರಿ, ಗಂಗಾ ನದಿಗಳನ್ನು ಲಿಂಕ್ ಮಾಡಬೇಕು ಎನ್ನುವ ವರದಿಯನ್ನು ಕೇಂದ್ರ ಸರ್ಕಾರದ ಕೃಷಿ ಮಂತ್ರಿಯವರು ದಿವಂಗತ ಜವಹರಲಾಲ್‌ರವರಿಗೆ ಒಮ್ಮೆ ಸಲಹೆ ಮಾಡಿದ್ದರು ಹೀಗೆ ಭಾರತದಲ್ಲಿ ಉತ್ತರ ಭಾರತದ ರಾಜ್ಯಗಳು ಪ್ರವಾಹಕ್ಕೆ ಒಳಗಾಗಿ ತೊಂದರೆ ಪಡುತ್ತಿದ್ದಾರೆ, ದಕ್ಷಿಣ ರಾಜ್ಯಗಳು ಅಭಾವದಿಂದ ಯಾವಾಗಲೂ ಸತತವಾಗಿ ಇಂತಹ ಪರಿಸ್ಥಿತಿ ಎದುರಿಸುತ್ತಾ ಇರುತ್ತವೆ. ಇದಕ್ಕೆ ಶಾಶ್ವತ ಪರಿಹಾರ ಗಂಗಾ ಕಾವೇರಿ ಎರಡನ್ನು ಲಿಂಕ್ ಮಾಡಿದರೆ ಪ್ರವಾಹ ತಪ್ಪುತ್ತದೆ. ಇದರಿಂದ ರಾಜ್ಯಕ್ಕೆ ನೀರಾವರಿ ದೊರಕುತ್ತದೆ ಎಂಬ ಸಲಹೆಯನ್ನು ಆಗ ಕೊಟ್ಟರು. ಕರ್ನಾಟಕ ರಾಜ್ಯದ ಹಿರಿಯ ಮಂತ್ರಿಗಳಿಗೆ ಇದು ಗೊತ್ತಿದೆ. ಆ ಒಂದು ದಿಕ್ಕಿನಲ್ಲಿ ಯಾವುದೇ ಮನವಿಯನ್ನು. ಒತ್ತಾಯವನ್ನಾಗಲಿ ತಾವು ಮಾಡಿದ್ದೀರಾ? ಈ ಪ್ರಯತ್ನವನ್ನು ನೀವು ಮಾಡಿಲ್ಲ. ಹಿಂದಿನ ಸರ್ಕಾರಗಳು ಮಾಡಿಲ್ಲ ಈಗಿನ ಸರ್ಕಾರವು ಮಾಡಿಲ್ಲ. ಇಂತಹ ಪ್ರಯತ್ನ ಗಳನ್ನು ಮಾಡದೆ ಹೋದರೆ ರಾಜ್ಯಕ್ಕೆ ಶಾಶ್ವತವಾದ ಪರಿಹಾರ ದೊರಕುವುದಕ್ಕೆ ಸಾಧ್ಯವಾಗುವುದಿಲ್ಲ. ಅದರ ಜೊತೆಯಲ್ಲಿ ಇವೊತ್ತಿನ ದಿವಸ ಈ ಕೆರೆಗಳನ್ನು ನಿರ್ಮಾಣ ಮಾಡತಕ್ಕ ಕಾರ್ಯಕ್ಕೆ ಆದ್ಯತೆ ಕೊಟ್ಟು ಕೆಲಸ ಮಾಡಬೇಕೆಂದು ಈ ಒಂದು ವರದಿಯಲ್ಲಿ ಹೇಳಿದ್ದೀರಿ. ಆದರೆ ಎಲ್ಲಿ ಆ ರೀತಿ ಮಾಡಿದ್ದೀರಿ. ಜಿಲ್ಲಾವಾರು ವರದಿಯನ್ನು ತೆಗೆದುಕೊಂಡು ನೋಡಿದರೆ, ಹಾಸನ, ಮಂಡ್ಯ, ಮೈಸೂರು ಈ ಮೂರು ಜಿಲ್ಲೆಗಳಲ್ಲಿ ಬಿಟ್ಟರೆ ಬೇರೆ ಯಾವುದೇ ತಾಲ್ಲೂಕುಗಳಲ್ಲಿ ಕಟ್ಟೆಗಳು ಆಗುವುದಿಲ್ಲವೇಕೆ? ಕೆರೆಗಳನ್ನು ಕಟ್ಟತಕ್ಕ ಸಾಧ್ಯತೆ ಬೇರೆ ಯಾವ ಜಿಲ್ಲೆ ಯಲ್ಲೂ ಆಗುವುದಿಲ್ಲವೆ? ಕೋಲಾರ ಜಿಲ್ಲೆಗಳಲ್ಲಿ ಕೆರೆಗಳನ್ನು ಕಟ್ಟುವುದಕ್ಕಾಗುವುದಿಲ್ಲವೆ? ಬಿಜಾಪುರ ಜಿಲ್ಲೆ ಗಳಲ್ಲಿ ಕಟ್ಟುವುದಕ್ಕಾಗುವುದಿಲ್ಲವೆ, ಈರೀತಿಯ ತಾರತಮ್ಯವೇಕೆ? ನಿಜವಾಗಿಯೂ ಪರಿಸ್ಥಿತಿ ಎಲ್ಲಿ ಉಲ್ಬಣ ವಾಗಿದೆ ಅಲ್ಲಿ ಅವಶ್ಯಕವಾಗಿ ತಾವು ಕೆಲಸ ಮಾಡಬೇಕು. ಹಣವನ್ನು ಎಲ್ಲಿ ಬಿಡುಗಡೆ ಮಾಡಬೇಕಾಗಿದೆ, ಅಲ್ಲಿ ಕೆಲಸ ಮಾಡುತ್ತಾ ಇಲ್ಲ. ಬರದ ಬಗ್ಗೆ ಸಮಿತಿ ಮಾಡಿದ್ದಾರೆ. ಅದರಲ್ಲಿ ಎಂಎಲ್‌ಎ, ಎಂಎಲ್‌ಸಿ, ಎಂಪಿಗಳು ಸದಸ್ಯರಾಗಿರುವುದು ಸತ್ಯ. ಆದರೆ ಬರ ಸಭೆಯನ್ನು ಕರೆಯುವುದು ಯಾವಾಗ? ನನ್ನ ಜಿಲ್ಲೆಯಾದ ಬಳ್ಳಾರಿಯಲ್ಲಿ ಬರದ ಸಭೆಯನ್ನು ಎರಡು ತಿಂಗಳಿಗೊಮ್ಮೆ ಕರೆದಿದ್ದಾರೆ. ಅದು ಮಂತ್ರಿಗಳಿಗೆ ಹೇಳಿದ

ಮೇಲೆ, ಮಂತ್ರಿಗಳು ಅಸಿಸ್ಟೆಂಟ್ ಕಮೀಷನರ್‌ಗೆ ಹೇಳಿದಮೇಲೆ, ಮಂತ್ರಿಗಳು ಬರುತ್ತಾರೆ ಎನ್ನುವ ಒಂದೇ ಕಾರಣಕ್ಕಾಗಿ ಬರದ ಸಭೆಯನ್ನು ಕರೆದಿದ್ದಾರೆ. ಕಾರಣವನ್ನು ಕೇಳಿದರೆ ಅಲ್ಲಿಯ ಅಧಿಕಾರಿಯು ಪ್ರಮಾಣಿಕವಾಗಿ ಹೇಳುತ್ತಾರೆ. ನಮ್ಮ ಹತ್ತಿರ ದುಡ್ಡಿಲ್ಲ. ಅವರ ಮೇಲೆ ನನಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಅಂತಹ ಒಳ್ಳೆಯ ಅಧಿಕಾರಿ ಸಿಕ್ಕಿರುವುದು ನಮ್ಮ ಜಿಲ್ಲೆಯ ಜನರ ಅದೃಷ್ಟ. ಒಳ್ಳೆಯ ಪ್ರಾಮಾಣಿಕ ಕೆಲಸಗಾರ, ಮರುದಿನವೇ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಾಗ, ಜಿಲ್ಲಾಧಿಕಾರಿಯವರ ಜೊತೆಯಲ್ಲಿ ೨ ಲಕ್ಷವನ್ನು ಆಗಲೇ ಕೊಟ್ಟುಬಿಟ್ಟಿದ್ದೇನೆಂದು ಮಾನ್ಯ ಎಂ. ಪಿ. ಪ್ರಕಾಶ್ ಹೇಳುತ್ತಾರೆ. ಅವರನ್ನು ಕೇಳಿದರೆ ಇಲ್ಲವೆಂದು ಹೇಳುತ್ತಾರೆ. ನಿಮ್ಮನ್ನು ಕೇಳಿದರೆ ೨ ಲಕ್ಷ ಕೊಟ್ಟಿಲ್ಲವೆಂದು ಹೇಳುತ್ತೀರಿ. ೮೬ ಜನ ಹುಡುಗರನ್ನು ದನ ಕಾಯುವುದಕ್ಕೆ ನೇಮಕ ಮಾಡಿ ಎರಡೂವರೆ ತಿಂಗಳಾಯಿತು. ಅವರಿಗಿನ್ನು ಕೂಲಿ ಕೊಟ್ಟಿಲ್ಲವೆಂದು ತಿಳಿಯಿತು. ಕೇಳಿದರೆ ನಮಗೆ ೨೪೯ ರೂಲ್ಸ್ ಅಡ್ಡ ಬರುತ್ತದೆಂದು ಹೇಳುತ್ತಾರೆ, ನಿಯಮಗಳ ಕಷ್ಟ ಇವರಿಗೆ, ಮತ್ತೇ ಯಾರು ಅವರಿಗೆ ಕೂಲಿ ಕೊಡಬೇಕು.

೩-೦೦ ಪಿ. ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.— ಕೇಂದ್ರ ಸರ್ಕಾರದವರು ಮೇವನ್ನು ಸಾಗಿಸಲು ಹಣ ಕೊಡುತ್ತಾರೆಯೇ ಹೊರತು ಮೇವನ್ನು ಬೆಳೆಸಲು ಹಣ ಕೊಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಹಾಗಿದ್ದರೆ ಇದಕ್ಕೆ ಏನಾದರೂ ಒಂದು ಪರಿಹಾರವನ್ನು ತಾವು ಸೂಚಿಸಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಇದಕ್ಕೆ ಬರಗಾಲದ ಫಂಡ್‌ನಿಂದ ಹಣ ಕೊಡುವುದಕ್ಕೆ ಬರುತ್ತದೆ. ಬರಗಾಲದ ಲೆಕ್ಕದಲ್ಲಿ ಇದಕ್ಕೆ ಹಣ ಕೊಡಬಹುದು. ಒಂದು ವೇಳೆ ಎಲ್ಲಿಯಾದರೂ ತಪ್ಪಾಗಿದ್ದರೆ, ಅದನ್ನು ಸರಿಪಡಿಸೋಣ.

ಶ್ರೀ ಎಂ.ಪಿ. ಪ್ರಕಾಶ್.— ಈ ಬಗ್ಗೆ ಅಲ್ಲಿನ ತಹಶೀಲ್ದಾರರು ಮುಂಜಾಗ್ರತಾ ಕ್ರಮ ತೆಗೆದುಕೊಳ್ಳದೆ ತಪ್ಪು ಮಾಡಿದ್ದರು. ಅದನ್ನು ಕೂಡಲೇ ಬಗೆಹರಿಸಲಾಯಿತು.

ಶ್ರೀ ಯು. ಭೂಪತಿ.— ಇದರಲ್ಲಿ ತಹಶೀಲ್ದಾರರ ತಪ್ಪು ಏನೂ ಇಲ್ಲ. ಒಂದು ಬಾಬಿಗೆ ಇಟ್ಟ ಹಣವನ್ನು ಬೇರೊಂದು ಬಾಬಿಗೆ ಖರ್ಚು ಮಾಡಿದರೆ ಆಡಿಟ್ ಅಬ್ಜಕ್ಷನ್ ಆಗುತ್ತದೆ ಎಂದು ಅವರು ಹೇಳಿದರು. ದನಕರುಗಳನ್ನು ನೋಡಿಕೊಳ್ಳುವ ಹುಡುಗರಿಗೆ ಸಂಬಳ ಕೊಡಲು ಮೊದಲು ಹತ್ತು ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದರು. ಆದರೆ ಎರಡನೆಯ ಸಲ ಬಿಡುಗಡೆ ಮಾಡಲು ಹಣ ಇಲ್ಲ ಎಂದು ಹೇಳಿದರು. ಇಂತಹ ತೊಂದರೆಗಳು ಇನ್ನು ಮುಂದೆಯಾದರೂ ಬರದಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಇದನ್ನೆಲ್ಲಾ ಹೇಳುತ್ತಿದ್ದೇನೆ.

ಇನ್ನು ಸೊಂಡೂರಿನಲ್ಲಿ ದನಗಳು ಸತ್ತಿವೆ ಎಂದು ಮಾನ್ಯ ಬಂಗಾರಪ್ಪರವರು ಹೇಳಿದರು. ಅವರ ಈ ಬಗ್ಗೆ ಕೊಟ್ಟ ಅಂಕಿಅಂಶಗಳಲ್ಲಿ ಸ್ವಲ್ಪ ಉತ್ಪ್ರೇಕ್ಷೆ ಇದೆ ಎಂಬುದನ್ನು ನಾನು ಸಹ ಒಪ್ಪುತ್ತೇನೆ ದನಗಳು ಸತ್ತಿರುವುದು ನಿಜ. ಅವು ಸಾಯಲು ಕಾರಣ ಏನು? ಬಳ್ಳಾರಿ ಜಿಲ್ಲೆಯಲ್ಲಿ ೪ ಗೋಶಾಲೆಗಳಿವೆ, ಅವುಗಳ ಪೈಕಿ ೩ ಸೊಂಡೂರು ತಾಲ್ಲೂಕ್‌ನಲ್ಲಿವೆ ಎಂದು ನಮ್ಮ ಜಿಲ್ಲೆಯ ಮಂತ್ರಿಗಳಾದ ಶ್ರೀ ಪ್ರಕಾಶ್ ಅವರು ಹೇಳಿಕೆ ಕೊಟ್ಟರು. ಆದರೆ ಅವರು ಅಲ್ಲಿಗೆ ಬರುವವರೆಗೆ ಒಂದೂ ಸಹ ಗೋಶಾಲೆ ಇರಲಿಲ್ಲ. ೩ ಗೋಶಾಲೆಗಳಲ್ಲಿ ೬ ಸಾವಿರ ದನಗಳನ್ನು ಸಾಕಲಾಗುತ್ತಿದೆ ಎಂದು ಹೇಳಿಕೆ ಕೊಟ್ಟರು.

ಶ್ರೀ ಎಂ.ಪಿ. ಪ್ರಕಾಶ್.— ನಾನು ಸೊಂಡೂರಿನಲ್ಲಿ ೩ ಗೋಶಾಲೆಗಳಿವೆ ಎಂದು ಹೇಳಲಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ೩ ಗೋಶಾಲೆಗಳಿವೆ ಎಂದು ಹೇಳಿದ್ದುದು, ಸೊಂಡೂರಿನ ಸಿದ್ದಾಪುರದಲ್ಲಿ ಒಂದು ಕೂಡ್ಲಿಗಿಯ ಕುಡತಿನಿ ಕೋಟೆಯಲ್ಲಿ ಒಂದು, ಹಾಗೂ ಹಡಗಲಿಯ ಮದಲಗಟ್ಟೆಯಲ್ಲಿ ಒಂದು ಹೀಗೆ ಒಟ್ಟು ೩ ಗೋಶಾಲೆಗಳಿವೆ ಎಂದು ನಾನು ಹೇಳಿದ್ದುದು.

ಶ್ರೀ ಯು. ಭೂಪತಿ.— ೬ ಸಾವಿರ ದನಗಳನ್ನು ಸಾಕಲಾಗುತ್ತಿದೆ ಎಂದು ಇವರು ಹೇಳಿಕೆ ಕೊಟ್ಟಮೇಲೆ, ಎಲ್ಲಿ ಸಾಕಲಾಗುತ್ತಿದೆ ತೋರಿಸಿ ಎಂದು ನನ್ನನ್ನು ಪತ್ರಕರ್ತರು ಕೇಳಿದರು. ಸಿದ್ದಾಪುರದಲ್ಲಿರುವ ಗೋಶಾಲೆಗೆ ಕೇವಲ ಸೊಂಡೂರು ತಾಲ್ಲೂಕ್‌ನ ಸುತ್ತಮುತ್ತ ಹಳ್ಳಿಗಳ ದನಗಳು ಬಂದಿಲ್ಲ, ಅವುಗಳ ಜೊತೆಗೆ ಆಂಧ್ರ ರಾಜ್ಯದ ಅನಂತಪುರ ತಾಲ್ಲೂಕ್‌ಗೆ ಸೇರಿದ ನೂರಾರು ದನಗಳು ಸಹ ಬಂದಿವೆ.

ಸಂಡೂರಿನಲ್ಲಿ ಕೆಲವು ದನಗಳು ಸತ್ತಿರುವುದಕ್ಕೆ ಕಾರಣವೇನೆಂದರೆ, ಅಲ್ಲಿನ ಗೋಶಾಲೆಯಲ್ಲಿರುವ ದನಗಳಿಗೆ ಕಾಡಿನಲ್ಲಿ ಬೆಳೆಯುವ ಹುಲ್ಲನ್ನು ಸರಬರಾಜು ಮಾಡುತ್ತಿದ್ದಾರೆ. ಈ ಹುಲ್ಲನ್ನು ತಿಂದರೆ ಅವುಗಳಿಗೆ ಲಿವರ್ ಕಾಯಿಲೆ ಬರುತ್ತದೆ. ಇದರ ಜೊತೆಗೆ ಸರಿಯಾಗಿ ನೀರಿನ ಸರಬರಾಜು ಸಹ ಇಲ್ಲ. ಇದೇ ಕಾರಣದಿಂದ ಕೆಲವು ದನಗಳು ಸತ್ತಿವೆ. ಈ ವಿಚಾರವನ್ನು ನಾನು ಸ್ಕೇರ್‌ಸಿಟಿ ಕಮಿಟಿ ಮೀಟಿಂಗ್‌ನಲ್ಲಿ ಒಂದೆರಡು ಸಲ ಹೇಳಿದರೂ ಸಹ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ನಾವು ಹೇಳಿದ ಮೇಲೂ ಕ್ರಮ ತೆಗೆದುಕೊಳ್ಳದಿದ್ದ ಇವರನ್ನು ಮೂರ್ಖರು ಎಂದು ಕರೆಯಬೇಕೋ ಅಥವಾ ಬೇರೆ ರೀತಿಯಲ್ಲಿ ಹೇಳಬೇಕೋ ಅರ್ಥವಾಗುವುದಿಲ್ಲ. ಅಲ್ಲಿರುವ ಕೆರೆಗಳ ಕ್ಯಾಚ್‌ಮೆಂಟ್ ಏರಿಯಾದಲ್ಲಿ ೨೦೦–೩೦೦ ರೂಪಾಯಿಗಳ ಖರ್ಚಿನಲ್ಲಿ ಸಣ್ಣ ಸಣ್ಣ ಗುಣಿಗಳನ್ನು ತೆಗೆಸಿದರೆ ನೀರು ಸಿಗುತ್ತದೆ. ಅದನ್ನು ದನಗಳಿಗೆ ಕುಡಿಯಲು ಒದಗಿಸಬಹುದು. ಆದರೆ ಇದನ್ನು ಕಾರ್ಯಗತ ಮಾಡುವುದು ಕಷ್ಟ ಎಂದು ಅಧಿಕಾರಿಗಳು ಹೇಳುತ್ತಾರೆ. ಒಟ್ಟಿನಲ್ಲಿ ಅಧಿಕಾರಿಗಳ ಒಂದು ಬೇಜವಾಬ್ದಾರಿತನದಿಂದ ದನಗಳು ಸತ್ತಿವೆ ಎಂದು ಹೇಳಬಹುದು. ಮಾನ್ಯ ಕಂದಾಯ ಸಚಿವರು ದನಗಳು ಸತ್ತಿಲ್ಲ ಎಂದು ಹೇಳುತ್ತಾರೆ. ಆದರೆ ಅವರು ಇರತಕ್ಕಂಥ ಪರಿಸ್ಥಿತಿಯನ್ನು ಒಪ್ಪಿಕೊಳ್ಳುವುದು ಒಳ್ಳೆಯದು ಕೆಲವರು ಕಟುಕರಿಗೆ ಮಾರಾಟ ಮಾಡಿದ್ದಾರೆ. ಇದನ್ನು ತಪ್ಪಿಸಲು ಏನು ಮಾಡಬೇಕೆಂಬುದನ್ನು ತಾವು ಯೋಚನೆ ಮಾಡಿ. ಸರ್ಕಾರದವರು ಬೇರೆ ಬೇರೆ ಇಲಾಖೆಗಳಿಗೆ ಬೇರೆ ಬೇರೆ ಕೆಲಸಗಳನ್ನು ವಹಿಸಿಕೊಟ್ಟಿದ್ದಾರೆ. ಈ ಬಗ್ಗೆ ಇವರು ಜಿಲ್ಲಾವಾರು ಕೊಟ್ಟಿರುವ ಅಂಕಿಅಂಶಗಳನ್ನು ನೋಡಿದರೆ ನನಗೆ ಭಯವಾಗುತ್ತದೆ. ಈ ಕೆಲಸಗಳು ಯಾವ ರೀತಿ ನಡೆಯುತ್ತಿವೆ ಎಂಬುದನ್ನು ನಾವು ನೋಡಬೇಕಾಗಿದೆ. ಅರಣ್ಯ ಇಲಾಖೆಗೆ ಸಸ್ಯಗಳನ್ನು ಬೆಳೆಸಲು ಮತ್ತು ಸಸ್ಯಸಂರಕ್ಷಣೆಗೆಂದು ಹಣ ಕೊಟ್ಟಿದ್ದಾರೆ. ಇದರ ಪ್ರಕಾರ ಸಾವಿರಾರು ಮರಗಳನ್ನು ಬೆಳೆಸಲಾಗಿದೆ ಎಂದು ಹೇಳುತ್ತಾರೆ. ಆದರೆ ನಿಜವಾಗಿ ನಡೆದಿರುವುದು ಏನು? ನನ್ನ ಕ್ಷೇತ್ರದ ಕೇರಳಾಪುರದ ಬಳಿ ಒಂದು ಕಡೆ ಸಾಲುಮರದ ತೋಪು ಎಂದು ಬೋರ್ಡ್ ಹಾಕಿದ್ದಾರೆ. ಆದರೆ ಅಲ್ಲಿ ಮರಗಳೇ ಇಲ್ಲ. ಸಸ್ಯ ಸಂರಕ್ಷಣೆಗೆಂದು ಕೋಟ್ಯಾಂತರ ರೂಪಾಯಿಗಳನ್ನು ಅರಣ್ಯ ಇಲಾಖೆಯವರು ಖರ್ಚು ಮಾಡುತ್ತಿದ್ದಾರೆ. ಆದರೆ ಗಿಡಗಳು ಮಾತ್ರ ಬೆಳೆಯುತ್ತಿಲ್ಲ. ಇವರು ಗಿಡಗಳನ್ನು ನೆಟ್ಟಿರುವ ಕಡೆ ಬೇಲಿ ಗಿಡಗಳಿದ್ದರೆ, ಅವುಗಳಿಗೆ ಬೆಂಕಿ ಇಡುತ್ತಾರೆ. ಆ ಸಮಯದಲ್ಲಿ ಇವರು ನೆಟ್ಟ ಗಿಡಗಳು ಸಹ ಸುಟ್ಟು ಹೋಗುತ್ತಿವೆ. ಇದರಿಂದ ಚೆನ್ನಾಗಿ ಬೆಳೆದಿರುವ ಸಸಿಗಳ ಸಂಖ್ಯೆ ಬಹಳ ಕಡಿಮೆ ಎಂದು ಹೇಳಬಹುದು. ಇನ್ನು ಮುಂದೆಯಾದರೂ ಅರಣ್ಯ ಇಲಾಖೆಯವರು ಸಸ್ಯ ಸಂರಕ್ಷಣೆ ಕೆಲಸವನ್ನು ಚೆನ್ನಾಗಿ ಮಾಡಬೇಕು ಮತ್ತು ಭೂಸಾರ ಸಂರಕ್ಷಣೆಯಂತಹ ಸಣ್ಣಪುಟ್ಟ ಕೆಲಸಗಳನ್ನು ತೆಗೆದುಕೊಂಡು ಹಳ್ಳಿಯ ಜನರಿಗೆ ಕೆಲಸ ಒದಗಿಸುವ ಸಲುವಾಗಿ ಹೆಚ್ಚು ಹಣ ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ. ಇಲ್ಲಿ ಸರ್ಕಾರದವರು ಎಷ್ಟು ಬೇಕಾದರೂ ಹಣ ಒದಗಿಸುತ್ತೇವೆಂದು ಹೇಳುತ್ತಾರೆ, ಆದರೆ ಜಿಲ್ಲಾಧಿಕಾರಿಗಳು ಸರ್ಕಾರ ಹಣ ಬಿಡುಗಡೆ ಮಾಡುತ್ತಿಲ್ಲ ಎಂದು ಹೇಳುತ್ತಾರೆ. ಇದು ತಪ್ಪಬೇಕು. ಪ್ರತಿ ಪಂಚಾಯಿತಿ ವ್ಯಾಪ್ತಿಯಲ್ಲಿ ಎರಡು ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಇವರು ಹೇಳುತ್ತಾರೆ ಆದರೆ ಎಲ್ಲಿ ಕೆಲಸ ನಡೆಯುತ್ತಿದೆಯೋ ಗೊತ್ತಿಲ್ಲ. ಕೆಲಸಗಳೇ ನಡೆಯುತ್ತಿಲ್ಲ ಎಂದು ನಾನು ಹೇಳುವುದಿಲ್ಲ. ಕೆಲವು ಕಡೆ ರಸ್ತೆಗಳ ಕೆಲಸ ಕೆಲವು ಕಡೆ ಕಕ್ಕಸ್ಸುಗಳನ್ನು ಕಟ್ಟಿಸುವ ಕೆಲಸ ಮತ್ತೆ ಕೆಲವು ಕಡೆ ಶಾಲಾ ಕಟ್ಟಡಗಳನ್ನು ಕಟ್ಟಿಸುವ ಕೆಲಸ ನಡೆಯುತ್ತಿದೆ. ಈ ಮೊದಲು ನಮ್ಮಲ್ಲಿ ವಿಠಲಾಪುರದ ಕೆರೆಯ ಕೆಲಸವನ್ನು ತೆಗೆದುಕೊಂಡು ಪೂರ್ತಿ ಮಾಡದೆ ಅರ್ಧಕ್ಕೆ ನಿಲ್ಲಿಸಿಬಿಟ್ಟಿದ್ದರು. ಇದರಿಂದ ಅಲ್ಲಿ ಕೆಲಸ ಮಾಡುತ್ತಿದ್ದವರ ಪೈಕಿ ಶೇಕಡ ೫೦ರಷ್ಟು ಜನರು ಬೇರೆ ಕಡೆಗೆ ಹೋದರು. ಇವರಿಗೆ ಯಾವ ರೀತಿ ಹೇಳಿದರೂ ಅರ್ಥವಾಗುವುದಿಲ್ಲ. ಅಧಿಕಾರಿಗಳಿಗೆ ಹಣ ಇಲ್ಲವೆಂದು ಹೇಳಬೇಡಿ ಎಂದು ಇವರು ಹೇಳಿರುವಂತೆ ಕಾಣುತ್ತದೆ. ಏಕೆಂದರೆ, ನಾವು ಅಲ್ಲಿನ ಅಧಿಕಾರಿಗಳನ್ನು ಕೇಳಿದರೆ, ಹಣ ಇಲ್ಲ ಎಂದು ಹೇಳುವುದಕ್ಕೆ ಹೆದರುತ್ತಾರೆ. ಕೆಲಸ ಮಾಡಿಸುತ್ತೇವೆಂದು ಹೇಳುತ್ತಾರೆ. ಆದರೆ ಯಾವ ಕೆಲಸವೂ ನಡೆಯುವುದಿಲ್ಲ. ಈಗಲಾದರೂ ಸರ್ಕಾರದವರು ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿ ಜನರಿಗೆ ಕೆಲಸಗಳನ್ನು ಒದಗಿಸಬೇಕೆಂದು ಹೇಳುತ್ತೇನೆ.

ಇನ್ನು ಕೃಷಿ ಇಲಾಖೆ ಬಗ್ಗೆ ನಾಲ್ಕು ಮಾತುಗಳನ್ನು ಹೇಳಬೇಕಾಗಿದೆ. ಹಿಂಗಾರು ಮಳೆ ಆಗಿಲ್ಲ ಎಂಬುದು ಇವರಿಗೆ ಗೊತ್ತಿದ್ದರೂ ಸಹ ಮಿನಿಕಿಟ್‌ಗಳನ್ನು ವಿತರಣೆ ಮಾಡಿದರು. ಈ ರೀತಿ ವಿತರಣೆ ಮಾಡುವ ಕಾಲಕ್ಕೆ ನನ್ನನ್ನು ಸಹ ಒಂದು ಕಾರ್ಯಕ್ರಮಕ್ಕೆ ಕರೆದಿದ್ದರು. ಆಗ ಅಲ್ಲಿದ್ದ ರೈತರು ಮುಂಗಾರು ಮಳೆ ಬಂದಿಲ್ಲ, ಹಿಂಗಾರು ಮಳೆ ಬಂದಿಲ್ಲ, ಮಿನಿಕಿಟ್ ತೆಗೆದುಕೊಂಡು ಏನು ಮಾಡುವುದು ಎಂದು ಕೇಳಿದರು? ಆಗ ನಾನು ಅವರಿಗೆ ರೊಟ್ಟಿ ಮಾಡಿಕೊಂಡು ತಿನ್ನಿ ಎಂದು ಹೇಳಿದೆ. ಬರಗಾಲ ಇದೆ

ಎಂಬುದು ಇವರಿಗೆ ಗೊತ್ತು, ಮಳೆ ಆಗಿಲ್ಲ ಎಂಬುದು ಇವರಿಗೆ ಗೊತ್ತು. ಆದರೂ ಸಹ ಮಿನಿಕಿಟ್ ಗಳನ್ನು ವಿತರಣೆ ಮಾಡಲು ೧೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್.— ಇದನ್ನು ಹಂಚುವ ಸಂದರ್ಭದಲ್ಲಿ ಮಳೆ ಬರುತ್ತದೆಂಬ ಆಸಕ್ತಿ ನಮಗೆ ಇತ್ತು. ಇದೇ ಕಾರಣದಿಂದ ನಾವು ಸಣ್ಣ ರೈತರಿಗೆ ಮತ್ತು ಅತಿ ಸಣ್ಣ ರೈತರಿಗೆ ತೊಂದರೆ ಆಗ ಬಾರದೆಂದುಕೊಂಡು ಬಿಳಿ ಜೋಳ ಮತ್ತು ಸೂರ್ಯಕಾಂತಿ ಬೀಜಗಳನ್ನು ಹಂಚಿದೆವು. ಆದರೆ ಸೆಪ್ಟೆಂಬರ್ ತಿಂಗಳ ನಂತರ ಹಿಂಗಾರು ಮಳೆ ಬರಲಿಲ್ಲ. ಇದಕ್ಕೆ ಕೇಂದ್ರ ಸರ್ಕಾರದ ಅನುದಾನ ಸಿಗುತ್ತದೆ ಅದನ್ನು ಬಳಿಸಿಕೊಳ್ಳಬೇಕೆಂದು ಹಂಚಿದೆವು. ಆದರೆ ಸಕಾಲದಲ್ಲಿ ಮಳೆ ಆಗಲಿಲ್ಲ.

ಶ್ರೀ. ಯು ಭೂಪತಿ.—ಬರಗಾಲ ಕಾಮಗಾರಿಗೆ ಸರಿಯಾಗಿ ಹಣವನ್ನು ಹಂಚಿಕೆ ಮಾಡಲಿಲ್ಲವೆಂದು ಎಲ್ಲರಿಗೂ ಗೊತ್ತಿದೆ. ಮೊನ್ನೆ ದಿನ ಮಿನಿಕಿಟ್‌ಗಳನ್ನು ಹಂಚಿಕೆ ಮಾಡಿದುದ್ದು ಸರಿಯಲ್ಲ. ಮಳೆ ಇಲ್ಲದೆ ಜನರು ಕಷ್ಟಪಡುತ್ತಿರುವಾಗ ಈ ಮಿನಿಕಿಟ್ಟುಗಳನ್ನು ತೆಗೆದುಕೊಂಡು ಏನು ಮಾಡುವುದು? ಈ ರೀತಿ ಮಿನಿ ಕಿಟ್ಟುಗಳಿಗೆ ಹಣವನ್ನು ದುರುಪಯೋಗ ಮಾಡುವುದನ್ನು ತಡೆಯುವುದಕ್ಕೆ ಸಾಧ್ಯವಾಗುತ್ತಿತ್ತು. ಗೊತ್ತಿಲ್ಲದೇ ಹಣ ಸೋರಿ ಹೋಗುತ್ತಿಲ್ಲ. ಗೊತ್ತಿದ್ದೂ ಹಣವನ್ನು ದುರುಪಯೋಗ ಮಾಡುವುದನ್ನು ತಡೆಗಟ್ಟಬಹುದಾಗಿತ್ತು, ಜನಗಳಿಗೆ ಬೇರೆ ರೀತಿಯಲ್ಲಿ ತಾವು ಸಹಾಯ ಮಾಡಬಹುದಾಗಿತ್ತು, ಇನ್ನು ಜನಗಳಿಗೆ ಪೌಷ್ಟಿಕ ಆಹಾರವನ್ನು ಕೊಡುವುದಕ್ಕಾಗಿ ಹಣವನ್ನು ಖರ್ಚುಮಾಡಲಾಗಿದೆಯೆಂದು ತಿಳಿಸ ಲಾಗಿದೆ. ಬರಗಾಲ ಬಂದಿದ್ದಕ್ಕೆ ಮಾತ್ರ ಪೌಷ್ಟಿಕ ಆಹಾರಕ್ಕೋಸ್ಕರ ಹಣವನ್ನು ಖರ್ಚು ಮಾಡಲಿಲ್ಲ. ಬೇರೆ ಸಮಯದಲ್ಲೂ ಸಹ ಪೌಷ್ಟಿಕ ಆಹಾರಕ್ಕಾಗಿ ಸರ್ಕಾರ ಖರ್ಚು ಮಾಡುತ್ತಿದೆ, ನಮ್ಮ ಕ್ಷೇತ್ರದ ಹತ್ತಿರ ಮುನಿರಾಬಾದ್ ಇದೆ. ಅಲ್ಲಿ ಒಂದು ಜನರಲ್ ಆಸ್ಪತ್ರೆ ಇದೆ. ಇದು ತುಂಗಭದ್ರ ರಿಸರ್ ವಾಯರ್ ಹತ್ತಿರ ಇದೆ, ಈ ಆಸ್ಪತ್ರೆಗೆ ಕೆಲವು ದಿನಗಳ ಹಿಂದೆ ೨ಲಕ್ಷ ರೂಪಾಯಿಗಳ ಬೆಲೆ ಬಾಳುವ ಔಷಧಿಗಳನ್ನು ಸರಬರಾಜು ಮಾಡಿದ್ದಾರೆ. ಅಲ್ಲಿನ ಡಾಕ್ಟರು ನನ್ನ ಹತ್ತಿರ, ಬರಗಾಲ ಪರಿಸ್ಥಿತಿ ರಾಜ್ಯದಲ್ಲಿ ಬಂದಿರುವುದರಿಂದ ನಮ್ಮ ಆಸ್ಪತ್ರೆಗೆ ೨ಲಕ್ಷ ರೂಪಾಯಿಗಳ ಮೌಲ್ಯದ ಔಷಧಗಳನ್ನು ಕೊಟ್ಟಿದ್ದಾರೆಂದು ಹೇಳಿದರು. ಅಲ್ಲಿನ ಡಾಕ್ಟರು ಅಕಸ್ಮಾತ್ ಆ ಆಸ್ಪತ್ರೆಗೆ ಜನ ಬಂದರೆ ಅಸ್ಪೃಶ್ಯ ರನ್ನು ನೋಡುವಂತೆ ನೋಡುತ್ತಾರೆ. ಜನರನ್ನು ಈ ಡಾಕ್ಟರು ಮುಟ್ಟುವುದೇ ಇಲ್ಲ. ಇಂತಹ ಡಾಕ್ಟರು ಇಲ್ಲಿಗೆ ಬೇಡ. ಇವರನ್ನು ಬೇರೆ ಕಡೆ ವರ್ಗ ಮಾಡಿ ಎಂದು ಮಾನ್ಯ ಮಂತ್ರಿಗಳಲ್ಲೂ ಕೇಳಿ ಕೊಂಡಿದ್ದೇನೆ. ಮಾನ್ಯ ಮಂತ್ರಿಗಳು ಈಗ ಆಗುವುದಿಲ್ಲ, ಈಗ ಫ್ಯಾಮಲಿ ಪ್ಲಾನಿಂಗ್ ಆಪರೇಷನನ್ನು ಇಂಪ್ಲಿಮೆಂಟ್ ಮಾಡುತ್ತಿದ್ದೇವೆಂದು ಹೇಳಿ ಕೊನೆಗೂ ಡಾಕ್ಟರನ್ನು ಬೇರೆ ಕಡೆ ವರ್ಗ ಮಾಡಲಿಲ್ಲ, ರಾಜ್ಯದಲ್ಲಿ ಇಂತಹ ಭೀಕರ ಬರಗಾಲ ಇರುವಾಗ ನೀರಿನ ವ್ಯವಸ್ಥೆ ಅಥವಾ ರಸ್ತೆ ವ್ಯವಸ್ಥೆ ಮಾಡಿ ಜನಗಳಿಗೆ ಕೆಲಸ ಕೊಡುವ ಬದಲು ಈ ಆಸ್ಪತ್ರೆಗೆ ೨ ಲಕ್ಷ ರೂಪಾಯಿಗಳ ಔಷಧಿಯನ್ನು ಏಕೆ ಸರಬರಾಜು ಮಾಡಬೇಕಾಗಿತ್ತು? ಅಲ್ಲಿನ ಡಾಕ್ಟರು ಈ ರೀತಿ ಮಾಡುತ್ತಿರುವುದರಿಂದ ಜನಗಳು ನನಗೆ ಕಲ್ಲು ಹೊಡೆಯುವ ಪರಿಸ್ಥಿತಿ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಆಪೋಸಿಷನ್ ಪಾರ್ಟಿಯವರಿಗೇ ಜನರು ಕಲ್ಲು ಹೊಡೆಯಲಿ ಎಂದು ಇವರು ಮಾಡುತ್ತಿರಬಹುದು.

ಶ್ರೀ ಯು. ಭೂಪತಿ.—ಅದು ಏನೇ ಇರಲಿ, ನಾನು ಅದರ ಬಗ್ಗೆ ರಾಜಕೀಯ ಮಾಡುವುದಕ್ಕಾಗು ವುದಿಲ್ಲ. ಇದನ್ನು ಮಂತ್ರಿಗಳ ಗಮನಕ್ಕೆ ಏಕೆ ತಂದೆ ಎಂದರೆ, ಎಲ್ಲಿ ಏನು ಅವಶ್ಯಕತೆ ಇದೆಯೋ ಅದನ್ನು ಸರಬರಾಜು ಮಾಡುವುದನ್ನು ಬಿಟ್ಟು ಅವಶ್ಯಕತೆ ಇಲ್ಲದೇ ಇರುವ ಕಡೆ ಸರಬರಾಜು ಮಾಡು ವುದನ್ನು ಮೊದಲು ನಿಲ್ಲಿಸಬೇಕು, ಒಂದು ಕಡೆ ಕಣ್ಣು ಮುಚ್ಚಿಕೊಂಡು ಕೊಡುತ್ತಿರುವುದು, ಬೇಕಾದ ಕಡೆ ಕೊಡದೇ ಇರುವುದು ಇಂತಹ ಕೆಲಸವನ್ನು ಮೊದಲು ಸರ್ಕಾರದವರು ತಡೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತಿದ್ದೇನೆ. ಒಮ್ಮೆ ಕೃಷಿ ಸಚಿವರು ಒಂದು ಹೇಳಿಕೆಯನ್ನು ಕೊಟ್ಟಿದ್ದರು. ತುಂಗಭದ್ರ ಅಣೆಕಟ್ಟಿನ ಹತ್ತಿರ ಇರುವ ಕೂಡ್ಲಿಗಿ ಗ್ರಾಮದ ಹತ್ತಿರ ೧೦೦ ಎಕರೆಯಲ್ಲಿ ಮೇವಿನ ಬೆಳೆ ಯನ್ನು ಡಿ.ಪಿ.ಎ.ಪಿ ಪ್ರೊಗ್ರಾಮ್ ಮೂಲಕ ಬೆಳೆಯುವ ಯೋಜನೆಯನ್ನು ಹಾಕಿಕೊಂಡಿದ್ದೇವೆಂದು ಹೇಳಿದ್ದರು. ಈ ೧೦೦ ಎಕರೆ ಜಮೀನಿಗೆ ಬೇಲಿಯನ್ನು ಹಾಕಿ ಬೆಳೆಯನ್ನು ಬೆಳೆಯುವುದಕ್ಕೆ ಏರ್ಪಾಡನ್ನು ಮಾಡಿದ್ದರು. ಆದರೆ ಇದ್ದಕ್ಕಿದ್ದ ಹಾಗೆ ಅದನ್ನು ಕೈಬಿಟ್ಟುಬಿಟ್ಟಿದ್ದಾರೆ, ಇವರು ಜನರನ್ನು ಮರಳು ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಪಿ. ಪ್ರಕಾಶ್.—ಕಾಡಾ ಯೋಜನೆಯು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಪಟ್ಟ ರಾಯಚೂರಿನಲ್ಲಿ ೪ ಸಾವಿರ ಎಕರೆಯಲ್ಲಿ ಮೇವಿನ ಬೆಳೆಯನ್ನು ಬೆಳೆಯುವ ಯೋಜನೆ ಸಿದ್ಧಪಡಿಸಿದ್ದರಿಂದ ಅದನ್ನು ಕೈಬಿಡಲಾಯಿತು, ಅದೂ ಅಲ್ಲದೇ ತುಂಗಾಭದ್ರ ಅಣೆಕಟ್ಟೆಯ ಅಚ್ಚುಕಟ್ಟುದಾರರಿಗೆ ಸರಿಯಾಗಿ ನೀರು ಸಿಗುತ್ತಿಲ್ಲವಾದ್ದರಿಂದ ಈ ಯೋಜನೆಯನ್ನು ಕೂಡ್ಲಗಿ ಗ್ರಾಮದಿಂದ ರಾಯಚೂರು ಜಿಲ್ಲೆಗೆ ವರ್ಗಾವಣೆ ಮಾಡಿದ್ದೇವೆ. ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಇವೊತ್ತು ಪ್ರಾಮಾಣಿಕವಾಗಿ ನಾನು ಹೋರಾಟ ಮಾಡುತ್ತೇನೆ. ಬಡವರ ಬಗ್ಗೆ ಕಳಕಳಿ ಇದೆ ಎಂದು ಹೇಳುತ್ತಿದ್ದಾರಲ್ಲ, ಸಂಡೂರಿನಲ್ಲಿರುವ ಕೈಗಾರಿಕೆಯಲ್ಲಿ ಬಡ ಕಾರ್ಮಿಕರನ್ನು ಹೊರ ಹಾಕಿದಾಗ ಇವರ ಪ್ರಾಮಾಣಿಕತೆ ಎಲ್ಲಿ ಹೋಗಿತ್ತು? ಇವೊತ್ತು ಮಾತ್ರ ಇವರು ಬಡವರ ಬಗ್ಗೆ ಅನುಕಂಪದ ಕಣ್ಣೀರನ್ನು ಸುರಿಸುತ್ತಿದ್ದಾರೆ,

ಶ್ರೀ ಆರ್. ವೆಂಕಟರಾಮಯ್ಯ.—ಈಗ ಕೈಗಾರಿಕೆಯ ವಿಷಯ ಏಕೆ ಎತ್ತುತ್ತೀರಿ?

ಶ್ರೀ ಯು. ಭೂಪತಿ.—ಮಾನ್ಯ ಸಚಿವರು ಕೋಪದಿಂದ ಮಾತನಾಡುತ್ತಿದ್ದಾರೆ. ಕೈಗಾರಿಕೆಯಲ್ಲಿ ಕಾರ್ಮಿಕರನ್ನು ಹೊರಹಾಕಿದಾಗ ನಾನು ಏನು ಮಾಡುತ್ತಿದ್ದೆ ಎಂದು ಕೇಳಿದ್ದಾರೆ. ಎಲ್ಲಾ ಕಾರ್ಮಿಕರನ್ನು ಕಮ್ಯುನಿಸ್ಟರವರೇ ಸಂಘಟನೆ ಮಾಡುವುದಕ್ಕೆ ಸಾಧ್ಯವಿಲ್ಲ. ಸಂದರ್ಭ, ಸಮಯ, ಸರಿಯಾದಂತಹ ಪರಿಸರ ಎಲ್ಲಾ ಬೇಕಾಗುತ್ತದೆ. ತೆಗೆದಿರತಕ್ಕಂತಹ ಕಾರ್ಮಿಕರು ಅಲ್ಲಿ ಸಂಘಟನೆ ಮಾಡಿಕೊಳ್ಳುವುದಕ್ಕೆ ತಯಾರು ಇಲ್ಲವೆಂದ ಮೇಲೆ ಅವರನ್ನು ನಾನು ಕಾಲು ಹಿಡಿಯಬೇಕೆ? ಅವರೇ ಸಂಘಟನೆಗೆ ತಯಾರಿಲ್ಲ ಎಂದರೆ ಯಾರು ಏನು ಮಾಡುವುದಕ್ಕಾಗುವುದಿಲ್ಲ. ನಾನು ಶಾಸಕನಾಗಿ ಬಂದಿರುವುದು ಕಮ್ಯುನಿಷ್ಟ ಪಕ್ಷದಿಂದ ಎಂದು ಪದೇ ಪದೇ ಹೇಳುತ್ತೇನೆ. ನಾನು ಅರಮನೆಯವರಿಂದ ಗೆದ್ದು ಬಂದಿಲ್ಲ

ನೀವು ಮೇವಿನ ಬೆಳೆಯನ್ನು ಅಲ್ಲಿ ಬೆಳೆಯುತ್ತೇವೆಂದು ೧೦೦ ಎಕರೆ ಜಮೀನಿಗೆ ಬೇಲಿಯನ್ನು ಹಾಕಿಸಿದಿರಿ. ಆ ಬೇಲಿ ಹಾಕುವುದಕ್ಕೆ ಎರಡು ತಿಂಗಳು ಹಿಡಿಯಿತು. ಬೇಲಿ ಎಲ್ಲಾ ರೆಡಿ ಆದ ಮೇಲೆ ಅಲ್ಲಿ ಮೇವು ಬೆಳೆಯುವುದನ್ನು ರಾಯಚೂರು ಜಿಲ್ಲೆಗೆ ವರ್ಗಾವಣೆ ಮಾಡಿದ್ದೀರಿ. ಅಲ್ಲಿನ ಜನರು ಬರಗಾಲಕ್ಕೆ ತುತ್ತಾಗಿ ಬಹಳ ಕಷ್ಟಪಡುತ್ತಿದ್ದಾರೆ. ಈಗ ಕಾಲುವೆಗಳಲ್ಲಿ ನೀರನ್ನು ಸಹ ಬಿಡುತ್ತಿಲ್ಲ ಜನರು ನೀರು ಬಿಡಿ ಎಂದು ಕೇಳಿದ್ದಾರೆ. ಆದರೂ ನೀರನ್ನೂ ಬಿಡಲಿಲ್ಲ. ಅಲ್ಲಿನ ಜನರು ಕೊನೆಗೆ ಕಾಲುವೆಯನ್ನು ಕಡಿಯುವುದಕ್ಕೆ ಹೋದರು. ಆ ಜನರ ಬಗ್ಗೆ ನನಗೆ ಕಳಕಳಿ ಇದೆ. ನನ್ನ ಪ್ರಾಮಾಣಿಕತೆ ಬಗ್ಗೆ ಮತ್ತು ಕಳಕಳಿ ಬಗ್ಗೆ ನೋಡುವುದಕ್ಕೆ ನಮ್ಮ ಜನ ಇದ್ದಾರೆ, ನನ್ನನ್ನು ಸೂಪರ್ ವೈಸ್ ಮಾಡುವುದಕ್ಕೆ ನಮ್ಮ ಪಕ್ಷ ಇದೆ. ನಮ್ಮ ಪಕ್ಷದ ನಾಯಕರು ಇದ್ದಾರೆ. ಇದರ ಬಗ್ಗೆ ನಾನು ಬೇರೆಯವರಿಂದ ಏನನ್ನೂ ಕಲಿಯಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಎಂ. ಪಿ. ಪ್ರಕಾಶ್.—ಉಳಿದವರೂ ಹಾಗೇ ಇರುತ್ತಾರೆಂದು ಮಾನ್ಯ ಸದಸ್ಯರು ತಿಳಿಯಬೇಕು.

ಶ್ರೀ ಯು. ಭೂಪತಿ.—ನೀವು ಪತ್ರಿಕೆಯಲ್ಲಿ ಕೊಟ್ಟಂತಹ ಹೇಳಿಕೆಯನ್ನು ಪ್ರಸ್ತಾಪ ಮಾಡಿ ಹೇಳುತ್ತಿದ್ದೇನೆ. ಅದರಲ್ಲಿ ಏನಾದರೂ ತಪ್ಪು ಇದ್ದರೆ ಹೇಳಿ. ನೀವು ಹೇಳಿಕೆ ಕೊಟ್ಟಿಲ್ಲ ಹೇಳಿಕೆ ಕೊಟ್ಟಿಲ್ಲ ಎಂದು ಹೇಳಿ. ನಿಮ್ಮ ಹೇಳಿಕೆಯನ್ನು ಎಷ್ಟರಮಟ್ಟಿಗೆ ಕಾರ್ಯರೂಕ್ಕೆ ತಂದಿದ್ದೀರಿ ಎಂದು ನಾನು ಇಲ್ಲಿ ಹೇಳುತ್ತಿದ್ದೇನೆ.

ಶ್ರೀ ಎಂ. ಪಿ. ಪ್ರಕಾಶ್.—ರಾಯಚೂರಿನಲ್ಲಿ ಬೆಳೆಯುವುದಕ್ಕೆ ಒಳ್ಳೆಯ ಅನುಕೂಲವಿದ್ದುದರಿಂದ ಅಲ್ಲಿಗೇ ವರ್ಗಾವಣೆ ಮಾಡಿದ್ದೇವೆ.

ಶ್ರೀ ಯು. ಭೂಪತಿ.—ನಿಮ್ಮ ಕೈಯಲ್ಲಿ ಹೇಳಿದ ಕೆಲಸವನ್ನೇ ಮಾಡುವುದಕ್ಕಾಗುವುದಿಲ್ಲ. ನಿಮ್ಮ ಸರ್ಕಾರದ ಕೈಯಲ್ಲೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಇನ್ನು ೧೦ ವರ್ಷ ಹೋದರೂ ನಿಮ್ಮಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ. ಎಲ್ಲಿಯವರೆಗೆ ಮೂಲಭೂತವಾದ ಸಮಸ್ಯೆಗಳು ನಮ್ಮ ದೇಶದಲ್ಲಿ ಬಗೆಹರಿಯುವುದಿಲ್ಲವೋ ಅಲ್ಲಿಯವರೆಗೆ ಯಾವುದೇ ಸರ್ಕಾರದಿಂದಲೂ ಜನರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರವು ಈಗ ಉದ್ಭವವಾಗಿರುವ ಬರಗಾಲ ಪರಿಸ್ಥಿತಿಯನ್ನು ಎದುರಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಮಾನ್ಯ ಕಂದಾಯ ಸಚಿವರು ಕೊಟ್ಟಿರತಕ್ಕಂತಹ ಹೇಳಿಕೆ

ವೈವಿಧ್ಯಮಯವಾಗಿ ಕೂಡಿದೆ. ಅವರು ಕೊಟ್ಟಿರತಕ್ಕಂತ ಅಂಕಿ ಅಂಶಗಳು ಮತ್ತು ಈಗ ಆಗಿರತಕ್ಕ ಕೆಲಸಗಳನ್ನು ನೋಡಿದರೆ ಒಂದಕ್ಕೊಂದು ಅಜಗಜಾಂತರ ವ್ಯತ್ಯಾಸ ಇದೆ. ಬರ ಪರಿಹಾರ ಕಾಮಗಾರಿಗಳನ್ನು ಸರಿಯಾಗಿ ಮಾಡುವುದಕ್ಕಾಗಲಿಲ್ಲ ಎಂಬುದನ್ನು ಸರ್ಕಾರ ಒಪ್ಪಿಕೊಳ್ಳಬೇಕು ಎನ್ನುವ ಮಾತನ್ನು ನಾನು ಹೇಳುತ್ತೇನೆ. ತಾತ್ಕಾಲಿಕ ಬರ ಪರಿಹಾರ ಕಾಮಗಾರಿಗಳ ಕಡೆ ಗಮನ ಕೊಡದೇ ಶಾಶ್ವತವಾದ ಬರ ಪರಿಹಾರ ಕಾಮಗಾರಿಗಳ ಕಡೆ ಗಮನ ಕೊಟ್ಟರೆ ಒಳ್ಳೆಯದು. ರಾಜ್ಯದಲ್ಲಿರುವ ಕೆರೆಗಳ ಹೂಳನ್ನು ತೆಗೆಯುವುದು, ರಿಸರ್‌ವಾಯರ್‌ಗಳಲ್ಲಿ ಹೆಚ್ಚು ನೀರು ನಿಲ್ಲಿಸುವುದು ಮುಂತಾದ ಕೆಲಸಗಳ ಕಡೆ ಸರ್ಕಾರ ಗಮನ ಕೊಟ್ಟರೆ ಒಳ್ಳೆಯದು. ಇನ್ನು ಬಡವರಿಗೆ ಹಸಿರು ಕಾರ್ಡ್‌ಗಳನ್ನು ವಿತರಣೆ ಮಾಡಿರುವ ಬಗ್ಗೆ ಹೇಳಬೇಕಾದರೆ, ಅನೇಕ ಗ್ರಾಮಗಳಲ್ಲಿ ಬಡ ಜನರು ಬೇಕಾದಷ್ಟು ಜನ ಇದ್ದಾರೆ ಆದರೆ ಈ ಬಡ ಜನರಿಗೆ ಹಸಿರು ಕಾರ್ಡ್‌ಗಳನ್ನು ಕೊಟ್ಟಿರುವುದೇ ಇಲ್ಲ. ಎಲ್ಲರಿಗೂ ಕೊಟ್ಟಿಲ್ಲವೆಂದು ಹೇಳುವುದಿಲ್ಲ. ಕೆಲವರಿಗೆ ಕೊಟ್ಟಿದ್ದೀರಿ. ಇನ್ನೂ ಕೊಡಬೇಕಾದ ಜನರು ಬಹಳ ಜನ ಇದ್ದಾರೆ. ಶ್ರೀಮಂತರಿಗೆ ಕೊಡಿ ಎಂದು ನಾನು ಹೇಳುವುದಿಲ್ಲ. ನಿಜವಾಗಿ ಇದು ಯಾರಿಗೆ ಸಲ್ಲಬೇಕೋ ಅಂತಹವರಿಗೆ ಕೊಡಿ. ವರ್ಷದ ಆದಾಯವನ್ನು ಪರಿಗಣಿಸಿ ಅವರುಗಳಿಗೆ ಕಾರ್ಡುಗಳನ್ನು ವಿತರಣೆ ಮಾಡಿ, ಬರಗಾಲಕ್ಕೆ ತುತ್ತಾಗಿರತಕ್ಕಂತಹ ಗ್ರಾಮಗಳ ಕಾರ್ಮಿಕರೆಲ್ಲರಿಗೂ ಹಸಿರು ಕಾರ್ಡ್‌ಗಳನ್ನು ಒದಗಿಸಿಕೊಡಬೇಕು. ಹಾಗೂ ಬರಗಾಲಕ್ಕೆ ತುತ್ತಾಗಿರತಕ್ಕ ಪ್ರದೇಶಗಳಿಗೆ ಬೋರ್‌ವೆಲ್‌ಗಳನ್ನು ತೋಡಿಸತಕ್ಕ ಅವಶ್ಯಕತೆ ಬಹಳ ಇದೆ. ಈ ದಿನ ಬೆಳಿಗ್ಗೆ ಮಾನ್ಯ ಲಕ್ಷ್ಮೀಸಾಗರ ರವರು, ಶಾಸಕರು ಅವರ ಕ್ಷೇತ್ರದಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ಕೇಳುತ್ತಾರೋ ಅಷ್ಟನ್ನೂ ಹಾಕಿಸಿಕೊಡುತ್ತೇವೆಂದು ಹೇಳಿದರು. ನಮ್ಮ ಕ್ಷೇತ್ರಕ್ಕೆ ೨೦ ಬೋರ್‌ವೆಲ್‌ಗಳನ್ನು ತೋಡಿಸಿಕೊಡಿ ಎಂದು ಜಿಲ್ಲಾ ಮಟ್ಟದ ಸಮಿತಿಯಲ್ಲಿ ಕೇಳಿಕೊಂಡಿದ್ದೆ. ಆದರೆ ಅವರು ಸೊನ್ನೆಯನ್ನು ತೆಗೆದುಹಾಕಿ ಕೇವಲ ಎರಡು ಬೋರ್‌ವೆಲ್‌ಗಳನ್ನು ಮಾತ್ರ ತೋಡಿಸಿಕೊಟ್ಟಿದ್ದಾರೆ. ಈ ರೀತಿಯಾಗದಂತೆ ದಯಮಾಡಿ ನೋಡಿಕೊಳ್ಳಬೇಕು. ಸ್ಕೇರ್‌ಸಿಟಿ ಕಮಿಟಿಯವರು ಪ್ರತಿಯೊಂದೂ ಜಿಲ್ಲೆಗೂ ಭೇಟಿ ಕೊಟ್ಟು ಜಿಲ್ಲಾಧಿಕಾರಿಗಳಿಗೆ ಮತ್ತು ಅಸಿಸ್ಟೆಂಟ್ ಕಮೀಷನರುಗಳಿಗೆ ಸರಿಯಾಗಿ ಬರಗಾಲ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಆದೇಶಗಳನ್ನು ಕೊಡಬೇಕು. ಇಲ್ಲದಿದ್ದರೆ ಪರಿಸ್ಥಿತಿ ಬಹಳ ಗಂಭೀರವಾಗುತ್ತದೆ. ಆದುದರಿಂದ ಈ ವಿಚಾರದಲ್ಲಿ ಸರ್ಕಾರದವರು ಕಟ್ಟುನಿಟ್ಟಾದ ನಿರ್ಣಯಗಳನ್ನು ತೆಗೆದುಕೊಂಡು ಅಧಿಕಾರಿಗಳನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಂಡು ಕೆಲಸ ಮಾಡಿಸಬೇಕೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು). ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ ಬರಗಾಲ ಎಂದರೆ ನಾವು ಯೋಚನೆ ಮಾಡಬೇಕಾಗಿರುವುದು ಅದರಿಂದ ಉಂಟಾದ ಗಂಭೀರತೆ ಮತ್ತು ಪರಿಣಾಮಗಳನ್ನು ಈ ಬರಗಾಲದ ಪರಿಣಾಮವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮ ಜೀವನ ಮತ್ತು ಅಲ್ಲಿನ ಆರ್ಥಿಕ ವ್ಯವಸ್ಥೆ ಬುಡಮೇಲಾಗುತ್ತದೆ. ಇದರಿಂದಾಗಿ ಈ ಒಂದು ಅವಕಾಶಕ್ಕೋಸ್ಕರ ಕೆಲವು ಧನಿಕ ವರ್ಗದವರು ಕಾಯುತ್ತಾ ಇರುತ್ತಾರೆ. ಕೃಷಿ ಕಾರ್ಮಿಕರು ಹೊಟ್ಟೆಪಾಡಿಗೋಸ್ಕರ ಊರು ಬಿಟ್ಟು ಹೋಗುತ್ತಾರೆ. ಎಂದರೆ ಕೋಲಾರದವರು ಬೆಂಗಳೂರಿಗೆ ಬಂದು ಸೇರಿದ್ದಾರೆ. ಬಡ ರೈತರು, ಮಧ್ಯಮ ವರ್ಗದ ರೈತರು ಆರ್ಥಿಕ ದುಸ್ಥಿತಿಯಿಂದಾಗಿ ಭೂಮಿಯನ್ನು ಬೇರೆಯವರಿಗೆ ಎಂದರೆ ಧನಿಕ ವರ್ಗದವರಿಗೆ ಮಾರುತ್ತಾರೆ. ಇದರಿಂದಾಗಿ ಭೂ-ಸ್ವಾಮಿತ್ವ ಹೆಚ್ಚು ಕಡಿಮೆಯಾಗಿ ಹಲವಾರು ಸಮಸ್ಯೆಗಳು ಉದ್ಭವವಾಗುವುದಕ್ಕೆ ಕಾರಣವಾಗುತ್ತದೆ. ಈ ಒಂದು ಪರಿಸ್ಥಿತಿಯಿಂದ ಮಾನ್ಯ ಮಂತ್ರಿಯವರು ನಿನ್ನೆ ಕೊಟ್ಟಂಥ ರಿಪೋರ್ಟ್‌ಪ್ರಕಾರ ಎರಡು ಕೋಟಿ ಹತ್ತು ಲಕ್ಷ, ಮೂವತ್ತೆರಡು ಸಾವಿರ ಜನರು ತೊಂದರೆಗೆ ಒಳಗಾಗಿದ್ದಾರೆ ಅಲ್ಲದೆ ಒಂದು ಕೋಟಿ, ಏಳು ಲಕ್ಷ ಮೂವತ್ತೊಂಭತ್ತು ಸಾವಿರ ಜಾನುವಾರುಗಳು ತೊಂದರೆಗೊಳಗಾಗಿವೆ ಎಂದೂ ಹೇಳಿದ್ದಾರೆ. ಇದನ್ನೆಲ್ಲಾ ಗಮನಿಸಿದರೆ ಸಮಸ್ಯೆಯನ್ನು ಪರಿಹರಿಸಲು ನಾವು ಮಾಡಬೇಕಾದದ್ದು ಏನು? ಮತ್ತು ಮಾಡಿದ್ದು ಏನು ಎಂಬ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಈ ಹಿಂದೆ ಬರಗಾಲದ ಪರಿಸ್ಥಿತಿಯ ಅಧ್ಯಯನ ಮಾಡಲು ಒಂದು ಸಮಿತಿಯನ್ನು ರಚಿಸಿ, ಆ ಸಮಿತಿಯವರು ಎಂದರೆ ಮಾನ್ಯ ಖಾರ್ಗೆ ಸಮಿತಿಯವರು ತಮ್ಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು. ಆ ಸಂದರ್ಭದಲ್ಲಿ ಬರಗಾಲದ ತೀವ್ರತೆ ಕಡಿಮೆ ಇತ್ತು. ಮಾನ್ಯ ಖಾರ್ಗೆಯವರು, ಮತ್ತು ನಾವೆಲ್ಲರೂ ಅಂತಹ ಸ್ಥಳಗಳಿಗೆ ಪ್ರವಾಸ ಮಾಡಿ ನೋಡಿ, ಅಂದು ಇದ್ದ ಪರಿಸ್ಥಿತಿಯು ಮುಂದೆ ತೀವ್ರವಾಗುವುದು ಸಾಧ್ಯ ಎಂಬ ಅಭಿಪ್ರಾಯವನ್ನು ಕೊಟ್ಟಿದ್ದೆವು. ಅದನ್ನು ಸರ್ಕಾರ ಗಮನಿಸಿಲ್ಲ

ಎಂದು ಕಾಣುತ್ತದೆ. ಆಗ ೧೭ ಸಾವಿರ ಹಳ್ಳಿಗಳಲ್ಲಿ ಬರಗಾಲವಿದ್ದುದು ಈಗ ೧೯ ಸಾವಿರಕ್ಕೆ ವಿಸ್ತರಿಸಿದೆ. ಎಲ್ಲಾ ತಾಲ್ಲೂಕುಗಳಿಗೆ ಇದು ಆವರಿಸಿದೆ. ಇದರ ಸಮಸ್ಯೆ ಬಹಳ ತೀವ್ರವಾಗಿ ಜನರನ್ನು ಕಾಡುತ್ತಿದೆ. ಇದನ್ನು ಗಮನಿಸಿದರೆ ಈಗ ನಾವು ಮಾಡಬೇಕಾದ ಕರ್ತವ್ಯ ಏನು ಎಂದು ನೋಡಿದಾಗ, ಅದನ್ನು ರಾಜಕೀಯವಾಗಿ ನೋಡಬಾರದು. ನಾನು ಮುಖ್ಯವಾಗಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಒಂದು ವಿಷಯ ವನ್ನು ಹೇಳಬೇಕಾಗುತ್ತದೆ. ಇಲ್ಲಿ ರಾಜ್ಯದ ಮತ್ತು ಕೇಂದ್ರದ ಸಂಬಂಧವು ಹೆಚ್ಚು ಪರಿಣಾಮಕಾರಿಯಾಗಿ ಬರುತ್ತದೆ. ನಮ್ಮ ಮುಖ್ಯಮಂತ್ರಿಗಳು ೧೯೮೩-೮೪-೮೫ರಲ್ಲಿ ಕೇಂದ್ರವನ್ನು ವಿಪರೀತವಾಗಿ ತೆಗಳುತ್ತಾ ಇದ್ದರು. "ಕೇಂದ್ರ ಸರ್ಕಾರ ನಮಗೆ ಸಹಕಾರ ಕೊಡುತ್ತಾ ಇಲ್ಲ, ನಮ್ಮ ಬಗ್ಗೆ ಮಲತಾಯಿಯ ಧೋರಣೆ ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಾ ಇದ್ದರು, ಈ ವಿಷಯಗಳು ಪತ್ರಿಕೆಯಲ್ಲಿ ಬಂದಿದೆ. ಆದರೆ ಅದನ್ನು ಇವರು ಮುಂದುವರಿಸಿಕೊಂಡು ಹೋಗಲಿಲ್ಲ. ಮಾನ್ಯ ಬೊಮ್ಮಾಯಿಯವರು ಕೊಟ್ಟಿರುವ ರಿಪೋರ್ಟ್ ಪ್ರಕಾರ ೧೯೮೪-೮೫ರಲ್ಲಿ ನಮಗೆ ಯೋಜನೆ ಪ್ರಕಾರ ಆರ್‌ಎಲ್‌ಇಜಿಪಿ. ಯಲ್ಲಿ ಬರಬೇಕಾದುದರಲ್ಲಿ ೫೦ ಕೋಟಿ ಕಡಿಮೆ ಮಾಡಿದರು. ಈ ವಿಷಯವನ್ನು ಮಾನ್ಯ ಬಂಗಾರಪ್ಪನವರು ಮತ್ತು ಮಾನ್ಯ ಕೆ. ಹೆಚ್. ಪಾಟೀಲರವರು ಗಮನಿಸಬೇಕು. ಏಕೆಂದರೆ ಮಾತನಾಡಿದರೆ ಕೇಂದ್ರ ಸರ್ಕಾರದವರು ಹಣ ಕೊಟ್ಟಿದ್ದಾರೆ, ಇವರೇ ಸರಿಯಾಗಿ ನಡೆಸುವುದಿಲ್ಲ ಎಂದು ಆ ಕಡೆಯವರು ಹೇಳು ತ್ತಿರುತ್ತಾರೆ. ಮಾನ್ಯ ಬೊಮ್ಮಾಯಿಯವರು ಕೊಟ್ಟಿರುವ ಪ್ರಕಾರ ನೋಡಿದರೆ ಸ್ಪಷ್ಟವಾಗಿ ಇದೆ. ಪುಟ ೧೦ರಲ್ಲಿ ೭೫ ಕೋಟಿಗಳು ಇದ್ದಲ್ಲಿ ೮ ಕೋಟಿ ಕೊಟ್ಟಿದ್ದಾರೆ, ಆ ಮೇಲೆ, ೧೯೮೩-೮೪ ರಲ್ಲಿ ೬೧ ಕೋಟಿಗಳಲ್ಲಿ ೧೪ ಕೋಟಿ ಕೊಟ್ಟಿದ್ದಾರೆ. ೧೯೮೪-೮೫ ರಲ್ಲಿ ೨೧೯ ಕೋಟಿಗಳಲ್ಲಿ ೩೨.೭೩ ಕೋಟಿ ದ್ದಾರೆ. ಇದನ್ನು ನೋಡಿದರೆ ನಮಗೆ ೪೦ ಕೋಟಿ ರೂಪಾಯಿಗಳ ಖೋತಾ ಆಯಿತು. ನಿಮಗೆ ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ ಎಂದು ಇವರುಗಳು ಹೇಳುತ್ತಾ ಇರುತ್ತಾರೆ. ಎನ್ ಆರ್ ಡಬ್ಲ್ಯೂಎಸ್, ಆರ್‌ಎಲ್ ಇಜಿಪಿ, ಐಆರ್‌ಡಿಪಿ ಈ ರೆಗ್ಯೂಲರ್ ಪ್ರೋಗ್ರಾಂಗಳಲ್ಲಿ ನಮಗೆ ೪೨ ಕೋಟಿ ರೂಪಾಯಿಗಳ ಖೋತಾ ಮಾಡಿದರು. ನಾವು ಈ ವಿಷಯದಲ್ಲಿ ಈಗಾಗಲೇ ಪ್ರೊಟೆಸ್ಟ್ ಮಾಡಬೇ ಕಾಗಿತ್ತು. ಆದರೆ ಮಾನ್ಯ ರಾಮಕೃಷ್ಣ ಹೆಗಡೆಯವರು ಕೇಂದ್ರ ಸರಕಾರದವರೊಡನೆ ಗಲಾಟೆ ಮಾಡುವುದನ್ನು ಏಕಾಏಕಿಯಾಗಿ ಬಿಟ್ಟರು. ಗಲಾಟೆ ಮಾಡಿ ನೋಡಿದರು, ಹೆದರಿಸಿ ನೋಡಿದರು, ಆದರೆ ಕೇಂದ್ರದವರಿಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಸುಮ್ಮನಾದರು. ಆ ಮೇಲೆ ಓವರ್‌ಡ್ರಾಫ್ಟ್ ರೆಸ್ಟೋರ್ ಮಾಡುತ್ತೇವೆ ಎಂದು ಹೇಳಿದರು. ಮಾನ್ಯ ಪ್ರಧಾನ ಮಂತ್ರಿಗಳು ರಾಜ್ಯಕ್ಕೆ ಬೇಟಿ ಕೊಟ್ಟರು. ಆಗ ಮಾನ್ಯ ರಾಮಕೃಷ್ಣ ಹೆಗಡೆಯವರು ಹೊಗಳಲಿಕ್ಕೆ ಪ್ರಾರಂಭ ಮಾಡಿದರು. ಆಗ ಪ್ರಧಾನಿಯವರು ಇದು ರಾಜ್ಯಗಳ ಸಮಸ್ಯೆ, ಬರಗಾಲ ಪೀಡಿತ ರಾಜ್ಯಗಳೆಲ್ಲವಕ್ಕೂ ಹಣ ಕೊಡಬೇಕಾಗುತ್ತದೆ. ರಾಜಸ್ಥಾನಕ್ಕೂ ಕೊಡಬೇಕಾಗುತ್ತದೆ, ಅಷ್ಟು ಸುಲಭವಾಗಿ ಸಹಾಯ ಮಾಡುವುದಕ್ಕಾಗುವುದಿಲ್ಲ. ಕೆಲವೊಂದು ನಾರ್ಮ್ಸ್ ಬಿಟ್ಟು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ರೆವಿನ್ಯೂ ಮಂತ್ರಿಗಳ ಮೀಟಿಂಗ್ ದೆಹಲಿಯಲ್ಲಿ ನಡೆದಾಗ ಅಲ್ಲಿ ಮಾನ್ಯ ಬೊಮ್ಮಾಯಿಯವರು ಈ ನಾರ್ಮ್ಸ್‌ಗಳನ್ನು ಬದಲಾವಣೆ ಮಾಡಬೇಕೆಂದು ಹೇಳಿದ್ದಾರೆ. ಪ್ಲಾನ್ಸ್ ಅಡ್ವಾನ್ಸ್ ಎಂದು ಕೊಟ್ಟಿ ದ್ದಾರೆ. ವಾಪಸ್ಸು ಕೊಡದೇ ಇರತಕ್ಕಂತಹ ಗ್ರಾಂಟ್‌ನ್ನು ಕೊಟ್ಟಿಲ್ಲ. ನಮ್ಮ ದುರಾದೃಷ್ಟ ಫ್ಯಾಮಿನ್ ಕೋಡ್ ರಿವೈಸ್ ಆಗಿಲ್ಲ. ಹಳೆಯ ಕೋಡ್ ಇನ್ನೂ ಇದೆ. ಮಾನ್ಯ ಬೊಮ್ಮಾಯಿಯವರನ್ನು ಕೇಳಿದಾಗ, ಅವರು ಒಂದು ಕಮಿಟಿಯನ್ನು ಮಾಡಿದ್ದಾರೆ, ಅದರ ವರದಿ ಬಂದ ಮೇಲೆ ಮಾಡುತ್ತಾರೆ. ಎಂದು ಹೇಳಿ ಅವರು ಕೇಂದ್ರವದರು. ತಿದ್ದುಪಡಿಯಲ್ಲಿ ಅದು ಬಂದರೆ ನಮಗೂ, ನಿಮಗೂ ಕೇಂದ್ರ ಸರಕಾರವನ್ನು ಸಹಾಯಕ್ಕಾಗಿ ಕೇಳುವ ಹಕ್ಕನ್ನು ಪಡೆಯಲು ಅವಕಾಶ ಆಗುತ್ತದೆ. ಮಾನ್ಯ ಕೇಂದ್ರಕೃಷಿ ಮಂತ್ರಿಗಳಾದ ಬೂಟಾ ಸಿಂಗ್‌ರವರು ಬರಗಾಲದ ಪರಿಸ್ಥಿತಿಯನ್ನು ನೋಡಲು ಬಂದರು ಅವರು ಬೂಟಾ ಸಿಂಗ್ ಅಥವಾ ಬೂತಾ ಸಿಂಗ್ ಎನ್ನುವುದು ನನಗೆ ಗೊತ್ತಿಲ್ಲ. ಅವರು ಕೋಲಾರದ ಗುಡಿಬಂಡೆ ಮತ್ತಿತರ ಒಂದೆರಡು ಕಡೆಗಳಲ್ಲಿ ಒಂದೆರಡು ಘಂಟೆಗಳ ಕಾಲ ವೀಕ್ಷಿಸಿ ಹೋದರು. ಅಲ್ಲಿನ ಗೋಶಾಲೆ ಮತ್ತಿತರ ಕಷ್ಟಪರಿಸ್ಥಿತಿಯನ್ನು ಕಂಡರು ಎಂದು ಕಾಣುತ್ತದೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳ ವರು ಭೂಟಾ ಸಿಂಗ್‌ರವರು ನಮ್ಮ ಕಷ್ಟ ಪರಿಸ್ಥಿತಿಯನ್ನು ಮನಗಂಡು ಒಪ್ಪಿಕೊಂಡಿದ್ದಾರೆ, ಎಂದು ಹೇಳಿದ್ದಾರೆ, ಆದರೆ ಅವರು ನಮಗೆ ಏನೂ ಅನುಕೂಲ ಮಾಡಿಕೊಡಲಿಲ್ಲ. ಏಕೆ ಈ ರೀತಿ ಆಯಿತು ಎಂದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯರು ನಮಗೆ ಅನುಕೂಲ ಮಾಡಿಕೊಟ್ಟಾರು ಎಂದು ನಾವುಗಳು ಭಾವಿಸಿದ್ದೆವು. ಆದರೆ ಅದು ಹಾಗೆ ಆಗಲಿಲ್ಲ. ನನಗೇನೂ ಮಾನ್ಯ ಬೂಟಾ ಸಿಂಗ್‌ರವರು ಅಷ್ಟಾಗಿ

ಗೊತ್ತಿಲ್ಲ, ಆದರೆ ಅವರು ಒಬ್ಬ ಕಾಂಗ್ರೆಸ್ ನಾಯಕರು ಎಂದು ಬಲ್ಲೆ. ಕರ್ನಾಟಕಕ್ಕೆ ಈ ಪರಿಸ್ಥಿತಿಯಲ್ಲಿ ಅವರು ಎಷ್ಟು ಸಹಾಯ ಮಾಡಬೇಕಾಗಿತ್ತೋ ಅಷ್ಟು ಸಹಾಯವನ್ನು ಮಾಡಿಲ್ಲ ಎಂದು ನಾನು ಹೇಳುತ್ತಿರುವುದು. ಹಾಗೆಯೇ ಗ್ರ್ಯಾಂಟ್ ೧೦೦ ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಈ ಹಿಂದೆ ೬೪೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು ಉಳಿದ ೧೦೦ ಕೋಟಿಯನ್ನು ಈಗ ಕೊಟ್ಟಿದ್ದಾರೆ. ಅದು ಹೆಚ್ಚಿಗೆ ಕೊಟ್ಟಂತಾಗಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ನಮಗೆ ಫ್ರೀಗ್ರ್ಯಾಂಟ್ ಕೊಡಬೇಕೆಂದು ಕೇಂದ್ರದವರಿಗೆ ದಬಾಯಿಸಿ ಕೇಳಬೇಕು. ಈಗ ನಮ್ಮ ಪರಿಸ್ಥಿತಿಯ ರಿಪೋರ್ಟ್ ಕೇಂದ್ರ ಸರಕಾರಕ್ಕೆ ಹೋಗುತ್ತದೆ. ಒಂದು ಬೇಸರದ ವಿಷಯ ಎಂದರೆ ಕೇಂದ್ರದವರು ಒಂದು ಸಮಿತಿಯನ್ನು ಕೂಡಾ ಅಧ್ಯಯನಕ್ಕಾಗಿ ಇಲ್ಲಿಗೆ ಕಳುಹಿಸಿಕೊಡಲಿಲ್ಲ. ದಯ ಮಾಡಿ ನಮ್ಮ ಕಾಂಗ್ರೆಸ್ ಮಿತ್ರರು ಈ ವಿಷಯದಲ್ಲಿ ತಮ್ಮ ಸಹಾಯ ಹಸ್ತವನ್ನು ನೀಡಬೇಕು. ಏಕೆಂದರೆ ಇದು ಮಾನವೀಯತೆಯ ಪ್ರಶ್ನೆ. ಇದನ್ನು ತುಸು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಇಂತಹ ಕಷ್ಟಕರವಾದ ಪರಿಸ್ಥಿತಿಯಲ್ಲಿ ನಾವುಗಳು ಇರುವುದನ್ನು ನಮ್ಮ ಮಿತ್ರರು ಕೇಂದ್ರ ಸರಕಾರಕ್ಕೆ ತಿಳಿಸಿ ಹೇಳಬೇಕು. ಇನ್ನು ಹೆಚ್ಚಿಗೆ ಗ್ರ್ಯಾಂಟ್‌ನ್ನು ಕರ್ನಾಟಕಕ್ಕೆ ಕೇಂದ್ರದವರಿಂದ ಪಡೆಯುವಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸಬೇಕು. ಕರ್ನಾಟಕ ಬಹಳ ಹಿಂದುಳಿದಿರತಕ್ಕಂತಹ ಪ್ರದೇಶ, ಅಭಿವೃದ್ಧಿ ಹೊಂದಿರತಕ್ಕಂತಹ ರಾಜ್ಯವಾಗಿದೆ. ಆದರೆ ಆರ್ಥಿಕವಾಗಿ ತೊಂದರೆಯಲ್ಲಿರತಕ್ಕಂತಹ ರಾಜ್ಯವಾಗಿದೆ. ಆದುದರಿಂದ ಫ್ರೀ ಗ್ರ್ಯಾಂಟ್ ಸಿಗುವಂತೆ ಅವರು ಪ್ರಯತ್ನ ಪಟ್ಟು ತಮ್ಮ ಸಹಕಾರವನ್ನು ಮಾಡಬೇಕೆಂದು ಮತ್ತು ಇನ್ನೂ ಹೆಚ್ಚುವರಿ ಗ್ರ್ಯಾಂಟನ್ನು ಕೇಂದ್ರದವರಿಂದ ಪಡೆದುಕೊಂಡು ಕಷ್ಟಪರಿಸ್ಥಿತಿಯಲ್ಲಿರುವ ರಾಜ್ಯಕ್ಕೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಅಧ್ಯಕ್ಷಿಣಿಯವರೇ, ನಮ್ಮ ರಾಜ್ಯದಲ್ಲಿರುವ ಕ್ಷಾಮದ ಪರಿಸ್ಥಿತಿಯ ಗಂಭೀರತೆಯನ್ನು ಯೋಚಿಸಿದರೆ ತುಂಬಾ ಭೀಕರವಾಗಿ ಕಾಣುತ್ತದೆ. ಎರಡು ಕೋಟಿ, ಹತ್ತು ಲಕ್ಷ ಮೂವತ್ತೆರಡು ಸಾವಿರ ಜನ ತೊಂದರೆಗೀಡಾದವರ ಪೈಕಿ. ಎಂಟು ಲಕ್ಷ ಜನಕ್ಕೆ ಮಾತ್ರ ಕೆಲಸವನ್ನು ಕೊಟ್ಟಿದ್ದೇವೆ ಎಂದು ಹೇಳಿದರೆ ಉಳಿದವರ ಪಾಡು ಏನು ಎಂದು ಯೋಚಿಸಬೇಕು. ನಿಜವಾಗಿಯೂ ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಈ ಉದ್ಯೋಗ ಒದಗಿಸುವ ಕಾರ್ಯಕ್ರಮವನ್ನು ಮಾಡಬೇಕಾಗಿತ್ತು.

೩-೩೦ ಪಿ.ಎಂ.

ಒಂದು ದಿವಸಕ್ಕೆ ೮ ಲಕ್ಷ ಜನಕ್ಕೆ ನಾವು ಉದ್ಯೋಗವನ್ನು ಕೊಡುತ್ತಿಲ್ಲ. ಸರ್ಕಾರದವರು ಮಾತ್ರ ೮ ಲಕ್ಷ ಜನಕ್ಕೆ ಉದ್ಯೋಗವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಎಲ್ಲಾ ಕಡೆ ಆ ರೀತಿ ಕೆಲಸ ನಡೆಯುತ್ತಿಲ್ಲ. ಶ್ರೀಮಾನ್ ಮಲ್ಲಿಕಾರ್ಜುನ ಖಾರ್ಗೆಯವರ ಅಧ್ಯಕ್ಷತೆಯಲ್ಲಿ ಹೋಗಿದ್ದ ಕಮಿಟಿಯವರೂ ಸಹ ಸಲಹೆ ಮಾಡಿದ್ದಾರೆ. ಅದೇನೆಂದರೆ ಒಂದು ದಿವಸಕ್ಕೆ ೧೫ ಲಕ್ಷ ಜನರಿಗೆ ಉದ್ಯೋಗವನ್ನು ಒದಗಿಸಿಕೊಡಬೇಕೆಂದು. ಮತ್ತು ಒಂದು ದಿವಸಕ್ಕೆ ಒಂದೆರಡು ಕೋಟಿ ರೂಪಾಯಿಗಳ ಹಣವನ್ನು ಸಹಕೊಡಬೇಕೆಂದು ಹೇಳಿದರು. ಮತ್ತು ಈ ಬರಗಾಲ ಪರಿಹಾರ ಕಾಮಗಾರಿಗಳನ್ನು ಜೂನ್ ತಿಂಗಳವರೆವಿಗೂ ಸಹ ಮುಂದುವರಿಸಿಕೊಂಡು ಹೋಗಬೇಕೆಂದು ಸಹ ಸಲಹೆ ಮಾಡಿದ್ದರು, ಆ ಕೆಲಸ ಕೂಡ ಇವೊತ್ತು ಆಗಿಲ್ಲ. ಯಾವುದಾದರೊಂದು ಜಿಲ್ಲೆಯಲ್ಲಿ ಬರಗಾಲ ಪರಿಹಾರ ಕಾಮಗಾರಿ ಕೆಲಸವನ್ನು ತೆಗೆದುಕೊಳ್ಳಬೇಕಾದರೂ ಸರ್ಕಾರದವರು ಆದೇಶ ಕೊಡಬೇಕೆಂದು ಅಲ್ಲಿನ ಅಧಿಕಾರಿಗಳು ಹೇಳುತ್ತಾರೆ. ಮಾನ್ಯ ಕಂದಾಯ ಸಚಿವರಾದಂಥ ಬೊಮ್ಮಾಯಿಯವರು ಹೇಳುತ್ತಾರೆ ಪ್ರತಿಯೊಂದು ಜಿಲ್ಲೆಗೂ ೪೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು. ಆದರೆ ಅಲ್ಲಿನ ಡಿ.ಟಿ.ಓ. ಒಂದು ಲಕ್ಷ ರೂಪಾಯಿಗಳನ್ನು ಮಾತ್ರ ರಿಲೀಜ್ ಮಾಡಿದ್ದಾರೆ ಎಂದು ಹೇಳುತ್ತಾರೆ. ಹಣ ಇದ್ದರೂ ಖರ್ಚು ಮಾಡುವುದಕ್ಕೆ ಅಧಿಕಾರಿಗಳು ಅಡ್ಡ ಬರುತ್ತಾರೆ. ಹಣವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೋ ಇಲ್ಲವೋ ಅದು ನಮಗೆ ಗೊತ್ತಿಲ್ಲ. ಕಂದಾಯ ಹಾಕುವಾಗ ಬಡವರ ಮೇಲೆ ಜಾಸ್ತಿ ಹಾಕುತ್ತಾರೆ. ಸಾಹುಕಾರರು ಈ ಕಂದಾಯವನ್ನು ಕೊಡದೆ ತಪ್ಪಿಸಿಕೊಳ್ಳುತ್ತಾರೆ. ಇಂತಹ ಪರಿಸ್ಥಿತಿ ನಮಗೆ ಬಂದಿದೆ. ಬರಗಾಲ ನಮಗೆ ದೈವ ಕೊಟ್ಟಿರುವ ಶಾಪ ಎಂದು ಕೆಲವರು ಹೇಳುತ್ತಾರೆ. ಆದರೆ ನಮಗೆ ದೇವರು ಬರಗಾಲ ಕೊಟ್ಟಿಲ್ಲ. ಮೊದಲಿನಿಂದಲೂ ನಾವು ಸರಿಯಾದ ಪ್ಲಾನ್‌ಗಳನ್ನು ಹಾಕಿಕೊಂಡು ಇದಕ್ಕೆ ಸೂಕ್ತ ವ್ಯವಸ್ಥೆ ಮಾಡಿಕೊಳ್ಳಬೇಕಾಗಿತ್ತು. ಪ್ರತಿಯೊಂದು ಜಿಲ್ಲೆಯನ್ನು ಗಂಗಾ ಜಿಲ್ಲೆಯನ್ನಾಗಿ ಮಾಡಿ ಎಲ್ಲಾ ಕಡೆ ನೀರಿನ ವ್ಯವಸ್ಥೆ ಮಾಡುವಂತಹ ಸಂದರ್ಭದಲ್ಲಿ ಬರಗಾಲ ಏತಕ್ಕೆ ಬರುತ್ತದೆ? ನಮ್ಮ ಕರ್ನಾಟಕ

ರಾಜ್ಯಕ್ಕೆ ಸ್ವಾತಂತ್ರ್ಯ ಬಂದು ಸುಮಾರು ೩೮-೩೯ ವರ್ಷಗಳು ಆದವು. ೧೯೫೭ನೇ ಇಸವಿಯಲ್ಲಿ ಕೋಲಾರ ಜಿಲ್ಲೆಯಲ್ಲಿ ತೀವ್ರವಾದಂಥ ಬರಗಾಲ ಪರಿಸ್ಥಿತಿ ಬಂತು. ಆಗ ನಾನು ವಿದ್ಯಾರ್ಥಿಯಾಗಿದ್ದೆ. ಕೆಲವು ಜನ ರೈತರ ಜೊತೆಗೂಡಿ ಸರ್ಕಾರದ ಜೊತೆಯಲ್ಲಿ ಈ ಬರಗಾಲ ಪರಿಸ್ಥಿತಿಯ ನಿವಾರಣೆ ಬಗ್ಗೆ ಸಲಹೆಗಳನ್ನು ಮಾಡಿದ್ದೆ. ಆ ಸಲಹೆಯಾದರೂ ಏನೇಂದರೆ ನಮ್ಮ ಜಿಲ್ಲೆಯಲ್ಲಿ ಅರ್ಧ ಸಬ್‌ಸಿಡಿ ಕೊಡಿ. ಎಲ್ಲಾ ಕಡೆ ಬಾವಿಗಳನ್ನು ಅಗೆಸುತ್ತೇವೆಂದು. ಆದೇ ರೀತಿಯಲ್ಲಿ ಸರ್ಕಾರ ಒಪ್ಪಿತು, ಆಗ ಸುಮಾರು ೫೦ ಸಾವಿರ ಬಾವಿಗಳನ್ನು ನಾವು ತೋಡಿದೆವು. ಆಗ ಜಿಲ್ಲೆಯಲ್ಲಿ ಕ್ಷಾಮಪರಿಸ್ಥಿತಿ ಸ್ವಲ್ಪ ಮಟ್ಟಿಗೆ ನಿವಾರಣೆಯಾಯಿತು. ಇವೊತ್ತು ಕೋಲಾರ ಜಿಲ್ಲೆಯಲ್ಲಿ ಸುಮಾರು ೫೦ ಸಾವಿರ ಪಂಪ್‌ಸೆಟ್ಸ್ ಇವೆ. ಆದೇ ರೀತಿಯಲ್ಲಿ ಮಾನ್ಯ ಕಂದಾಯ ಸಚಿವರು ಕೂಡ ಸಬ್‌ಸಿಡಿಯನ್ನು ಕೊಟ್ಟು ಕಮ್ಯುನಿಟಿ ಇರಿಗೇಷನ್ಸ್ ವೆಲ್ಸ್ ಮಾಡಿ ಕೊಡುವ ಬಗ್ಗೆ ಯೋಚನೆ ಮಾಡಿದರೆ ಒಳ್ಳೆಯದು. ದುರಾದೃಷ್ಟವಶಾತ್ ನಮ್ಮ ಜಿಲ್ಲೆಗೆ ಒಬ್ಬ ಜಿಯಾಲಜಿಕಲ್ ಇನ್ಸ್‌ಪೆಕ್ಟರ್ ಬಂದು ಕೋಲಾರ, ತುಮಕೂರು ಮತ್ತು ಬೆಂಗಳೂರು ಜಿಲ್ಲೆಯ ಕೆಲವು ಭಾಗಗಳು ಡಾರ್ಕ್ ಮತ್ತು ಗ್ರೇ ನೀರು ಬರುವುದಿಲ್ಲ ಎಂದು ನೋಟಿಫೈ ಮಾಡಿಕೊಂಡು ಹೋಗಿದ್ದಾರೆ, ಇದು ಯಾವ ರೀತಿಯಲ್ಲಿ ಮಾಡಿದರೂ ನನಗಂತೂ ಗೊತ್ತಿಲ್ಲ. ಸ್ವಾಮಿ ನಮ್ಮ ಜಿಲ್ಲೆಯಲ್ಲಿ ಇವೊತ್ತಿಗೂ ಸಹ ಬಾವಿಗಳನ್ನು ಮತ್ತು ಬೋರ್‌ವೆಲ್ಸ್‌ಗಳನ್ನು ತೋಡಿಸುತ್ತಿದ್ದಾರೆ. ನೀರು ಬರುತ್ತಿದೆ. ಕೆಲವೊಂದು ಬೋರ್‌ವೆಲ್ಸ್‌ಗಳಲ್ಲಿ ಸುಮಾರು ೭-೮ ಸಾವಿರ ಗ್ಯಾಲನ್ ನೀರು ಸಿಗುತ್ತಿದೆ. ಆದರೆ ಆ ಮಹಾಮಹಾಭಾವನಿಗೆ ನೀರು ಏಕೆ ಕಾಣಿಸಲಿಲ್ಲವೋ ಏನೋ, ಆತನಿಗೆ ಬೇರೆ ಜಲವೇನಾದರೂ ಕಾಣಿಸಿರಬೇಕು. ಇದರ ಬಗ್ಗೆ ನಾನು ಮತ್ತು ಜನತಾ ಪಕ್ಷದ ಶಾಸಕರು ಕೂಡ ಮಾನ್ಯ ದೇಶಮುಖರವರನ್ನು ಸಂಪರ್ಕಿಸಿ ಈ ಬಗ್ಗೆ ಈಗಾಗಲೇ ಹೊರಡಿಸಿರುವ ಆಜ್ಞೆಯನ್ನು ಸಡಿಲ ಮಾಡಬೇಕೆಂದು ಸಹ ಕೇಳಿಕೊಂಡಿದ್ದೇವೆ. ಈ ಆಜ್ಞೆಯನ್ನು ಹೊರಡಿಸಿರುವುದರಿಂದ ರೈತರಿಗೆ ಬಾವಿಗಳನ್ನು ತೋಡಲು ಮತ್ತು ಬೋರ್‌ವೆಲ್‌ಗಳನ್ನು ಹಾಕಿಸಿಕೊಳ್ಳಲು ಬ್ಯಾಂಕ್‌ಗಳಲ್ಲಿ ಲೋನ್‌ಗಳು ಸಿಗುತ್ತಿಲ್ಲ. ಇದರಿಂದ ಜಿಲ್ಲೆಯಲ್ಲಿ ಇನ್ನಷ್ಟು ಬರ ಜಾಸ್ತಿಯಾಗಿದೆ. ಆದ್ದರಿಂದ ಮಾನ್ಯ ಬೊಮ್ಮಾಯಿಯವರು ಸಹ ಈ ಬಗ್ಗೆ ಯೋಚನೆ ಮಾಡಿ ಆ ಆಜ್ಞೆಯನ್ನು ರದ್ದು ಮಾಡಬೇಕು, ಸಾಮಾನ್ಯ ಜನರಿಗೆ ನ್ಯಾಯ ಸಿಗುವಂತೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆ ಮಹಾಶಯನು ಈ ಮೂರು ಜಿಲ್ಲೆಗಳಿಗೂ ಒಂದು ಶಾಪವನ್ನು ಹಾಕಿಹೋದ. ಇದರ ಬಗ್ಗೆ ತಾವು ಮತ್ತೊಂದು ಸರ್ವೆ ಮಾಡಿಸಬೇಕು. ಇನ್ನು ಬರಗಾಲ ಪರಿಸ್ಥಿತಿಯ ನಿವಾರಣೆ ಸಲುವಾಗಿ ಎಷ್ಟು ಕೆಲಸ ನಡೆದಿದೆ ಎಂದು ನಾವು ನೋಡುವುದಾದರೆ ನಾವು ಲೆಕ್ಕಾಚಾರ ಹಾಕಿಕೊಂಡರೀತಿಯಲ್ಲಿ ಕೆಲಸ ಕಾರ್ಯಗಳು ಇವೊತ್ತು ರಾಜ್ಯದಲ್ಲಿ ನಡೆಯುತ್ತಿಲ್ಲ. ಮಾನ್ಯ ಸಚಿವರು ಕೊಟ್ಟಿರತಕ್ಕಂಥ ವರದಿಯಲ್ಲಿ ಹೇಳಿದ್ದಾರೆ ಹೊಸ ಕೆರೆಗಳು ೧೬೭, ಹೂಳು ಎತ್ತುವ ಕೆಲಸಗಳು ೧೦೪೧ ಎಂದು ಇದರಲ್ಲಿ ಹೂಳು ಎತ್ತುವ ಕೆಲಸ ಹೋಗಿ ಹಣ ಎತ್ತುವ ಕೆಲಸವನ್ನು ಅಧಿಕಾರಿಗಳು ಮಾಡುತ್ತಿದ್ದಾರೆ. ಈ ಹಣ ಎತ್ತುವ ಕೆಲಸವನ್ನು ವಿಲೇಜ್ ಲೆವೆಲ್‌ನ ಜನ ಮತ್ತು ಜೂನಿಯರ್ ಎಂಜಿನೀಯರ್ ಮಾಡುತ್ತಾರೆ. ಒಂದು ಕಡೆ ಇಂತಹ ಹೂಳು ಎತ್ತುವ ಕೆಲಸಕ್ಕೆ ೫ ಜನ ಹೋಗಿದ್ದರೆ ೨೫ ಜನ ಎಂದು ಪುಸ್ತಕದಲ್ಲಿ ಬರೆದಿಟ್ಟುಕೊಂಡು, ಒಬ್ಬರಿಗೆ ಒಂದು ದಿವಸಕ್ಕೆ ೫ ರೂಪಾಯಿಗಳ ಕೂಲಿ ಕೊಟ್ಟು ೭-೮೦ ಪೈಸೆ ಕೊಡುತ್ತೇವೆಂದು ಕೆಲಸಕ್ಕೆ ಹೋಗುವ ಮುಂಚಿತವಾಗಿಯೇ ಆತನಿಗೆ ಅನ್ಯಾಯಿಪಾತ ಮಾಡಿಸಿರುತ್ತಾರೆ. ಈ ಕೆಲಸಗಳನ್ನು ಪರಿಶೀಲನೆ ಮಾಡಲು ನಾನು ಮತ್ತು ಮಾನ್ಯ ಮಂತ್ರಿಗಳಾದಂಥ ಬೈರೇಗೌಡರು ವಿಜಿಟ್ ಕೊಟ್ಟಾಗ ಎರಡು ಮೂರು ಕಡೆ ಹೋಗಿ ಅಲ್ಲಿ ಕೆಲಸ ಮಾಡುತ್ತಿದ್ದ ಜನರನ್ನು ಕೇಳಿದಾಗ ಅವರು ೭-೮೦ ಪೈಸೆ ಕೊಡುತ್ತಾರೆಂದು ನಮಗೆ ಹೇಳಿದರು. ಎಲ್ಲಿ ಯಾರನ್ನು ಕೇಳಿದರೂ ಒಂದೇ ಉತ್ತರ ಈ ಕೆಲಸ ಎಲ್ಲಿಯೂ ಸರಿಯಾಗಿ ನಡೆದಿಲ್ಲ. ನಿಜವಾಗಿಯೂ ಕೂಡ ಇವು ಶಾಶ್ವತ ಪರಿಹಾರ ಕಾಮಗಾರಿಗಳಲ್ಲ. ಈಗ ಎಲ್ಲ ಕಡೆಯಲ್ಲಿಯೂ ಫೀಡರ್ ಚಾನಲ್ಸ್, ಕೆಲಸ ಚೆನ್ನಾಗಿ ಮಾಡಿ, ಹಿಂದೆ ಈ ರಿಲೀಫ್ ಕೆಲಸಗಳನ್ನು ಸ್ಥಳೀಯ ಶಾಸಕರನ್ನು ಕೇಳಿ ತೆಗೆದುಕೊಳ್ಳಬೇಕೆಂದು ಮಾಡಿದ್ದರು. ಆದರೆ ಈಗ ಮಾನ್ಯ ಬೊಮ್ಮಾಯಿಯವರು ಒಂದು ಆರ್ಡರ್ ಅನ್ನು ಹೊರಡಿಸಿ ಮಾಜಿ ಶಾಸಕರಿದ್ದರೂ ಸಹ ಅವರನ್ನು ಸೇರಿಸಿಕೊಂಡು ತಾಲ್ಲೂಕು ಮಟ್ಟದಲ್ಲಿ ೫-೬-೧೦ ಕೆಲಸಗಳನ್ನು ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಆದರೂ ಕೂಡ ೫೦ ಪರ್ಸೆಂಟ್ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಕಾಮಗಾರಿ ಕೆಲಸಗಳಿಗೆ ಕೊಟ್ಟಿರುವ ಹಣ ಪೂರ್ತಿಯಾಗಿ ಪೋಲಾಗುತ್ತಿದೆ. ಇದರ ಬಗ್ಗೆ ಕಂಟ್ರೋಲ್ ಮಾಡಬೇಕು. ಇದರಲ್ಲಿ ಯಾವುದೇ ರಾಜಕೀಯ ಮಾಡಬಾರದು. ಆದ್ದರಿಂದ ಎಲ್ಲಾ ಪಕ್ಷದವರನ್ನು ಸೇರಿಸಿ ಒಂದು ಕಮಿಟಿ

ಮಾಡಿ ಅವರು ಸೂಪರ್-ವೈಜ್ ಮಾಡಬೇಕು, ಮತ್ತು ಕೌಂಟರ್ ಚೆಕ್ ಮಾಡಬೇಕು. ಆಗ ಕೆಲಸ ಸರಿಯಾಗಿ ನಡೆಯಬಹುದು. ಆಗ ನಿಜವಾಗಲೂ ಅನುಕೂಲವಾಗುತ್ತದೆ. ಇನ್ನು ಆಹಾರಪದಾರ್ಥಗಳ ಬಗ್ಗೆ ಮಾನ್ಯ ಸದಸ್ಯರಾದ ಭೂಪತಿಯವರು ಬಹಳ ವಿಷದವಾಗಿ ಹೇಳಿದರು. ರಾಜ್ಯದಲ್ಲಿ ಹಸಿರು ಕಾರ್ಡ್‌ಗಳನ್ನು ಕೊಡುವುದರಲ್ಲಿ ೫೦ ಪರ್ಸೆಂಟ್ ಕೂಡ ಕವರ್ ಆಗಿಲ್ಲ. ಇದರ ಬಗ್ಗೆ ನಮ್ಮ ಮಾನ್ಯ ಆಹಾರ ಸಚಿವರು ಇತ್ತೀಚೆಗೆ ಒಂದು ಆರ್ಡರ್ ಹೊರಡಿಸಿದ್ದಾರೆ.

ಶ್ರೀ ಪಿ. ಬಸವಣ್ಣಪ್ಪ.—ಈ ಹಸಿರು ಕಾರ್ಡ್‌ಗಳನ್ನು ಹಂಚಿಕೆ ಮಾಡುವುದರಲ್ಲಿ ಅಲ್ಪಸ್ವಲ್ಪ ಲೋಪದೋಷಗಳು ಆಗಿರಬಹುದು. ಆದರೆ ಆ ಲೋಪದೋಷಗಳನ್ನು ಸರಿಪಡಿಸಲು ಸರಿಯಾದ ಕಾರ್ಯಕ್ರಮವನ್ನು ಈಗ ತೆಗೆದುಕೊಂಡಿದ್ದೇವೆ. ಯಾರು ಈ ಹಸಿರು ಕಾರ್ಡ್‌ಗೆ ಅರ್ಹರು, ಯಾರು ಈ ಹಸಿರು ಕಾರ್ಡ್‌ಗೆ ಅನರ್ಹರು ಎಂಬುದನ್ನು ಫೆಬ್ರವರಿ ತಿಂಗಳೊಳಗಾಗಿ ತೀರ್ಮಾನ ಮಾಡಿ ಸರಿ ಮಾಡುತ್ತೇವೆ, ಇದರಲ್ಲಿ ಏನಾದರೂ ಲೋಪದೋಷ ಕಂಡು ಬಂದರೆ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರರು ಮತ್ತು ಬಿ.ಡಿ.ಓ.ಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಮಾಡಿದ್ದೇವೆ. ಆದ್ದರಿಂದ ಮುಂದೆ ಯಾವ ತೊಂದರೆಯೂ ಆಗುವುದಿಲ್ಲ.

ಈ ಹಸಿರು ಕಾರ್ಡುಗಳ ಸಮಸ್ಯೆ ಬಹಳ ತೀವ್ರವಾದ ಸಮಸ್ಯೆ. ಇದನ್ನು ಕೊಡುವುದು ಬಡವರಿಗೆ. ಇದನ್ನು ಕೊಡುವಾಗ ಏನಾಗಿದೆ ಎಂದರೆ ಐ.ಆರ್.ಡಿ.ಪಿ. ಸ್ಕೀಮ್‌ನಲ್ಲಿ ಯಾರು ಫಲಾನುಭವಿಗಳು ಇದ್ದರು ಅವರಿಗೆ ಮಾತ್ರ ಇದು ಸಿಕ್ಕಿದೆ. ಇದನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಗೂ ಹೇಳಿದ್ದೆ. ಈ ಐ.ಆರ್.ಡಿ.ಪಿ. ಸ್ಕೀಮ್‌ನಲ್ಲಿ ಫಲಾನುಭವಿಗಳನ್ನು ಗುರುತು ಮಾಡುವಾಗ ಬ್ಯಾಂಕ್ ಸ್ಟಾಫ್ ಹೋಗಿದ್ದರು. ಅವರು ಸಾಲ ಮರುಪಾವತಿ ಮಾಡುವ ಶಕ್ತಿ ಯಾರಿಗೆ ಇದೆ ಅವರನ್ನು ಹಾಗೂ ವಿಲೇಜ್ ಅಕೌಂಟೆಂಟ್ ಎರಡನೂರು, ಮೂರುನೂರು ರೂಪಾಯಿಗಳ ಲಂಚ ತೆಗೆದುಕೊಂಡು ಕೊಟ್ಟಿರುವ ಹೆಸರುಗಳನ್ನು ಸೇರಿಸಿಕೊಂಡು ಅವರಿಗೆ ಮಾತ್ರ ಫಲಾನುಭವಿಗಳು ಎಂದು ಹಸಿರು ಕಾರ್ಡು ಕೊಟ್ಟಿರುತ್ತಾರೆ. ಯಾವ ಬಡವನನ್ನೂ ಇವರು ಹೋಗಿ ಅಪ್ರೋಚ್ ಮಾಡಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ವೆಂಕಟರಾಮಯ್ಯನವರು ಹೇಳಿದ್ದರಲ್ಲಿ ಸತ್ಯಾಂಶ ಇದೆ ಎಂದು ನಾನೂ ಒಪ್ಪಿಕೊಳ್ಳುತ್ತೇನೆ. ಮೊದಲನೆಯದಾಗಿ ಐ.ಆರ್.ಡಿ.ಪಿ. ಫಲಾನುಭವಿಗಳು ಯಾರು ಇದ್ದಾರೆ ಅವರಿಗೆ ಹಸಿರು ಕಾರ್ಡ್ ನೀಡಿದೆ. ಅದಕ್ಕೆ ಒಂದು ಆಧಾರ ಬೇಕು ಅದಕ್ಕೋಸ್ಕರ ಈ ರೀತಿ ಮಾಡಿದೆ. ನಮಗೆ ಎಲ್ಲಾ ಕಡೆಗಳಿಂದಲೂ ದೂರು ಬಂತು, ಶಾಸಕರಿಂದಲೂ ದೂರು ಬಂತು, ಬೇರೆ ಜನರಿಂದಲೂ ದೂರು ಬಂತು. ಮುಖ್ಯವಾಗಿ ಇದರಲ್ಲಿ ಯಾರ ಹೆಸರು ಸೇರಬೇಕಾಗಿತ್ತೋ ಅವರ ಹೆಸರು ಬಿಟ್ಟು ಹೋಗಿದೆ, ಯಾರು ಲ್ಯಾಂಡ್‌ಲೆಸ್ ಲೇಬರರ್ಸ್ ಇದ್ದಾರೆ ಅವರ ಹೆಸರು ತಪ್ಪಿಹೋಗಿದೆ, ಎಂಬ ದೂರು ಬಂತು. ನಾವು ಒಂದು ನಿರ್ಣಯ ಮಾಡಿದ್ದೇವೆ. ಅದೇನೆಂದರೆ, ಅನ್‌ಡಿಸರ್ವಡ್ ಪೀಪಲ್ ಹೆಸರು ಆಕಸ್ಮಾತ್ ತಪ್ಪಿ ಇದರಲ್ಲಿ ಸೇರಿದ್ದರೆ ಪರವಾಗಿಲ್ಲ, ಆದರೆ ಯಾರು ಡಿಸರ್ವಿಂಗ್ ಇರುತ್ತಾರೆ ಅವರ ಹೆಸರು ಮಾತ್ರ ಇದರಲ್ಲಿ ತಪ್ಪಲೇ ಕೂಡದು ಎಂಬ ಆದೇಶ ಕೊಟ್ಟಿದ್ದೇವೆ. ಪ್ರತಿಯೊಬ್ಬ ಲ್ಯಾಂಡ್‌ಲೆಸ್ ಲೇಬರರ್ ಕೂಡಾ ಇದರಲ್ಲಿ ಅಂತರ್ಗತವಾಗುತ್ತಾರೆ. ಅವರು ಈ ಸ್ಕೀಮ್ ಒಳಗೆ ಬರುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮುಖ್ಯಮಂತ್ರಿಗಳು ಈ ಆಶ್ವಾಸನೆಯನ್ನು ಕೊಟ್ಟಿದ್ದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಇದು ಬಹಳ ಸೀರಿಯಸ್ ಪ್ರಾಬ್ಲಂ. ನಾವು ಬಡವರನ್ನು ಎರಡು ಭಾಗ ಮಾಡಿ ಇಟ್ಟುಕೊಂಡಿದ್ದೇವೆ. ಎಲ್ಲೆಲ್ಲಿ ಹೋದರೂ ಬಡವರು ನಮ್ಮ ಮೇಲೆ ಬೀಳುವ ಹಾಗೆ ಆಗಿದೆ. ಇದನ್ನು ಬೇಗ ಪರಿಹರಿಸಬೇಕು. ಆಹಾರ ಸಮಸ್ಯೆ ಬಹಳ ತೀವ್ರತರವಾದ ಸಮಸ್ಯೆಯಾಗಿದೆ. ಈ ಬರಗಾಲದಲ್ಲಿ ಆಹಾರ ಸಮಸ್ಯೆ ಇನ್ನೂ ಕಠಿಣವಾಗಿ ಬಹಳ ತೊಂದರೆಯಾಗುತ್ತದೆ. ನಮ್ಮ ಕೇಂದ್ರ ಸರಕಾರದ ಆಹಾರ ಮಂತ್ರಿಗಳೊಬ್ಬರು ಇತ್ತೀಚೆಗೆ, ನಮ್ಮ ಗೋಡೌನ್ ಫೆಸಲಿಟೀಸ್ ಸರಿ ಇಲ್ಲದೆ ಇರುವುದರಿಂದ ೩೦–೪೦ ಮಿಲಿಯನ್ ಟನ್ ಆಹಾರಧಾನ್ಯಗಳು ಹಾಳಾಗುತ್ತಿದೆ ಎಂದು ಹೇಳಿದ್ದಾರೆ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ನಾವಿರುವುದರಿಂದ, ನಮಗಾದರೂ ಸಹ ಈ ಆಹಾರಧಾನ್ಯಗಳನ್ನು ಕಳುಹಿಸಿಕೊಟ್ಟರೆ ಒಳ್ಳೆಯದು. ಇನ್ನು ನಮ್ಮಲ್ಲಿ ಫೇರ್‌ಪ್ರೈಸ್ ಡಿಪೋಗಳು ಬಹಳ ಕಡಿಮೆ ಇವೆ. ಈ ಬರಗಾಲದ ಸಮಯದಲ್ಲಿ ಇವುಗಳನ್ನು ಜಾಸ್ತಿ ಮಾಡಬೇಕೆಂದು ನನ್ನ ಪ್ರಾರ್ಥನೆ. ಈಗ ಪ್ರತಿ ಐದು ಕಿಲೋಮೀಟರ್‌ಗೆ ಒಂದರಂತೆ ಫೇರ್ ಪ್ರೈ

ಡಿಪೋ ಮಾಡಿದ್ದೀರಿ. ಈ ಬರಗಾಲದ ಪರಿಸ್ಥಿತಿಯಲ್ಲಾದರೂ ಈ ಫೇರ್ ಪ್ರೈಸ್ ಡಿಪೋಗಳನ್ನು ಈಗಿರುವುದಕ್ಕಿಂತ ಎರಡು ಮೂರರಷ್ಟಾದರೂ ಜಾಸ್ತಿ ಮಾಡಬೇಕು. ಜೊತೆಗೆ ತಾವು ಕೊಡುತ್ತಿರುವ ೧೦ ಕೆ.ಜಿ. ಆಹಾರಧಾನ್ಯದ ಲಿಮಿಟ್ ಏನಿದೆ ಇದನ್ನು ಜಾಸ್ತಿ ಮಾಡಬೇಕು. ಸೆಂಟ್ರಲ್ ಗೌರ್ನಮೆಂಟ್‌ನವರು ನಮ್ಮಲ್ಲಿ ಆಹಾರಧಾನ್ಯ ಬೇಕಾದಷ್ಟು ಇದೆ ಎಂದು ಓಪನ್ ಆಗಿ ಹೇಳಿದ್ದಾರೆ. ಅದನ್ನು ತಂದು ನಮ್ಮ ಜನತೆಗೆ ಹಂಚುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ದಯವಿಟ್ಟು ಈ ವ್ಯವಸ್ಥೆಯನ್ನು ಸರಿಪಡಿಸಬೇಕು. ಇಲ್ಲದಿದ್ದರೆ ತೊಂದರೆಯಾಗುತ್ತದೆ. ಇನ್ನು ಜಾನುವಾರುಗಳ ಬಗ್ಗೆ ಹೇಳುವಾಗ ನಗಬೇಕೋ ಅಳಬೇಕೋ ಗೊತ್ತಾಗುತ್ತಿಲ್ಲ. ಸರಕಾರದವರು ಹೇಳುವುದು ಒಂದು ಕೋಟಿ ಜಾನುವಾರುಗಳಿಗೆ ತೊಂದರೆಯಾಗಿದೆ ಎಂದು, ಇವರು ೫೯ ಗೋಶಾಲೆಗಳನ್ನು ಮಾಡಿದ್ದೇವೆ ಎಂದು ಲೆಕ್ಕ ಕೊಟ್ಟಿದ್ದಾರೆ. ಈ ೫೯ ಗೋಶಾಲೆಗಳಲ್ಲಿ ೧೨,೫೦೦ ಗೋವುಗಳಿಗೆ ಆಶ್ರಯ ಕೊಡಲಾಗಿದೆ. ಇದು ಕೇವಲ ೦.೧೬ ಪರ್ಸೆಂಟ್ ಆಗುತ್ತದೆ. ಇದರಿಂದ ನೀವು ಎಷ್ಟು ಗೋಶಾಲೆಗಳನ್ನು ಪ್ರಾರಂಭ ಮಾಡಿದ್ದೀರಿ, ಇನ್ನೂ ಎಷ್ಟು ಮಾಡಬೇಕಾಗುತ್ತದೆ ಎಂಬುದನ್ನು ನೋಡಬಹುದು. ಮಾನ್ಯ ಮಂತ್ರಿಗಳು ಇದರ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕು. ಈ ಸಮಸ್ಯೆಯ ಒಂದು ಫ್ರಿಂಜ್‌ನ್ನೂ ಸಹ ಇವರು ಟಚ್ ಮಾಡಿಲ್ಲ. ಈ ಗೋಶಾಲೆಗಳ ವಿಚಾರ ನನಗೂ ಕೂಡಾ ಗೊತ್ತಾಯಿತು. ನಮ್ಮ ಕೋಲಾರ ಜಿಲ್ಲೆಯಲ್ಲಿರುವ ಬಾಗೆಪಲ್ಲಿ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಇವರು ಒಂದು ಗೋಶಾಲೆ ಮಾಡಿದರು. ಅಲ್ಲಿಗೆ ಜಾನುವಾರುಗಳೂ ಬಂದವು. ಆದರೆ ಅಲ್ಲಿ ನೀರು ಮುಗಿದು ಹೋಯಿತು. ಈಗ ಅಲ್ಲಿಂದ ಆ ಗೋವುಗಳನ್ನು ಬೇರೆ ಕಡೆಗೆ ಶಿಫ್ಟ್ ಮಾಡುತ್ತಾರೆ ಎಂದು ತಿಳಿದು ಬಂದಿದೆ. ಇದು ಒಂದು ತಮಾಷೆ ಆಗಿ ಹೋಗಿದೆ. ಇದನ್ನು ಸೀರಿಯಸ್ ಆಗಿ ತಾವು ತೆಗೆದುಕೊಳ್ಳಬೇಕು. ಇನ್ನು ಮುಂದೆ ಭಾರೀ ಬರಗಾಲದ ಬವಣೆಯನ್ನು ಎದುರಿಸಬೇಕಾಗಿದೆ. ಇನ್ನು ಮೂರು ತಿಂಗಳಾದಮೇಲೆ ಅಂದರೆ ಉಗಾದಿ ಕಳೆದ ಮೇಲೆ ಜನಗಳಿಗೆ ಹಾಗೂ ಜಾನುವಾರುಗಳಿಗೆ ಭಾರೀ ತೊಂದರೆಯಾಗುತ್ತದೆ. ಈ ಬಗ್ಗೆ ಈಗಿನಿಂದಲೇ ಸೀರಿಯಸ್ ಆಗಿ ಕೆಲಸ ಮಾಡಿದರೆ ಒಳ್ಳೆಯದು. ವಾರ್ ಫುಟಿಂಗ್‌ನಲ್ಲಿ ಕೆಲಸ ಮಾಡುತ್ತೇವೆಂದು ಇವರು ಹೇಳಿದ್ದಾರೆ, ಆ ರೀತಿ ಮಾಡಿ ಭಾರೀ ಬರದಿಂದ, ಈ ಒಂದು ಕಷ್ಟ ಪರಿಸ್ಥಿತಿಯಿಂದ, ಜನಜಾನುವಾರುಗಳನ್ನು ಪಾರು ಮಾಡಬೇಕೆಂದು ನಾನು ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಲ್ಲದಿದ್ದರೆ ಗೋವುಗಳೂ ಹೋಗುತ್ತವೆ, ಹಾಗೂ ಜನಗಳೂ ವಲಸೆ ಹೋಗುತ್ತಾರೆ. ಈಗಾಗಲೇ ಅನೇಕ ಜನ ವಲಸೆ ಹೋಗಿದ್ದಾರೆ. ಕೃಷಿ ಕಾರ್ಮಿಕರು ವಲಸೆ ಹೋಗಿದ್ದಾರೆ. ಮಧ್ಯಮವರ್ಗದವರೂ ವಲಸೆಹೋಗುತ್ತಾರೆ. ನಾನು ಮಲಪಲ್ಲಿ ಎಂಬ ಊರಿನಲ್ಲಿರುವ ಸ್ಕೂಲ್‌ಗೆ ಹೋಗಿದ್ದೆ. ಅಲ್ಲಿರುವ ಮಕ್ಕಳ ಅಟೆಂಡೆನ್ಸ್ ೮೦. ಆದರೆ ಕೇವಲ ೨೫ ಮಕ್ಕಳು ಮಾತ್ರ ಬಂದಿದ್ದರು. ನಾನು ಉಪಾಧ್ಯಾಯರನ್ನು ಕೇಳಿದೆ. ಅದಕ್ಕೆ ಅವರು ಏನು ಮಾಡುವುದು ಸ್ವಾಮಿ, ಎಲ್ಲಾ ಊರು ಬಿಟ್ಟು ಹೋಗಿದ್ದಾರೆ, ಜೊತೆಗೆ ತಮ್ಮ ಮಕ್ಕಳು ಮರಿಗಳನ್ನೂ ಕರೆದುಕೊಂಡು ಹೋಗಿದ್ದಾರೆ, ತಂದೆ ತಾಯಿಗಳು ಹೋದರು ಎಂದು ಜೊತೆಯಲ್ಲಿ ಮಕ್ಕಳೂ ಹೋಗಿದ್ದಾರೆ ಎಂದು ಹೇಳಿದರು. ಈ ರೀತಿ ಜನ ವಲಸೆ ಹೋಗುವುದಕ್ಕೆ ಶುರು ಮಾಡಿದರೆ ಬಹಳ ತೊಂದರೆಯಾಗುತ್ತದೆ. ಕೂಡಲೇ ಇದನ್ನು ಸರಿಪಡಿಸಬೇಕು. ಬಡಬಗ್ಗರನ್ನು ನಡುನೀರಿನಲ್ಲಿ ಕೈಬಿಡಬಾರದು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಇದು ನಮ್ಮ ನಗರಗಳಲ್ಲಿ ಕೂಡಾ ಇವತ್ತು ಹಾಹಾಕಾರ ಉಂಟಾಗಿದೆ. ಇದರ ಬಗ್ಗೆ ನಾನು ಕಳೆದ ಸಲವೇ ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಹೇಳಿದೆ. ಅವರು ಯಾವುದನ್ನೂ ಸಹ ಸೀರಿಯಸ್ ಆಗಿ ತೆಗೆದುಕೊಳ್ಳುವುದಿಲ್ಲ ನಾವು ಮುನಿಸಿಪಾಲಿಟಿಯವರನ್ನು ಕೇಳಿದರೆ, ಅವರು ಜಿಲ್ಲಾಧಿಕಾರಿಗಳನ್ನು ಕೇಳಿ ಎಂದು ಹೇಳುತ್ತಾರೆ, ಜಿಲ್ಲಾಧಿಕಾರಿಗಳನ್ನು ಕೇಳಿದರೆ ಅವರು ಏನು ಮಾಡುವುದು ಒಂದು ಜಿಲ್ಲೆಗೆ ೧೦ ಕೊಳವೆ ಬಾವಿಗಳು ಬಂದಿವೆ, ನಾವು ಒಂದೊಂದು ಕಡೆ ಒಂದೊಂದು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಒಬ್ಬ ಮನುಷ್ಯನಿಗೆ ದಿನಕ್ಕೆ ೨೦ ಗ್ಯಾಲನ್ ಆದರೂ ನೀರು ಬೇಕಾಗುತ್ತದೆ. ಕೋಲಾರ ಜಿಲ್ಲೆಯ ಮುಳುಬಾಗಿಲ್ ಪಟ್ಟಣದಲ್ಲಿ ಎರಡು ದಿವಸಕ್ಕೆ ಒಂದು ಸಲ ಒಂದು ಗಂಟೆ ಮಾತ್ರ ನೀರು ಬಿಡುತ್ತಿದ್ದಾರೆ. ಕೆ.ಜಿ.ಎಫ್ ನಲ್ಲೂ ಸಹ ನೀರಿಗಾಗಿ ಯುದ್ಧ ನಡೆಯುತ್ತಿದೆ, ಹೆಂಗಸರು ನೀರಿಗಾಗಿ ಬಿಂದಿಗೆಗಳನ್ನು ತೆಗೆದುಕೊಂಡು ಹೊಡೆದಾಡಿ, ಕೋರ್ಟ್ ಕಚೇರಿಗಳಿಗೆ ಬರುವ ಪರಿಸ್ಥಿತಿ ಬಂದಿದೆ. ಈಗಲೇ ಇಂತಹ ಪರಿಸ್ಥಿತಿ ಇದ್ದರೆ ಮುಂದೆ ಎಂತಹ ಪರಿಸ್ಥಿತಿ ಬರಬಹುದು ಎಂಬುದನ್ನು ಯೋಚನೆ ಮಾಡಬೇಕು, ಆದುದರಿಂದ ದಯವಿಟ್ಟು ನಗರ ಪ್ರದೇಶಗಳಲ್ಲಿ

ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು. ಹಳ್ಳಿಗಳಲ್ಲಿ ಜಾನುವಾರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಪ್ರಾರಂಭ ಮಾಡಬೇಕು. ಜಾನುವಾರುಗಳಿಗೆ ಕುಡಿಯಲು ನೀರಿಲ್ಲ. ಎಲ್ಲೆಲ್ಲಿ ಕೊಳವೆ ಬಾವಿಗಳು ಇರುತ್ತವೆ, ಅಲ್ಲೆಲ್ಲಾ ಒಂದು ಸಿಮೆಂಟ್ ತೊಟ್ಟಿಯನ್ನು ಮಾಡಿ, ಕೊಳವೆ ಬಾವಿಯಿಂದ ಹರಿದು ಹೋಗುವ ನೀರು ಅಲ್ಲಿ ಶೇಖರವಾಗುವಂತೆ ಮಾಡಬೇಕು. ಇದರಿಂದ ಜಾನುವಾರುಗಳಿಗೆ ಕುಡಿಯುವ ನೀರು ದೊರೆಯುತ್ತದೆ. ಇದನ್ನು ಆಂಧ್ರದಲ್ಲಿ ಮಾಡಿದ್ದಾರೆ. ಇದೇ ರೀತಿ ತುಮಕೂರು ಜಿಲ್ಲೆಯಲ್ಲಿ ಮಾಡಿರುತ್ತೇವೆಂದು ಹೇಳಿದರು. ಇದನ್ನು ಎಲ್ಲಾ ಕಡೆಗಳಲ್ಲೂ ಮಾಡಬೇಕು. ಮಾನ್ಯ ಬೊಮ್ಮಾಯಿಯವರು ಇದರ ಬಗ್ಗೆ ಗಮನಿಸುತ್ತೇವೆಂದು ಹೇಳಿದರು. ಆದರೆ ಯಾರೂ ಇದನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ನಾವು ಪಿ.ಹೆಚ್.ಇ. ಯವರಿಗೆ ಕೇಳಿದರೆ, ಇದು ನಮಗೆ ಸಂಬಂಧ ಇಲ್ಲ, ಇದನ್ನು ಬಿ.ಡಿ.ಓ. ರವರು ಮಾಡುತ್ತಾರೆ ಎಂದು ಹೇಳುತ್ತಾರೆ. ಬಿ.ಡಿ.ಓ ಅವರನ್ನು ಕೇಳಿದರೆ ಅವರು ನಮಗೆ ರಿಟನ್ ಆರ್ಡರ್ ಬಂದಿಲ್ಲ ಎಂದು ಹೇಳುತ್ತಾರೆ. ಇವರಿಗೆ ರಿಟನ್ ಆರ್ಡರ್ ಕೊಡುತ್ತಾರೋ ಇಲ್ಲವೋ ಗೊತ್ತಾಗಲಿಲ್ಲ. ಇದರಿಂದ ಇವರಲ್ಲಿ ಕೋ ಆರ್ಡಿನೇಷನ್ ಇಲ್ಲ ಎಂಬುದು ಗೊತ್ತಾಗುತ್ತದೆ. ಒಬ್ಬರಿಗೊಬ್ಬರಿಗೆ ಮಾತನಾಡಿಕೊಂಡು, ಕೆಲಸ ಮಾಡಿಕೊಂಡು ಹೋಗತಕ್ಕಂಥ ಯೋಜನೆ ಇದು ಒಂದು ೨೦೦ – ೩೦೦ ರೂಪಾಯಿಗಳನ್ನು ಖರ್ಚು ಮಾಡಿದರೆ ಸಾಕು, ಕೊಳವೆ ಬಾವಿಗಳ ಹತ್ತಿರ ಒಂದು ತೊಟ್ಟಿ ಮಾಡುವುದಕ್ಕೆ ಅವಕಾಶ ಉಂಟು. ಇದರ ಬಗ್ಗೆ ಯಾರೂ ಯೋಚನೆ ಮಾಡಿಲ್ಲ. ದಯವಿಟ್ಟು ಇದನ್ನು ಸೀರಿಯಸ್ ಆಗಿ ಯೋಚನೆ ಮಾಡಿ ಅಧಿಕಾರಿಗಳಿಗೆ ಒಂದು ಸರ್ಕ್ಯುಲರ್‌ನ್ನು ಕಳುಹಿಸಿಕೊಡಬೇಕು. ಎಲ್ಲೆಲ್ಲಿ ಕೊಳವೆ ಬಾವಿಗಳು ಇದೆಯೋ ಅಲ್ಲೆಲ್ಲಾ ಒಂದೊಂದು ತೊಟ್ಟಿ ಕಟ್ಟಿ ಜಾನುವಾರುಗಳಿಗೆ ಕುಡಿಯುವ ನೀರಿಗೆ ಅನುಕೂಲ ಮಾಡಿಕೊಡಬೇಕು. ಇದರಿಂದ ಜಾನುವಾರಗಳ ಕುಡಿಯುವ ನೀರಿನ ಸಮಸ್ಯೆ ಸ್ವಲ್ಪವಾದರೂ ಮೇಲಾಗುತ್ತದೆ. ಏತಕ್ಕೆ ಇಂತಹ ಯೋಚನೆ ಮಾಡುವುದಿಲ್ಲ ಎಂದು ಗೊತ್ತಾಗುವುದಿಲ್ಲ. ತಪ್ಪು ಮಾಡಿದ್ದರೆ ತಿದ್ದಿಕೊಳ್ಳುವುದಕ್ಕೆ ಆಗುವುದಿಲ್ಲವೇ. ಗೋವು ಕುಂಟೆಗಳನ್ನು ಮಾಡದಿದ್ದರೆ ಜಾನುವಾರುಗಳಿಗೆ ಬಹಳ ತೊಂದರೆಯಾಗುತ್ತದೆ. ಗೋವು ಕುಂಟೆಗಳು ಇಲ್ಲದಿದ್ದರೂ ಕೂಡಾ, ಗೋವು ಕುಂಟೆಗಳನ್ನು ಮಾಡಿದ್ದೇವೆ ಎಂದು ತಪ್ಪು ಬಿಲ್ಲುಗಳನ್ನು ಮಾಡುತ್ತಿದ್ದಾರೆ, ನಮ್ಮ ಸ್ನೇಹಿತರಾದ ಮಾನ್ಯ ಭೂಪತಿಯವರು ಹೇಳಿದಹಾಗೆ, ಗೋವು ಕುಂಟೆಗಳು ಇಲ್ಲದಿದ್ದರೆ, ಗೋವುಗಳು ಮೂರು ನಾಲ್ಕು ಮೈಲಿ ದೂರ ನೀರಿಗಾಗಿ ಅಲೆದಾಡಬೇಕಾಗುತ್ತದೆ. ಕೆರೆಗಳೆಲ್ಲಾ ಬತ್ತಿಹೋಗಿರುವುದರಿಂದ. ಗೋವು ಕುಂಟೆಗಳನ್ನು ಮಾಡದಿದ್ದರೆ ಜಾನುವಾರುಗಳಿಗೆ ತೊಂದರೆಯಾಗುತ್ತದೆ. ಎಲ್ಲೆಲ್ಲಿ ಕೆರೆಗಳು ಇರುತ್ತವೆ ಅಲ್ಲೆಲ್ಲಾ ತೇವ ಇರುತ್ತದೆ. ಅಲ್ಲಿ ಗೋವು ಕುಂಟೆಗಳನ್ನು ತೋಡಬಹುದು. ಸ್ವಲ್ಪ ಹಣ ಖರ್ಚು ಮಾಡಿದರೂ ಸಾಕು ಗೋವು ಕುಂಟೆಗಳನ್ನು ಮಾಡಬಹುದು. ಆದರೆ ಗೋವುಕುಂಟೆಗಳನ್ನು ತೋಡಬಾರದು ಎಂಬ ಸರ್ಕ್ಯುಲರ್ ಇದೆ ಎಂದು ಹೇಳುತ್ತಾರೆ, ಇದಕ್ಕೆ ಜಾಸ್ತಿ ಖರ್ಚಾಗುವುದಿಲ್ಲ, ಆದಕಾರಣ ಎಲ್ಲೆಲ್ಲಿ ಕೆರೆಗಳು ಇವೆ ಅಲ್ಲೆಲ್ಲಾ ಒಂದು ಗೋವು ಕುಂಟೆ ಮಾಡಬೇಕೆಂದು ಒಂದು ಸರ್ಕ್ಯುಲರ್ ಕಳುಹಿಸಿದರೆ, ಅದನ್ನು ಮಾಡಬಹುದು, ಇದರಿಂದ ಜಾನುವಾರುಗಳಿಗೆ ಅನುಕೂಲವಾಗುತ್ತದೆ.

ಇನ್ನೊಂದು ವಿಚಾರ ನಾನು ಗಮನಿಸಿದ್ದು ಎಂದರೆ ಹಣ ಖರ್ಚು ಮಾಡುವುದರಲ್ಲಿ ಇರುವ ತಾರತಮ್ಯ. ನಮ್ಮ ಸ್ನೇಹಿತರು ತಪ್ಪು ತಿಳಿದುಕೊಳ್ಳದಿದ್ದರೆ ನಾನು ಹೇಳುತ್ತೇನೆ. ಬರಗಾಲ ಕಾಮಗಾರಿಗಳಲ್ಲಿ ವಿಪರೀತ ತಾರತಮ್ಯ ಇದೆ. ಒಂದು ಜಿಲ್ಲೆಗೂ ಇನ್ನೊಂದು ಜಿಲ್ಲೆಗೂ ಬಹಳ ಅಂತರ ಇದೆ. ಬರಗಾಲ ಕಾಮಗಾರಿಗಳಲ್ಲಿ ಮಾಡಿರುವ ರಸ್ತೆಗಳ ವಿಷಯ ತೆಗೆದುಕೊಂಡರೆ, ಬೆಂಗಳೂರು ಜಿಲ್ಲೆ ೧೫೮ ಕಿಲೋಮೀಟರ್, ಚಿತ್ರದುರ್ಗ ೩೮೧ ಕಿಲೋಮೀಟರ್, ಕೋಲಾರ ೧೩೫ ಕಿಲೋಮೀಟರ್ ಶಿವಮೊಗ್ಗ ೮೫ ಕಿಲೋಮೀಟರ್, ತುಮಕೂರು ೨೮ ಕಿಲೋಮೀಟರ್. ನೋಡಿ ಎಷ್ಟೊಂದು ಅಂತರ ಇದೆ, ಧಾರವಾಡ ೯೧೭ ಕಿಲೋಮೀಟರ್, ಬಳ್ಳಾರಿ ೯೪೫ ಕಿಲೋಮೀಟರ್, ಹಾಸನ ೬೭೩ ಕಿಲೋಮೀಟರ್, ತುಮಕೂರಿಗೆ ಮಾತ್ರ ೨೮ ಕಿಲೋಮೀಟರ್. ಇಷ್ಟೊಂದು ತಾರತಮ್ಯ ಇರಬಾರದು. ಇದರಲ್ಲಿ ಧಾರವಾಡ ಹಾಗೂ ಹಾಸನ ಜಿಲ್ಲೆಯವರು ಸಿಂಹಪಾಲು ಹೊಡೆದಿದ್ದಾರೆ,

ಶ್ರೀ ಹೆಚ್.ಡಿ. ದೇವೇಗೌಡ.—ಇಲ್ಲಾ ಸ್ವಾಮಿ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಓದಿ ಹೇಳುತ್ತೇನೆ. ನಾವು ಕೊಟ್ಟಿರುವ ಅಂಕಿ ಅಂಶಗಳನ್ನು ಓದಿ ಹೇಳುತ್ತಿದ್ದೇನೆ. ಇಷ್ಟೊಂದು ತಾರತಮ್ಯ ಇರಬಾರದು. ಬೇಕಾದರೆ ಸ್ವಲ್ಪ ತಾರತಮ್ಯ ಇರಲಿ, ಸ್ವಲ್ಪ ತಾರತಮ್ಯ ಇದ್ದರೆ ನಾನು ಹೇಳುತ್ತಿರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ತಾರತಮ್ಯ ಇದ್ದರೂ ಇಷ್ಟೊಂದು ಬಹಿರಂಗವಾಗಿ ಹೇಳ ಬಾರದು.

ಶ್ರೀ ಆರ್. ವೆಂಕಟರಾಮಯ್ಯ.—ಬರಗಾಲ ಕಾಮಗಾರಿಯಲ್ಲಿ ಇಂಪ್ರೂವ್‌ಮೆಂಟ್ ಆಫ್ ನ್ಯೂ ಎಕ್ಸಿಸ್ಟಿಂಗ್ ರೋಡ್ಸ್. ಬೆಂಗಳೂರು ಜಿಲ್ಲೆ ೫೭೬೫ ಕಿಲೋಮೀಟರ್, ಕೋಲಾರ ೬೭೧ ಕಿಲೋ ಮೀಟರ್, ತುಮಕೂರು ೨೫೫ ಕಿಲೋಮೀಟರ್, ಹಾಸನ ೨೦೨೫ ಕಿಲೋಮೀಟರ್. ಇದು ಮಾಸ್ಟ ಬೊಮ್ಮಾಯಿಯವರು ಕೊಟ್ಟಿರುವ ರಿಪೋರ್ಟ್.

ಶ್ರೀ ಹೆಚ್.ಡಿ. ದೇವೇಗೌಡ.—ಫ್ಯಾಮಿನ್‌ಗಾಗಿ ಕೊಟ್ಟ ಹಣವನ್ನು ಉತ್ತಮವಾಗಿ ಖರ್ಚು ಮಾಡಿದ್ದಾರೆ ಎಂದು ಆಯಿತು.

ಶ್ರೀ ಆರ್. ವೆಂಕಟರಾಮಯ್ಯ.—ನೀವೂ ಖರ್ಚು ಮಾಡಿ, ನಮಗೂ ಕೊಡಿಸಿ. ಬೋರ್‌ವೆಲ್ ಗಳನ್ನು ತೆಗೆದುಕೊಂಡರೆ, ತುಮಕೂರು ೭೩೭, ಮೈಸೂರು ೬೬೨೧, ಇದು ನಮ್ಮ ನಜೀರ್ ಸಾಹೇಬರ ಜಿಲ್ಲೆ, ಹಾಸನ ೪೭೬, ಇಷ್ಟೊಂದು ತಾರತಮ್ಯ ಇರಬಾರದು. ಇನ್ನು ಕೆರೆಗಳ ನಿರ್ಮಾಣ ಕೋಲಾರ ಸೊನ್ನೆ, ಬೆಂಗಳೂರು ಜಿಲ್ಲೆ ಕೇಳುವವರೇ ಇಲ್ಲ, ಮೈಸೂರು ೧೩೨, ಇದನ್ನು ಓದಿದರೆ ಎಷ್ಟು ತಾರತಮ್ಯ ಇದೆ ಎಂದು ಗೊತ್ತಾಗುತ್ತದೆ. ನೀವು ತಪ್ಪು ತಿಳಿದುಕೊಳ್ಳಬಾರದು.

ಇನ್ನು ಡಿಸಿಲ್ಟಿಂಗ್ ಆಫ್ ಟ್ಯಾಂಕ್ಸ್, ಕೋಲಾರ ಜಿಲ್ಲೆ ಮೂರು, ಹಾಸನ ಜಿಲ್ಲೆ ೪೨, ಬೆಳಗಾಂ ೯೮, ಇದು ನೀವು ಕೊಟ್ಟಿರುವ ಲೆಕ್ಕ. ಇಷ್ಟೊಂದು ತಾರತಮ್ಯ ಇರಬಾರದು. ಜಾಸ್ತಿ ಕೆಲಸ ಮಾಡಿಸಿ ಸಂತೋಷ, ಆದರೆ ಎಲ್ಲಾ ಕಡೆಗೂ ಮಾಡಿಸಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಕೋಲಾರ ಜಿಲ್ಲೆಯಲ್ಲಿ ಫೀಡರ್ ಚಾನಲ್ ಜಾಸ್ತಿ ತೆಗೆದು ಕೊಂಡಿದ್ದೇವೆ. ಅಲ್ಲಿ ಬಹಳ ಚೆನ್ನಾಗಿ ಮಾಡಿದ್ದೇವೆ. ಕಾಲುವೆಗಳ ರಿಪೇರಿ ತೆಗೆದುಕೊಂಡಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಇನ್ನು ಫಾರೆಸ್ಟ್ ಪ್ಲಾಂಟೇಷನ್ ತೆಗೆದುಕೊಂಡರೆ ತುಮಕೂರು ೧೨೬, ಬೆಂಗಳೂರು ೪೦೨, ಕೋಲಾರ ೫೬೩, ಬೆಳಗಾಂ ೯೮೨, ಬಿಜಾಪುರ ೨೪೯೦ ಹೆಕ್ಟೇರ್‌ಗಳು ಇದನ್ನು ನಾನು ಹೇಳುತ್ತಿರುವುದು ಎಷ್ಟೊಂದು ತಾರತಮ್ಯ ಇದೆ ಎಂಬುದನ್ನು ತೋರಿಸಲು ಇದು ವಿಪರೀತ ಇದೆ. ನೀವು ಲೆಕ್ಕ ಕೊಟ್ಟಿದ್ದರಿಂದಲೇ ನಮಗೆ ಗೊತ್ತಾಯಿತು. ಇಲ್ಲದಿದ್ದರೆ ನಮಗೆ ಗೊತ್ತಾಗುವುದಿಲ್ಲ. ಇಷ್ಟು ತಾರತಮ್ಯ ಇರಬಾರದು. ಸ್ವಲ್ಪ ಹೆಚ್ಚು ಕಡಿಮೆ ಇರಲಿ.

ಶ್ರೀ ಹೆಚ್.ಡಿ. ದೇವೇಗೌಡ.—ಹಣ ಎಷ್ಟು ಖರ್ಚಾಗಿದೆ ಅದನ್ನು ಹೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ಅದನ್ನು ನಾನು ಲೆಕ್ಕ ಮಾಡಿಲ್ಲ, ಅವಕಾಶ ಕೊಟ್ಟರೆ ಲೆಕ್ಕ ಮಾಡಿ ಅದನ್ನೂ ಹೇಳುತ್ತೇನೆ. ದಯವಿಟ್ಟು ಅವಕಾಶ ಕೊಡಬೇಕು ನಾನು ಹೇಳುತ್ತೇನೆ. ನಮಗೂ ಹೆಚ್ಚು ಜಾಸ್ತಿ ಕೊಡಿ ಎಂದು ಕೇಳುತ್ತೇನೆ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಕೆಲವು ಕಡೆಗಳಲ್ಲಿ ಬಹಳ ಕಡಿಮೆ ಕೊಟ್ಟಿದ್ದೀರಿ, ಮತ್ತೆ ಕೆಲವು ಕಡೆ ಜಾಸ್ತಿ ಕೊಟ್ಟಿದ್ದೀರಿ. ಈ ರೀತಿ ತಾರತಮ್ಯ ಬಹಳ ಪ್ರಮಾಣದಲ್ಲಿ ಇರಕೂಡದು. ನಮ್ಮ ಖರ್ಗೆಯವರು ಬರಗಾಲದ ಬಗ್ಗೆ ವರದಿ ಕೊಟ್ಟಿದ್ದಾರೆ. ಅದರಲ್ಲಿ ಕೊಟ್ಟಿರತಕ್ಕಂತಹ ಕೆಲವು ಕನ್‌ಕ್ಲೂಷನ್‌ಗಳನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಅವರು ಏನು ಹೇಳಿದ್ದಾರೆ ಅಂದರೆ, Food for all, and water for the cattle and work for all the able bodied people ಅಂತ ಸ್ಲೋಗನ್ ಅನು ಕೊಟ್ಟಿದೆ. ಆದರೆ ಈ ವರದಿಯಲ್ಲಿ ಏನು ಹೇಳಿದ್ದಾರೆಂದರೆ,

> Regarding employment, the total number of small and marginal farmers affected is 14.56 lakhs. Assuming that two persons in each family are to be provided employment their total number amounts to 29 18 lakhs. In addition, 22.53 lakhs agricultural labourers have also to be provided

with employment, thus constituting a total labour force of about 51.71 lakhs. The Committee feels that atleast 25% of the above total labour force i.e., about 13 lakhs persons have to be provided with employment. Assuming that about 3 lakh labourers could be engaged in activities under the regular budgeted and other plan schemes, it would be necessary to employ 10 lakh labourers for a period of a minimum of 200 days i.e. till the commencement of the next South-West monsoon season. The amount required for this purpose will be Rs. 200 Crores. The amount required for providing relief to the cattle, as explained earlier, would be about Rs. 20 Crores.

As regards relief for drinking water supply, it is necessary to drill more borewells and take up mini-water supply schemes at a cost of Rs. 40 Crores for providing 7000 borewells, 500 mini-water supply schemes, 500 revival of piped water supply schemes etc.,

ಆಮೇಲೆ ಹ್ಯಾಮ್ಲೆಟ್ಸ್ ಬಗ್ಗೆ ಮಾನ್ಯ ಸ್ನೇಹಿತರು ಸ್ಪಷ್ಟವಾಗಿ ಹೇಳಿದ್ದಾರೆ. ಮುಖ್ಯ ಗ್ರಾಮಗಳಿಗೆ ಕುಡಿಯುವ ನೀರನ್ನು ಬೋರ್‌ವೆಲ್‌ಗಳ ಮೂಲಕ ಕೊಡಿಸಿದ್ದೀರಿ. ಆದರೆ ಯಾವ ಯಾವ ಹ್ಯಾಮ್ಲೆಟ್‌ಗಳಿಗೆ ಕುಡಿಯುವ ನೀರಿನ ಸರಬರಾಜು ಇಲ್ಲವೋ ಅಂತಹ ಕಡೆಗಳಲ್ಲಿ ಕುಡಿಯುವ ನೀರನ್ನು ಸರಬರಾಜು ಮಾಡಿ ಸೌಲಭ್ಯವನ್ನು ಒದಗಿಸಲು ಕೂಡಲೇ ಕ್ರಮ ತೆಗೆದುಕೊಳ್ಳಬೇಕಾಗಿದೆ. ಕೆಲವು ಹಳ್ಳಿಗಳಲ್ಲಿ ನೀರಿನ ಪರಿಸ್ಥಿತಿ ಬಹಳ ಭೀಕರವಾಗಿದೆ. ಉದಾಹರಣೆಗೆ ತಿಮ್ಮರಾಯಪಲ್ಲಿಯಲ್ಲಿ ೪ ಹ್ಯಾಮ್ಲೆಟ್‌ಗಳಿವೆ ಆದರೆ, ಇಲ್ಲಿ ಕುಡಿಯುವ ನೀರಿನ ತೊಂದರೆ ಬಹಳ ಇದೆ. ಪ್ರತಿಯೊಂದು ಹ್ಯಾಮ್ಲೆಟ್‌ನಲ್ಲೂ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ತಾವು ಕ್ರಮ ತೆಗೆದುಕೊಳ್ಳಬೇಕು.

೪-೦೦ ಪಿ.ಎಂ.

ಇನ್ನು ಕೋಲಾರ ಜಿಲ್ಲೆಯ ಬಗ್ಗೆ ಒಂದು ಮಾತು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಕೋಲಾರ ಜಿಲ್ಲೆಯಲ್ಲಿ ಸತತವಾಗಿ ಬರ ಪರಿಸ್ಥಿತಿ ಇರುತ್ತದೆ. ಆದರೆ ಅಲ್ಲಿಗೆ ಕೊಡುವ ಗ್ರಾಂಟ್ಸ್ ಮಾತ್ರ ಬಹಳ ಕಡಿಮೆ. ಮಾನ್ಯ ಮಂತ್ರಿಗಳನ್ನು ಕೇಳಿದರೆ ಬೇಕಾದಷ್ಟು ಗ್ರಾಂಟ್ಸ್ ಕೊಟ್ಟಿದೆ ಎಂದು ಹೇಳುತ್ತಾರೆ. ಆದರೆ ಅಲ್ಲಿಯ ಅಧಿಕಾರಿಗಳನ್ನು ಕೇಳಿದರೆ, ಹಣ ಇಲ್ಲವೆಂದು ಹೇಳುತ್ತಾರೆ. ಅಲ್ಲಿ ಹೋಗಿ ನೋಡಿದರೆ ಕೆಲಸಗಳು ಆಗುತ್ತಾ ಇಲ್ಲ. ಬಿಜಾಪುರ ಜಿಲ್ಲೆಯಲ್ಲಿ ಐದು ನದಿಗಳು ಇದ್ದು, ಅವರು ಬರ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಅವರೂ ಕೂಡ ನಮ್ಮ ಅಣ್ಣತಮ್ಮಂದಿರು, ಅವರನ್ನು ಬಿಟ್ಟರೆ ನಾವು ಕೋಲಾರದವರು, ಯಾವಾಗಲೂ ಬರ, ಬರ ಎಂದೇ ಸಾಯುತ್ತಿರುತ್ತೇವೆ. ಇದನ್ನು ತಪ್ಪಿಸಬಹುದು, ಇದು ಮಾನವ ಸೃಷ್ಟಿ. ಆದುದರಿಂದ ಕೋಲಾರ ಜಿಲ್ಲೆಯ ಬಗ್ಗೆ ಹೆಚ್ಚು ಹೆಚ್ಚು ಕಳಕಳಿ ತೋರಿಸಬೇಕೆಂದು ಹೇಳುತ್ತೇನೆ. ಇದುವರೆಗೂ ಸರ್ಕಾರ ಸ್ಪಷ್ಟವಾದ ಕಳಕಳಿಯನ್ನು ತೋರಿಸಿಲ್ಲವೆಂದು ಆರೋಪ ಮಾಡಬೇಕಾಗಿದೆ. ಎಲ್ಲಾ ಕಡೆಗಳಲ್ಲೂ ಟ್ಯಾಂಕ್‌ಗಳನ್ನು ಕಟ್ಟಿರುವಂತೆ, ಇಲ್ಲಿಯೂ ಕೂಡ ಟ್ಯಾಂಕ್ ಕಟ್ಟುವ ಕಡೆಗೆ ಹೆಚ್ಚು ಗಮನ ಕೊಡಬೇಕು. ಇಲ್ಲದೇ ಹೋದರೆ ಕಷ್ಟವಾಗುತ್ತದೆ. ಆದುದರಿಂದ ಕೋಲಾರ ಜಿಲ್ಲೆಯ ಬಗ್ಗೆ ಹೆಚ್ಚು ಗ್ರಾಂಟ್ಸ್ ಕೊಡಬೇಕು.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ಬೇಗ ಮುಗಿಸಿ.

ಶ್ರೀ ಆರ್. ವೆಂಕಟರಾಮಯ್ಯ.—ಇನ್ನು ಭೂಕಂದಾಯದ ಮಾಫಿ ಬಗ್ಗೆ ಪೇಜ್ ೧೨ರಲ್ಲಿ ೧೯೮೫-೮೬ರಲ್ಲಿ ೨,೭೬೪ ಹಳ್ಳಿಗಳು ಎಂದು ಕೊಟ್ಟಿದ್ದೀರಿ. ಅವರ ಅಂಕಿಅಂಶಗಳ ಪ್ರಕಾರ ಎಲ್ಲಾ ೧೯ ಸಾವಿರ ಹಳ್ಳಿಗಳಿಗೂ ಭೂ ಕಂದಾಯ ಮಾಫಿ ಆಗಬೇಕು. ಎಲ್ಲಾ ಹಳ್ಳಿಗಳಲ್ಲೂ ಬರ ಇದೆ,

ಮೊದಲು ಸಹಕಾರಿ ಸಂಘಗಳ ಸಾಲಗಳನ್ನು ಮುಂದೂಡಿದ್ದರು. ಆ ರೀತಿ ಮುಂದೂಡಿದ್ದ ಸಾಲಗಳ ಬಗ್ಗೆ, ಸುಸ್ತಿ ಬಡ್ಡಿ ಹಾಕಿದ್ದಾರೆ. ಇದರಿಂದ ರೈತರಿಗೆ ತೊಂದರೆಯಾಗಿವೆ. ಬರ ಬಂದು ಸಾಲ ವಸೂಲಾತಿಯನ್ನು ಮುಂದಕ್ಕೆ ಹಾಕಿದರೆ, ಅದಕ್ಕೆ ಸುಸ್ತಿ ಬಡ್ಡಿ ಹಾಕಿದ್ದಾರೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಸೂಕ್ತ ನಿರ್ದೇಶನ ಕೊಡಬೇಕೆಂದು ಹೇಳಿ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಪಾಟೀಲ್(ಗದಗ್).—ಮಾನ್ಯಸಭಾಧ್ಯಕ್ಷರೇ, ಇವತ್ತಿನ ಬರಗಾಲ ಅತ್ಯಂತ ಭೀಕರವಾದಂಥ ಸ್ಥಿತಿಯಲ್ಲಿದೆ. ಇದು ಅನಿರೀಕ್ಷಿತವಾಗಿ ಬಂದಂಥ ಬರಗಾಲವಲ್ಲ. ಹೋದಸಾರಿಯೂ ಕೂಡ, ನಮ್ಮೆಲ್ಲರ ಎದುರಿಗೆ ಈ ಬರಗಾಲದ ಸಮಸ್ಯೆ ತಾಂಡವವಾಡಿತು. ಆದಕ್ಕೆ ಶ್ರೀಮಾನ್ ಖರ್ಗೆಯವರ ಅಧ್ಯಕ್ಷತೆ ಯಲ್ಲಿ ಒಂದು ಸಮಿತಿಯನ್ನು ನೇಮಿಸಿದರು ಆ ಸಮಿತಿಯಲ್ಲಿ ಆಳುವ ಪಕ್ಷ ದವರು ಮತ್ತು ವಿರೋಧ ಪಕ್ಷದವರುಗಳನ್ನೂ ಹಲ ಕೆಲವು ಸದಸ್ಯರನ್ನು ಸೇರಿಸಿ, ಸಮಿತಿಯನ್ನು ನೇಮಿಸಿ ಸಮಿತಿಯು ಒಮ್ಮತದ ವರದಿಯನ್ನು ಸಲ್ಲಿಸಿದಾಗ. ಬರಗಾಲದ ಮುಂಜಾಗ್ರತೆ ಬಗ್ಗೆ ಸರ್ಕಾರ, ಪ್ರತಿಯೊಂದು ಕಾರ್ಯಕ್ರಮಗಳನ್ನೂ ಚಾಚೂ ತಪ್ಪದೆ ನಿರೀಕ್ಷಣೆ ಮೀರಿ ಕಾರ್ಯಗತಗೊಳಿಸುವುದಕ್ಕೆ ಪ್ರಯತ್ನ ಮಾಡಬೇಕಾಗಿತ್ತು. ಅದರಿಂದ ಫಲ ಸಿಕ್ಕುತ್ತಿತ್ತೋ, ಇಲ್ಲವೋ ಆ ಮಾತು ಬೇರೆ. ಬರೀ ಕೇಂದ್ರ ಸರ್ಕಾರದಿಂದ ಹಣಬಂದಿಲ್ಲವೆಂದು ಹೇಳಿದರೆ, ಹೊಣೆಗಾರಿಕೆ ತಪ್ಪುವುದಿಲ್ಲ. ಶ್ರೀಮಾನ್ ಖರ್ಗೆಯವರ ಸಮಿತಿಯು ಯಾವ ಯಾವ ಸಲಹೆಯನ್ನು ಮಾಡಿದ್ದಾರೆ, ಅವುಗಳಲ್ಲಿ ಕೆಲವನ್ನಾದರೂ ಅನುಸರಿಸದಿದ್ದರೆ ಈ ಬರಗಾಲ ನಿವಾರಣೆಯಾಗುತ್ತಿತ್ತು. ಅಲ್ಲದೆ ರೆವಿನ್ಯೂ ಮಂತ್ರಿಗಳು ಈ ಬಗೆ ಹೆಚ್ಚು ದಕ್ಷತೆಯನ್ನು ವಹಿಸಿದ್ದರೆ, ಇಂದು ಬಂದಿರುವಂಥ ಪ್ರಮಾದ ಬಂದಿರಲಿಲ್ಲ. ಉದಾಹರಣೆಗೆ ಕಾರವಾರ ಜಿಲ್ಲೆಯನ್ನೇ ತೆಗೆದುಕೊಳ್ಳಿ, ಅಲ್ಲಿ ಸಾಕಷ್ಟು ಹುಲ್ಲು ಸಿಕ್ಕುತ್ತಿತ್ತು. ಇದನ್ನು ಸೆಪ್ಟೆಂಬರಿನಲ್ಲಿಯೇ ವ್ಯವಸ್ಥೆ ಮಾಡಬೇಕಾಗಿತ್ತು, ಅದನ್ನು ಮಾಡಿಲ್ಲ. ಆ ಮೇಲೆ ಶಿವಮೊಗ್ಗ ಜಿಲ್ಲೆಯಲ್ಲಿ ಸಿಕ್ಕುವ ಹುಲ್ಲು ಒಣಗಿ ಹೋಯಿತು. ಅದು ಸಿಕ್ಕಿದ್ದರೆ, ಇದರಲ್ಲಿ ಅರ್ಧದಷ್ಟು ಬವಣೆಯಾದರೂ ನಿವಾರಣೆಯಾಗುತ್ತಿತ್ತು. ಹಿಂದೆ ಈ ಪ್ರದೇಶದಲ್ಲಿ ಹುಲ್ಲಿನ ಉಂಡೆಗಳನ್ನು ಮಾಡತಕ್ಕಂಥ ಕಾರ್ಖಾನೆಯನ್ನು ಮಾಡಿದ್ದೆವು. ಆದರೆ ಅದರ ಉಪಯೋಗ ಮಾಡಿಕೊಳ್ಳಲಿಲ್ಲ, ಆ ಮೇಲೆ ಗೋಶಾಲೆಗಳನ್ನು ತೆಗೆದುಕೊಳ್ಳಿ. ಇವುಗಳ ವಿಚಾರದಲ್ಲೂ ಎಲ್ಲವೂ ತದ್ವಿರುದ್ಧವಾಗಿದೆ. ತದ್ವಿರುದ್ಧವಾದ ಕಾರ್ಯಕ್ರಮಗಳು ನಡೆಯುತ್ತಿವೆ. ಈಗ ಕೊಟ್ಟಿರತಕ್ಕಂಥ ವರದಿಯನ್ನು ನೋಡಿದರೆ, ನಿಜವಾಗಿಯೂ ಈ ರಿಪೋರ್ಟ್ ಕೊಟ್ಟವರಿಗೆ ಶಹಭಾಸ್‌ಗಿರಿಯನ್ನು ಕೊಡಬೇಕು. ಈ ರಿಪೋರ್ಟ್‌ನ್ನು ನೋಡಿ ಸಮಾಧಾನ ಮಾಡಿಕೊಳ್ಳಬೇಕಾಗಿದೆ. ಇದರಲ್ಲಿರತಕ್ಕ ಅಂಕಿಸಂಖ್ಯೆಗಳಿಗೂ, ಆಗಿರತಕ್ಕಂಥ ಕೆಲಸಗಳಿಗೂ, ಒಂದೊಂದಕ್ಕೂ ತಾಳೆ ಇಲ್ಲ. ಈ ರಿಪೋರ್ಟ್ ಕೊಟ್ಟವರು ಈ ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ, ತಮಗೆ ಒಂದು ಉದಾಹರಣೆ ಹೇಳುವುದೇನೆಂದರೆ. employment generation ಗೆ ಜನಸಂಖ್ಯೆ ಎಷ್ಟಿದೆ. ೨೩ ಲಕ್ಷ ಜನರು ಎಂದು ಕೊಟ್ಟಿದ್ದಾರೆ. ಈ ೨೩ ಲಕ್ಷ ಜನತೆಗೆ ದಿನಕ್ಕೆ ೭ ರೂಪಾಯಿಗಳಂತೆ ಕೊಟ್ಟರೆ ಎಷ್ಟಾಗುತ್ತದೆ. ? ಒಂದು ಕೋಟಿ, ಅರವತ್ತು ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ೨೩.೮೫೦ ಜನರಿಗೆ ಎಂಪ್ಲಾಯ್‌ಮೆಂಟ್ ಕೊಡುವುದಾದರೆ, ಒಂದು ದಿವಸಕ್ಕೆ ೭ ರೂಪಾಯಿಯಂತೆ, ಒಂದು ಕೋಟಿ ಅರವತ್ತು ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಈ ರೀತಿ ಲೆಕ್ಕಹಾಕಿದ್ದಾರೆಯೇ ? ಮಾನ್ಯ ಡೇಸ್ ಬಗ್ಗೆ ಖರ್ಚಾದ ಹಣದ ವಿವರ ಕೊಡುತ್ತೇನೆ. ೫,೦೫;೫೬೨ ಮಾನವ ದಿನಗಳು ಆಗಿವೆ. ಈ ದಿನಗಳಿಗೆ, ಒಂದು ದಿನಕ್ಕೆ ೦–೫೦ ಪೈಸೆಯಂತೆ ಕೊಟ್ಟರೂ ಸಹ ೪೦,೪೫,೧೩೬ ರೂಪಾಯಿಗಳು ಬೇಕಾಗುತ್ತದೆ. ಪ್ರತಿ ದಿವಸಕ್ಕೆ ಇಷ್ಟು ಹಣಬೇಕು, ಇಷ್ಟು ಹಣವನ್ನು ಕೊಡುವುದಕ್ಕೆ ಸರ್ಕಾರಕ್ಕೆ ಶಕ್ತಿ ಇಲ್ಲ. ಒಂದು ಕೋಟಿ ರೂಪಾಯಿಯನ್ನು ಯಾವ ಯಾವ ಕೆಲಸಕ್ಕೆ ಕೊಡುತ್ತಾರೆ. ಜನರಿಗೆ ಉದ್ಯೋಗ ಕಲ್ಪಿಸುವುದಕ್ಕೆ ಕೊಡುತ್ತಾರೆಯೇ ಕೂಲಿಗಾಗಿ ಕೊಡುತ್ತಾರೆಯೇ, ಅಥವಾ ಕುಡಿಯುವ ನೀರಿಗಾಗಿ ಕೊಡುತ್ತಾರೆಯೇ, ದನಕರುಗಳ ಮೇವಿಗಾಗಿ ಕೊಡುತ್ತಾರೆಯೇ ಈ ಎಲ್ಲಾ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ನಿಮ್ಮ ಆತ್ಮ ನಿರೀಕ್ಷಣೆ ಮಾಡಿಕೊಂಡು ಹೇಳಿ. ನಾನು ವಿರೋಧ ಪಕ್ಷದವನಾಗಿ ಟೀಕೆ ಮಾಡುವುದಕ್ಕೆ ಹೇಳುತ್ತಿಲ್ಲ. ಈ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪುತ್ತಾರೆಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು. ನಮಗೆ ಇಷ್ಟು [illegible]ಣ ಬೇಕೆಂದು ಕೇಂದ್ರ

ಸರ್ಕಾರಕ್ಕೆ ಯಾವ ರೀತಿ ಒತ್ತಾಯ ಮಾಡಿದ್ದಾರೋ, ಅದೇ ರೀತಿ ನಾನೂ ಕೂಡ ಕೇಂದ್ರಕ್ಕೆ ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದಿದ್ದೇನೆ. ಇಲ್ಲಿ ಮಾನ್ಯ ಮುಖ್ಯ ಮಂತ್ರಿಯವರಿಗೂ ಬರೆದಿದ್ದೇನೆ. ಅದಕ್ಕೆ ಪ್ರಧಾನ ಮಂತ್ರಿಗಳಿಂದಲೂ ಮೆಚ್ಚಿಗೆ ಪತ್ರ ಬಂದಿದೆ, ಮಾನ್ಯ ಮುಖ್ಯಮಂತ್ರಿಗಳಿಂದಲೂ ಮೆಚ್ಚಿಗೆ ಪತ್ರ ಬಂದಿದೆ. ಮಾನ್ಯ ರೆವಿನ್ಯೂ ಮಂತ್ರಿಗಳೂ ಇಲ್ಲಿ ಕುಳಿತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈ ಕಡೆ ಗಮನಹರಿಸಬೇಕು. while talking to newmen at Hubli Sri Bommai has said that K H. Patil is an ordinary MLA and he is a corrupt MLA. Here. I would like to clarify that as has been mentioned by Sri Bommai, Iam not an extraordinary MLA and also I am not a corrupt MLA I am only an ordinary MLA.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಆ ರೀತಿ ಪತ್ರಿಕಾ ಹೇಳಿಕೆ ಕೊಟ್ಟಿಲ್ಲ. ಯಾವ ಪತ್ರಿಕೆಯಲ್ಲೂ ಬಂದಿಲ್ಲ ವಿರೋಧಪಕ್ಷದ ನಾಯಕರ ಸಭೆ ಕರೆದಿದ್ದೇನೆಂದು ಹೇಳಿದೆ. ನೀವು ಆರ್ಡಿನರಿ ಎಂ. ಎಲ್. ಎ ಎಂದು ಹೇಳಿಲ್ಲ. ಪತ್ರಿಕೆ ತರಿಸಿ ನೋಡಿದ್ದೇನೆ. ಆ ರೀತಿ ಹೇಳಿಲ್ಲ ಎನ್ನುವ ಮಾತನ್ನು ಪತ್ರಿಕಾ ಸಭೆಯಲ್ಲೂ ಕೂಡ ಹೇಳಿದ್ದೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಆ ರೀತಿ ಹೇಳಿಲ್ಲ ಎಂದರೆ ಅದು ಪ್ರಿವಿಲೇಜ್ ಆಗುತ್ತದೆ. ನಿಮ್ಮ ಊರಿನ ಪತ್ರಿಕೆಯಲ್ಲಿ ಇರುವುದನ್ನೇ ಓದುತ್ತೇನೆ......

ಶ್ರೀ ಎಸ್. ಆರ್. ಬೊಮ್ಮಾಯಿ.—ವಿವರಣೆ ಕೊಡುವುದಕ್ಕೆ ಹೇಳುತ್ತಿದ್ದೇನೆ. ನಾನು ಆ ರೀತಿ ಹೇಳಿಲ್ಲ ನಾನು ಪತ್ರಿಕೆಯನ್ನು ತರಿಸಿ ನೋಡಿದೆ, ಪತ್ರಿಕೆಯಲ್ಲಿ ಇಲ್ಲ. ಯಾವುದೇ ಪತ್ರಿಕೆಯಲ್ಲಿ ಬಂದಿದ್ದರೆ ಅದು ತಪ್ಪು ವರದಿ,

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯಸಭಾಧ್ಯಕ್ಷರೇ, ನನ್ನಲ್ಲಿ ಇರತಕ್ಕ ರಿಪೋರ್ಟ್ ಕಳುಹಿಸಿ ಕೊಡುತ್ತೇನೆ. ಅದನ್ನು ಓದುವುದಕ್ಕೆ ಹೋಗುವುದಿಲ್ಲ ಅವರು ಏನು ಹೇಳಿದ್ದಾರೆ ಅದನ್ನು ನಾನು ಹೇಳಿದರೆ, ಸುಳ್ಳು ಹೇಳುತ್ತಾರೆ ಎಂದ ಹಾಗೆ ಆಗುತ್ತದೆ. ಅವರೇ ಹೇಳಿದಂಥ ಮಾತುಗಳನ್ನು ಓದಿ ಹೇಳುತ್ತೇನೆ.

Mr. Bommai wondered whether Mr. Patil had really toued any of the villages in his constituency ?'' Is it not creating bad impression about me ? Not only I have toured all the villages, but also I have visited each and every house in these villages. ಅವರು ಹೇಳಿದ ಮೇಲೆ ವರದಿಯೊಂದನ್ನೂ ತರಿಸಿದ್ದೇನೆ.

ನಾನು ಈ ಮಾತನ್ನು ತಮ್ಮ ಮುಂದೆ ಹೇಳಬೇಕಾಗಿದೆ. ನಾವು ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತೇವೆಂದು. ಜನತೆಗೆ ಭರವಸೆ ಕೊಟ್ಟಿದ್ದೀರಿ, ನೀವು ಅವರಿಗೆ ವಚನ ಕೊಟ್ಟಂತೆ, ಆಣೆ ಕೊಟ್ಟಂತೆ ಕೆಲಸ ಮಾಡುತ್ತಿದ್ದೀರಾ ? ನೀವು ಆ ರೀತಿ ಕೆಲಸ ಮಾಡುತ್ತಿಲ್ಲವಾದ್ದರಿಂದ ಅವರು ನಿಮ್ಮನ್ನು ಕರಪ್ಟ್ ಎಂದು ಹೇಳುವುದಕ್ಕೆ ಹತ್ತಿದ್ದಾರೆ.

ಆಮೇಲೆ ತಾವು ಏನು ಹೇಳಿದ್ದೀರಿ ಅದನ್ನೂ ಸಹ ಹೇಳುತ್ತೇನೆ. ಅದು ಈ ರೀತಿ ಇದೆ.

"Mr. Patil's allegation is that the Opposition leaders had not been taken into confidence is wrong." ಎಂದು ಅದನ್ನು ನಾನು ಹೇಳಲಿಲ್ಲ. ಇದರಲ್ಲಿ ಅಪೋಸಿಷನ್ ಲೀಡರ್ಸ್‌ಗೂ ಮೀರಿದ ಸವಾಲು ಇದೆ. ಶ್ರೀಮಾನ್ ಬೊಮ್ಮಾಯಿಯವರು ನಾಳೆ ದಿವಸವೇ ಗದಗ್‌ಗೆ ಹೋಗಿ ಪರೀಕ್ಷೆ ಮಾಡಲಿ. ಅವರಿಗೆ ಅಲ್ಲಿ ನೀರನ್ನು ಕುಡಿಯಲಿಕ್ಕೆ ಕೊಡಲಿ ; ಮನೆಗೆ ಬೆಂಕಿ ಹತ್ತಿಕೊಂಡು ಉರಿಯುತ್ತಿದ್ದಾಗ ಬೀಡಿ ಸೇದುವ ಪ್ರವೃತ್ತಿ ನನ್ನದಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ಮನೆಗೆ ಬೆಂಕಿ ಹತ್ತಿಕೊಂಡಾಗಲೂ ಸೇದುವುದಲ್ಲ, ಬೆಂಕಿ ಹತ್ತಿಕೊಳ್ಳದೇ ಇರುವಾಗಲೂ ತಾವು ಸೇದುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಕೇಂದ್ರ ಸರ್ಕಾರದಿಂದ ಶ್ರೀ ಬೂಟಾಸಿಂಗ್‌ರವರು ನಮ್ಮ ರಾಜ್ಯಕ್ಕೆ ಭೇಟಿ ಕೊಟ್ಟಿದ್ದರು. ಶ್ರೀಮಾನ್ ಎಸ್. ಆರ್, ಬೊಮ್ಮಾಯಿಯವರೂ ಸಹ ಇದ್ದರು. ನಮ್ಮ ನಮ್ಮೊಳಗೆ ಇರತಕ್ಕಂಥ ವಿಚಾರಗಳನ್ನು ನಾನು ಅವರ ಮುಂದೆ ಹೇಳಲಿಲ್ಲ. ಅವರಿಗೆ ನಮ್ಮ ರಾಜ್ಯಕ್ಕೆ ತಾವು ಹೆಚ್ಚು ಆಹಾರಧಾನ್ಯಗಳನ್ನು ಕೊಡಬೇಕು ಎಂದು ಹೇಳಿದೆ. ಅವರು ನಿಮಗೆ ಹೆಚ್ಚು ಆಹಾರಧಾನ್ಯವನ್ನು ಕೊಡುತ್ತೇವೆಂದು ಹೇಳಿದರು. ಈ ಬಗ್ಗೆ ಪ್ರಧಾನ ಮಂತ್ರಿಗಳಿಗೂ ಸಹ ನಾನು ಪತ್ರ ಬರೆದು ೧½ ತಿಂಗಳಾಯಿತು. ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳ ಬರಗಾಲ ಇದೆ ಎಂದು ತಿಳಿದುಕೊಂಡು ಅವರು ಹೆಚ್ಚು ಹಣ ಕೊಟ್ಟಿದ್ದಾರೆ. ಕೇಂದ್ರದಲ್ಲಿ ಯಾವುದೇ ಸರ್ಕಾರ ಇರಲಿ ಅವರು ಕರ್ನಾಟಕದ ಜನ ಬರಗಾಲದಿಂದ ಬಹಳ ಕಂಗಾಲಾಗಿದ್ದಾರೆ ಎಂದು ತಿಳಿದುಕೊಂಡು ಅವರನ್ನು ರಕ್ಷಿಸಬೇಕಾದ್ದು ನಮ್ಮ ಕರ್ತವ್ಯವೆಂದು ಭಾವಿಸಿ ಹೆಚ್ಚು ಸಹಾಯ ಮಾಡುತ್ತಿದ್ದಾರೆ. ಆದರೆ ನಾನು ಅಲ್ಲಿಗೆ ಹೋದಾಗ ಶ್ರೀಮಾನ್ ಬೊಮ್ಮಾಯಿಯವರಿಗೆ ಹೇಳಿದ್ದುದು ತಪ್ಪಾಯಿತು. ಕೆ. ಹೆಚ್. ಪಾಟೀಲರು, ಯಾವುದನ್ನೂ ಹೇಳಿದರೂ ಇವರು ಕಿವಿಗೆ ಹಾಕಿಕೊಳ್ಳುವುದಿಲ್ಲ. ತಮ್ಮ ಗಮನಕ್ಕೆ ತರಬೇಕಾದರೆ ಸುಮಾರು ೪ ತಿಂಗಳ ಹಿಂದೆ ನಮ್ಮಲ್ಲಿ ಕರಪ್ಟ್ ಆಫೀಸರ್ಸ್ ಇದ್ದಾರೆ ಅವರನ್ನು ತೆಗೆಯಿರಿ ಎಂದು ಅವರಿಗೆ ಹೇಳಿದ್ದೇನೆ. ಅಷ್ಟು ಹೇಳಿದರೂ ಕೂಡ ಅವರು ತೆಗೆಯಲಿಲ್ಲ. ಈ ಬಗ್ಗೆ ಬೊಮ್ಮಾಯಿಯವರಿಗೂ ಪತ್ರ ಬರೆದೆ. ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೂ ಸಹ ಈ ವಿಚಾರದಲ್ಲಿ ಬರೆದಾಗ ಅವರು ಇದನ್ನು ಬೊಮ್ಮಾಯಿಯವರಿಗೆ ಕಳುಹಿಸಿಕೊಟ್ಟಿದ್ದೇನೆ ಎಂದು ಬರೆದರು. ಅಲ್ಲಿಗೆ ಅವರು ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಾರೆನ್ನುವ ನಿರೀಕ್ಷಣೆ ಆಯಿತು. ಗದಗ್ ತಾಸೀಲ್ದಾರ್‌ಗೆ ನೀವು ಹೆಚ್ಚು ಕೆಲಸ ಮಾಡಬೇಕು ಎಂದು ಮುಖ್ಯ ಮಂತ್ರಿಗಳು ಆದೇಶ ಕೊಟ್ಟರೆ ಅವರಿಗೆ ಕೊಟ್ಟಂಥ ಹಣವನ್ನು ತೆಗೆದುಕೊಂಡು ಹೋಗಿ ಖಾಸಗೀ ಜನರಿಗೆ ಕೊಟ್ಟು ಕೆಲಸ ಮಾಡಿಸುವುದು ಇದು ಒಳ್ಳೆಯ ಲಕ್ಷಣವೇ ? ಇದರಲ್ಲಿ ಅಂತರಂಗ ಏನು ಇದೆಯೋ ನನಗೆ ತಿಳಿಯುವುದಿಲ್ಲ. ಅದಕ್ಕೋಸ್ಕರವೇ ನಾನು ಅವರಿಗೆ ರಾಜೀನಾಮೆ ಕೊಡಬೇಕೆಂದು ಛಾರ್ಜ್ ಮಾಡಿದ್ದುದು ಅವರನ್ನು ರಾಜೀನಾಮೆ ಕೊಡಿರಿ ಎಂದು ಹೇಳಿದ್ದುದು. ಯಾವ ಕಾರಣಕ್ಕಾಗಿ ಈರೀತಿ ಮಾಡುತ್ತಿದ್ದಾರೋ ನನಗೆ ಗೊತ್ತಿಲ್ಲ. ಇದರಲ್ಲಿ ಅಧಿಕಾರಸ್ಥರಲ್ಲಿ ತಪ್ಪು ಇದೆಯೋ ಇನ್ನು ಎಲ್ಲಿ ತಪ್ಪು ಇದೆಯೋ ನನಗೆ ಗೊತ್ತಿಲ್ಲ. ಆದುದರಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿದೆ ಏನೆಂದರೆ ಶ್ರೀಮಾನ್ ಎಸ್. ಆರ್. ಬೊಮ್ಮಾಯಿಯವರಿಗೆ ಮಹತ್ವವಾದ ಕಾಮಗಾರಿ ಕೆಲಸಗಳ ಇಲಾಖೆ ಏನು ಕೊಟ್ಟಿದ್ದೀರೋ ಅದನ್ನು ಬಿಡಿಸಿ ಪಿ. ಡಬ್ಲ್ಯುಡಿ ಬೇಡ ಎನ್ನುವುದಿಲ್ಲ ಹಾಗೆ ಮಾಡಿರಿ ಎಂದು ಹೇಳಿದೆ. ಏತಕ್ಕೆಂದರೆ ಈ ಬರ ಏನು ಇದೆ ಇದು ಎಲ್ಲರನ್ನೂ ರಕ್ಷಣೆ ಮಾಡಬೇಕು, ಅಂಥಾವರ, ಇಲ್ಲಿ ಇರಬೇಕು ಹೀಗೆ ಮಾಡಬೇಡಿರಿ ಎಂದು ಹೇಳಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ,—ತಾವೇನೋ ಹೇಳಿದರೆ ನನಗೆ ಪಿ.ಡಬ್ಲ್ಯು.ಡಿ. ಕೊಡಿ ಎಂದು ಹಾಗೆ ಅದಲು ಬದಲು ಮಾಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿದರೆ ನಾನು ಇವೊತ್ತೂ ತಯಾರಾಗಿದ್ದೇನೆ. ಕಂದಾಯ ಮಂತ್ರಿಗಳ ವಿಚಾರ ಅವರ ಕೆಲಸ ಹೇಗೆ ಇದೆ ಅನ್ನುವುದು ತಮಗೆ ಗೊತ್ತಿದೆ. ನಮಗೆ ಹಣ ಬಂದರೂ ಕೂಡ ಖರ್ಚು ಮಾಡಲಿಕ್ಕೆ ಹೆಚ್ಚಾಗಿ ಪಿ.ಡಬ್ಲ್ಯು.ಡಿ. ಮಂತ್ರಿಗಳೇ ಈ ಬರಗಾಲ ಕಾಮಗಾರಿ ಕೆಲಸಗಳನ್ನೆಲ್ಲಾ ಕೊಡುವುದು.

ಶ್ರೀ ಕೆ. ಹೆಚ್. ಪಾಟೀಲ್.—ನಿಮಗೆ ಹೇಗೆ ಒಂದು ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಇದೆಹೋ ಅದೇರೀತಿ ಕರ್ನಾಟಕ ರಾಜ್ಯದ ಹಿತವನ್ನು ರಕ್ಷಣೆ ಮಾಡುವುದೂ ಸಹ ನಿಮ್ಮ ಕರ್ತವ್ಯವಾಗಿರುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಸೇರಿಕೊಂಡು ನಾವೆಲ್ಲರೂ ಕರ್ನಾಟಕ ರಾಜ್ಯದ ಜನರ ಹಿತರಕ್ಷಣೆ ಮಾಡೋಣ ಎಂದು ಹೇಳಿದರೆ, ಅದನ್ನು ಪತ್ರಿಕೆಯಲ್ಲಿ ಬಹಿರಂಗವಾಗಿ ಹೇಳಿದ್ದರೆ ಮಾನ್ಯ ವೆಂಕಟರಾಮಯ್ಯನವರು ಈ ವಿಚಾರವನ್ನು ಹೇಳುತ್ತಲೇ ಇರಲಿಲ್ಲ. ಕೇಂದ್ರದ ಮಂತ್ರಿಗಳಾದ ಶ್ರೀ ಬೂಟಾಸಿಂಗ್‌ರವರು ಇಲ್ಲಿಗೆ ಬಂದಾಗ ಇಲ್ಲಿಯ ಪರಿಸ್ಥಿತಿಯನ್ನು ನೋಡಿ ನಿಮಗೆ ಆಹಾರಧಾನ್ಯವನ್ನು ಬೇಕಾದಷ್ಟು ತೆಗೆದುಕೊಂಡುಹೋಗಲು ಸಹಾಯ ಮಾಡುತ್ತೇನೆ ಎಂದು ಹೇಳಿದರು. ಅದರ ಬಗ್ಗೆ ತಾವು ಏನೂ ಹೇಳಲಿಲ್ಲ, ಇಲ್ಲವೇ ಅವರಿಗೆ ಇದರ ಬಗ್ಗೆ ಒಂದು ಅಭಿನಂದನೆಯನ್ನೂ ಹೇಳಲಿಲ್ಲ. ಕೇಂದ್ರ ಸರ್ಕಾರದವರು ಈ ಹಿಂದೆ ಬರಗಾಲಕ್ಕಾಗಿ ೭೬ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಮತ್ತೆ ಈಗ ೫೩ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಲ್ಲಿಗೆ ಒಟ್ಟು ೧೨೯ ಕೋಟಿ ರೂಪಾಯಿಗಳು ಆದ ಹಾಗಾಯಿತು. ಇದನ್ನು ತಾವು ಎಲ್ಲಾದರೂ ಪ್ರಸ್ತಾಪಿಸಿದ್ದೀರಾ ? ಇದನ್ನು ಹೇಳಬಹುದಾಗಿತ್ತು.

ಅವರು ನಾವು ಹೇಳುವುದನ್ನೂ ಕೇಳುತ್ತಾರೆ. ನೀವು ಹೇಳುವುದನ್ನೂ ಸಹ ಕೇಳುತ್ತಾರೆ. ಶ್ರೀ ಬೂಟಾ ಸಿಂಗ್‌ರವರು ಇಲ್ಲಿಗೆ ಬಂದಾಗ ನೀವು ಯಾರನ್ನೂ ಕೂಡ ಇನ್‌ವೈಟ್ ಮಾಡದೇ ಹೋದರೂ ಸಹ ಅವರು ಈ ಒಂದು ಮಾತು ಹೇಳಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದರ ಬಗ್ಗೆ ಮಿಸ್‌ಲೀಡ್ ಮಾಡುವುದು ಬೇಡ ಶ್ರೀ ಬೂಟಾಸಿಂಗ್‌ರವರು ಇಲ್ಲಿಯ ಭೇಟಿ ಕಾರ್ಯಕ್ರಮ ಮೊದಲು ಏನು ಕೊಟ್ಟಿದ್ದರು ಅದನ್ನು ಕ್ಯಾನ್ಸಲ್ ಮಾಡಿದರು. ಮಾನ್ಯ ಮುಖ್ಯ ಮಂತ್ರಿಗಳು ಡೆಲ್ಲಿಗೆ ಹೋದಾಗ ಪ್ರಧಾನ ಮಂತ್ರಿಗಳನ್ನು ಕಂಡರು. ಶ್ರೀ ಬೂಟಾಸಿಂಗ್‌ರವರು ಅಲ್ಲಿಗೆ ಬರಲಿಲ್ಲವೇ ಎಂದು ಪ್ರಧಾನಿ ಮಂತ್ರಿಗಳು ಕೇಳಿದಾಗ ಇನ್ನೂ ಬರಲಿಲ್ಲ ಎಂದು ಹೇಳಿದರು. ಆಮೇಲೆ ಪ್ರಧಾನ ಮಂತ್ರಿಗಳು ಶ್ರೀ ಬೂಟಾಸಿಂಗ್‌ರವರಿಗೆ ಫೋನ್ ಮಾಡಿದರು. ಮಾನ್ಯ ಮುಖ್ಯ ಮಂತ್ರಿಗಳ ಸಮಕ್ಷದಲ್ಲಿ ನಾಳೆ ಹೋಗಿ ಎಂದು ಫೋನ್ ಮಾಡಿದರು. ನಾವು ಡೆಲ್ಲಿಗೆ ಹೋದದ್ದು ಪ್ಲಾನ್ ಡಿಸ್ಕಷನ್ ಬಗ್ಗೆ, ಕಂದಾಯ ಮಂತ್ರಿಗಳ ಸಭೆಯೂ ಇತ್ತು, ಮುಖ್ಯ ಮಂತ್ರಿಗಳು ಫೋನ್ ಮಾಡಿ ನನ್ನನ್ನು ನಾಳೆ ಬೆಂಗಳೂರಿಗೆ ಹೋಗಿ ಎಂದು ತಿಳಿಸಿದರು, ಆಮೇಲೆ ನಾನು ಅವರಿಗೆ ಹೇಳಿದೆ ನಾಳೆಯ ದಿವಸ ಸಂಕ್ರಮಣ ಇದೆ, ನಾಳೆ ಹಬ್ಬ ಇರುವುದರಿಂದ ರಜಾ ದಿನ ಇರುವುದರಿಂದ ಅಧಿಕಾರಿಗಳು ಯಾರೂ ಕೆಲಸಕ್ಕೆ ಬರುವುದಿಲ್ಲ, ಆದುದರಿಂದ ತಮ್ಮ ಭೇಟಿಯನ್ನು ಒಂದೆರಡು ದಿವಸ ಮುಂದಕ್ಕೆ ಹಾಕಿದರೆ ಒಳ್ಳೆಯದು ಎಂದು ಹೇಳಿದೆ. ಅಲ್ಲದೆ ಕೇಂದ್ರದ ನೀರಾವರಿ ಮಂತ್ರಿಗಳಾದ ಶ್ರೀ ಬಿ, ಶಂಕರಾನಂದರವರೂ ಸಹ ಶ್ರೀ ಬೂಟಾಸಿಂಗ್‌ರವರಿಗೆ ನಿಮ್ಮ ಭೇಟಿಯನ್ನು ಎರಡು ದಿವಸ ಮುಂದಕ್ಕೆ ಹಾಕಿದರೆ ನಾನೂ ಬರುತ್ತೇನೆಂದು ಹೇಳಿ ತಮ್ಮ ಭೇಟಿಯನ್ನು ಮುಂದಕ್ಕೆ ಹಾಕಬೇಕು ಎಂದರು. ಆದರೆ ಶ್ರೀ ಬೂಟಾಸಿಂಗ್‌ರವರು ಬೆಳಗ್ಗೆನೇ ಹೊರಟುಬಿಟ್ಟಿದ್ದಾರೆ. ನನ್ನನ್ನೂ ಸಹ ಅದೇ ಪ್ಲೇನ್ ಜತೆಯಲ್ಲಿ ಬರುವುದಕ್ಕೆ ಹೇಳಿದ್ದಾರೆ. ಆದರೆ ೧೦–೪೦ಕ್ಕೆ ಇರತಕ್ಕಂಥ ಸ್ಪೆಷಲ್ ಪ್ಲೇನ್‌ನಲ್ಲಿ ಸ್ಥಳವನ್ನು ಕಾದಿರಿಸಿಕೊಂಡು ಬಂದೆ. ಸುದೈವದಿಂದ ನಾನು ಇಲ್ಲಿಗೆ ೧೦ ನಿಮಿಷ ಮೊದಲೇ ಬಂದೆ. ಆಮೇಲೆ ಶ್ರೀ ಬೂಟಾಸಿಂಗ್‌ರವರು ಬಂದರು, ಅವರನ್ನು ಸ್ವಾಗತ ಮಾಡಿದೆ. ಈರೀತಿಯಾಗಿ ಬಹಳ ಅರ್ಜೆಂಟಾದುದರಿಂದ ನಮ್ಮ ಅಧಿಕಾರಿಗಳು ವಿರೋಧಪಕ್ಷದ ನಾಯಕರನ್ನು ಕಾಂಟ್ಯಾಕ್ಟ್ ಮಾಡಲಿಕ್ಕೆ ಆಗಲಿಲ್ಲ. ಬೆಳಗ್ಗೆ ತಾನೇ ಈ ವಿಚಾರ ಗೊತ್ತಾಯಿತು, ಒಂದು ಗಂಟೆಗೆ ಇಲ್ಲಿಗೆ ಬರಬೇಕಾಗಿತ್ತು. ಅಷ್ಟರಲ್ಲೇ ನಮ್ಮ ಅಧಿಕಾರಿಗಳು ಎಲ್ಲರನ್ನೂ ಸಂಪರ್ಕ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಆಗ ಶ್ರೀ ಬಂಗಾರಪ್ಪನವರನ್ನು ಸಂಪರ್ಕ ಮಾಡಿದಾಗ ಅವರು ಟೂರ್‌ನಲ್ಲಿದ್ದರು. ಶ್ರೀಮಾನ್ ಟಿ. ಎನ್. ನರಸಿಂಹಮೂರ್ತಿಯವರೂ ಸಹ ಇರಲಿಲ್ಲ. ಲೀಡರ್ಸ್ ಯಾರನ್ನೂ ಸಹ ಈ ಅಲ್ಪಸಮಯದಲ್ಲಿ ಕಾಂಟ್ಯಾಕ್ಟ್ ಮಾಡುವುದಕ್ಕಾಗಲಿಲ್ಲ. ಆಗ ನಾನು ಶ್ರೀಮಾನ್ ಕೆ. ಹೆಚ್. ಪಾಟೀಲರಿಗೆ ಹೇಳಿದೆ ನೀವು ಬನ್ನಿ, ನಿಮ್ಮ ಜೊತೆಗೆ ಎಂ ಪಿ. ಗಳೂ ಸಹ ಬರಬೇಕು ಎಂದು ಆಹ್ವಾನ ನೀಡಿದೆ. ಅದರಂತೆ ಇಬ್ಬರು ಲೋಕಸಭಾ ಸದಸ್ಯರೂ ಸಹ ಆಹ್ವಾನ ಕೊಟ್ಟಿದ್ದಕ್ಕಾಗಿ ಅವರೂ ಕೂಡ ಬಂದಿದ್ದಾರೆ, ಅದಕ್ಕಾಗಿ ನಾನು ಅವರಿಗೆ ಆಭಾರಿಯಾಗಿದ್ದೇನೆ. ಶ್ರೀ ಬೂಟಾಸಿಂಗ್‌ರವರ ಭೇಟಿಯ ಬಗ್ಗೆ ನಾನು ಹೇಳಿದ್ದೇನೆ.

ಶ್ರೀ ಕೆ. ಹೆಚ್. ಪಾಟೀಲ್,—ಮಾನ್ಯ ಸಭಾಧ್ಯಕ್ಷರೇ, ಶ್ರೀ ಎಸ್. ಆರ್. ಬೊಮ್ಮಾಯಿಯವರು ಇಡೀ ರಾಜ್ಯದಲ್ಲಿ ಬರಗಾಲ ಏನು ಉಂಟಾಗಿದೆ ಅನ್ನುವುದರ ಬಗ್ಗೆ ಒಂದು ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತರಲು ಓದಬಯಸುತ್ತೇನೆ. ಅದು ಈರೀತಿ ಇದೆ.—

' The Karnataka Minister for Revenue Mr. S. R. Bommai found that the Government officers at the taluka level had not bothered to comply with the Govt. Orders though it has been communicated to them. This has happened at Gadag when Mr. Bommai on his tour of the drought hit area was reviewing the relief works. The Assistant Commissioner of Gadag Sub-Division among some others were found not have compliance with his orders and Government Orders.'

ಇವೊತ್ತಿನದಿವಸ ನಾವು ಯಾರಿಗೂ ತಕರಾರು ಮಾಡಲಿಲ್ಲ. ಆರೀತಿ ಇದ್ದಿದ್ದರೆ ಮಾನ್ಯ ರಾಮಕೃಷ್ಣ ಹೆಗಡೆಯವರಿಗೇ ನಿಮ್ಮ ಸರ್ಕಾರದಿಂದ ಲೋಪವಾಗಿದೆಯೆಂದು ಹೇಳುತ್ತಿದ್ದೆವು. ಆದ್ದರಿಂದ ನಾನು ನಿಮಗೆ ನೇರವಾಗಿ ಹೇಳುತ್ತೇನೆ. ಅಸಿಸ್ಟೆಂಟ್ ಕಮಿಷನರ್ ಆರ್ಡರ್ ಮಾಡಲಿಲ್ಲ, ಡೆಲಿಬರೇಟ್ ಡಿಫೆಂಡ್ ಮಾಡಿ, ಒಳಗಿಂದೊಳಗೆ ಲಂಚ ತಿಂದಿದ್ದಾನೆ ಎಂದು ಗೊತ್ತಾದಾಗ ಅವನನ್ನು ಮನೆಗೆ ಕಳಿಸಲಿಕ್ಕೆ ಬರಲಿಲ್ಲವೇ, ಅವನನ್ನು ಸಸ್ಪೆಂಡ್ ಮಾಡಲಿಕ್ಕೆ ಬರಲಿಲ್ಲವೆ? ಯಾರಾದರೂ ಷೆಡ್ಯೂಲ್ಡ್ ಕ್ಯಾಸ್ಟ್ಸನವರು ಇದ್ದರೆ ಸಸ್ಪೆಂಡ್ ಮಾಡುತ್ತಿದ್ದೀರಿ. ಇವೊತ್ತು ಗದಗ್ ತಾಲ್ಲೂಕಿನಲ್ಲಿ ಒಂದೇ ಜಾತಿ ಜನರನ್ನು ತುಂಬಿ ಅವರು ಅನ್ಯಾಯಗಳನ್ನು ಮಾಡಿ, ಆ ಅನ್ಯಾಯಗಳನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡಿದರೆ, ನಿಮ್ಮಿಂದ ಬರಗಾಲ ಪರಿಹಾರವಾಗುತ್ತದೆಯೇ? ಆದ್ದರಿಂದ ನೇರವಾಗಿ ಬರಗಾಲವನ್ನು ನೀವೇ ನಿವಾರಣೆ ಮಾಡಲಿಕ್ಕೆ ಪ್ರಯತ್ನ ಮಾಡಿಕೊಳ್ಳಿರಿ ಎಂದು ಜನರಿಗೆ ಹೇಳಿದ್ದೇವೆ. ನೀವು ಗೋಶಾಲೆ ಮಾಡುವುದಕ್ಕೆ ಮೊದಲೇ ಜನರೇ ಕೂಡಿ ಗೋಶಾಲೆ ಮಾಡಿದರು. ಮಾನ್ಯ ರಾಮಕೃಷ್ಣ ಹೆಗಡೆಯವರು ಗದಗ್ ತಾಲ್ಲೂಕಿಗೆ ಬಂದಾಗ ಅವರಿಗೆ ಏನಾದರೂ ಲೋಪಮಾಡಿದರೆ? ರಾಮಕೃಷ್ಣ ಹೆಗಡೆಯವರು ಬಂದರೆ ನಮ್ಮ ಪಕ್ಷದವರು ದಾಂಧಲೆ ಮಾಡಿದರೆ, ಮಾನ್ಯ ರಾಮಕೃಷ್ಣ ಹೆಗಡೆಯವರು ಗದಗ್ ಸಿಟಿಗೆ ಬರದೆ ನೇರವಾಗಿ ಮುಂಡರಗಿಗೆ ಹೋಗಿದ್ದಾರೆ. ಅಲ್ಲಿಗೆ ಬರುತ್ತಾರೆ ಎಂದು ಟೆಲಿಗ್ರಾಂ ಬಂದಿದೆ. ನನಗೆ ಬರಲಿಕ್ಕೆ ಆಗಲಿಲ್ಲ, ಇಂತಿಂಥವರು ಹೋಗಿರಿ ಎಂದು ತಿಳಿಸಿದ್ದೆ, ಆ ಜನರು ಬಂದು ಹೀಗೀಗೆ ಆಗಿದೆ, ಇಷ್ಟು ರೊಕ್ಕ ತಿಂದಿದ್ದಾರೆ, ಇಷ್ಟು ರೊಕ್ಕ ಕೊಡಿರಿ ಎಂದು ಹೇಳುತ್ತಿದ್ದರು.

ಶ್ರೀ ರಾಮಕೃಷ್ಣ ಹೆಗಡೆ.—ಈಗತಾನೇ ಮಾನ್ಯ ಪಾಟೀಲರು ಹೇಳಿದ್ದರಲ್ಲಿ ಪೂರ್ಣವಾಗಿ ಸತ್ಯಾಂಶ ವಿಲ್ಲ ಎಂದು ಹೇಳಲಿಕ್ಕೆ ಬಯಸುತ್ತೇನೆ. ಆದು ಆದದ್ದು ಹೀಗೆ. ನಾನು ಗದಗ್‌ಗನ್ನು ಮುಟ್ಟಿದ್ದು ಸುಮಾರು ಮೂರುವರೆ ಗಂಟೆ ತಡವಾಗಿ. ಗದಗ್ ನಗರದಲ್ಲಿ ಯಾವುದೇ ಕಾರ್ಯಕ್ರಮ ಇರಲಿಲ್ಲ. ಅಲ್ಲಿಂದ ಮುಂಡರಗಿಗೆ ಹೋಗಿ ಅಲ್ಲಿ ನೋಡಿಕೊಂಡು ಹೋಗಬೇಕು ಎಂದು ಹೇಳಿದರು. ಅಲ್ಲಿಂದ ಮುಂದೆ ಶಿರಹಟ್ಟಿ, ಲಕ್ಷ್ಮೇಶ್ವರಕ್ಕೆ ಹೋದೆ. ಗದಗಿನಲ್ಲಿ ಉದ್ದಕ್ಕೂ ಜನ ನಿಂತಿದ್ದರು. ಆದರೆ ನನಗೆ ಪ್ರವಾಸಿ ಮಂದಿರಕ್ಕೆ ಹೋಗಲಿಕ್ಕೆ ಆಗಲಿಲ್ಲ. ಹಾವೇರಿಗೆ ಬಂದಮೇಲೆ ನನಗೆ ನಮ್ಮ ಆಫೀಸರ್ ಮುಖಾಂತರ ಗೊತ್ತಾಯಿತು, ಮಾನ್ಯ ಕೆ.ಹೆಚ್. ಪಾಟೀಲರು ಟಿ.ಬಿ.ಯಲ್ಲಿ ಕಾಯುತ್ತಿದ್ದರು ಎಂದು.

ಶ್ರೀ ಕೆ.ಹೆಚ್. ಪಾಟೀಲ್.—ನಾನು ಎಐಸಿಸಿ ಮೀಟಿಂಗ್ ತಪ್ಪಿಸಿ ಬರಬೇಕು ಎಂದು ಮಾಡಿದ್ದೆ.

ಶ್ರೀ ರಾಮಕೃಷ್ಣ ಹೆಗಡೆ.—ಆ ದಿವಸ ರಾತ್ರಿ ನಾನು ಶಿವಮೊಗ್ಗವನ್ನು ಮುಟ್ಟಲೇಬೇಕಾಗಿತ್ತು, ಮುಟ್ಟಿದ್ದು ಬೆಳಗಿನ ಝಾವ ಮೂರೂವರೆ ಘಂಟೆಯಲ್ಲಿ. ಮರುದಿವಸ ಕಾನ್‌ಫರೆನ್ಸ್ ಇತ್ತು, ಆದುದರಿಂದ ನಾನು ಗದಗ್ ನಗರಕ್ಕೆ ಹೋಗಲಿಕ್ಕೆ ಆಗಲಿಲ್ಲ. ಮಾನ್ಯ ಕೆ. ಹೆಚ್. ಪಾಟೀಲರು ಅಲ್ಲಿದ್ದಾರೆ ಎಂದು ತಿಳಿದು ಅಸಮಾಧಾನವಾಯಿತು. ಈ ಕಾರಣದಿಂದ ಬರಲಿಕ್ಕೆ ಆಗಲಿಲ್ಲ, ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ ಎಂದು ತಕ್ಷಣ ನಾನು ಅವರಿಗೆ ಟೆಲಿಗ್ರಾಂ ಕೊಟ್ಟಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.—ನಿಮ್ಮ ಹಿಂದೆ ಜನ ಯಾರು ಬಂದಿದ್ದರು ಎನ್ನುವುದು ನಮ್ಮ ಸಿಐಡಿಗಳಿಂದ ಗೊತ್ತಾಯಿತು ನಮ್ಮ ಕಡೆ ನಿಮ್ಮ ಸಿಐಡಿಗಳು ಇರಬಹುದು. ೪೯ ಲಕ್ಷ ಮಿಸ್ ಅಪ್ರೊಪ್ರಿಯೇಷನ್ ಮಾಡಿದವನು ನಿಮ್ಮ ರಕ್ಷಣೆಗೆ ಇದ್ದ. ಅಲ್ಲಿಗೆ ಹೋದರೆ ದಾಂಧಲೆ ಆಗುತ್ತದೆ ಎಂದು ಹೇಳಿರಬಹುದು. ಪ್ರೈಮ್‌ಮಿನಿಸ್ಟರ್ ಬಂದಾಗ ಎಷ್ಟು ಸತ್ಕಾರ ಇತ್ತೋ ನೀವು ಬಂದಾಗಲೂ ಅಷ್ಟೇ ಸತ್ಕಾರ ಇತ್ತು. ನಾನು ನಿಮ್ಮ ಮೇಲೆ ಅಪಾದನೆ ಮಾಡಲಿಕ್ಕೆ ತಯಾರಿಲ್ಲ. ಮಾನ್ಯ ಬೊಮ್ಮಾಯಿಯವರು, ಸಭೆ ಕರೆದಿದ್ದರೂ ಕೆ.ಹೆಚ್. ಪಾಟೀಲರು ಬರಲಿಲ್ಲ ಎಂದು ಹೇಳಿದರು. ನಾನು ಯಾರ ಹಿಂದುಮುಂದೂ ಅಡ್ಡಾಡಿಲ್ಲ, ಮಾನ್ಯ ನಿಜಲಿಂಗಪ್ಪನವರು ಇದ್ದಾಗಲೂ ಅಡ್ಡಾಡಿಲ್ಲ, ನೀವು ಮೀಟಿಂಗ್ ಕರೆದ ಬಗ್ಗೆ ನನಗೆ ನೋಟೀಸ್ ಬರದೆ ನಾನು ಹೇಗೆ ಬರಲಿ? ಕೆ. ಹೆಚ್. ಪಾಟೀಲರು ಬರಗಾಲದ ಮೀಟಿಂಗಿಗೆ ಬರಲಿಲ್ಲ ಎಂದರೆ ಜನರಿಗೆ ಏನು ಅಭಿಪ್ರಾಯ ಬರುತ್ತದೆ? ಎಂದರೆ ಕೆ.ಹೆಚ್. ಪಾಟೀಲರು ಎಂ. ಎಲ್. ಎ. ಆದರೂ ಸ್ವಂತ ಕರುಣೆ ಇಲ್ಲದೆ ಈರೀತಿ ಮಾಡಿದ್ದಾರೆ ಎನ್ನುವ ಅಪಾದನೆ ಬರುತ್ತದೆ. ಸುದೈವದಿಂದ ನಾನು ೨೦–೨೫ ಪುಟಗಳ ಸುದೀರ್ಘವಾದ ಟಿಪ್ಪಣಿಯನ್ನು ಬರೆದಿದ್ದೇನೆ, ಅದನ್ನು ತಮಗೂ ಕಳಿಸುತ್ತೇನೆ. ಅದನ್ನು ಅವರಿಗೆ ಕೊಟ್ಟಿದ್ದೇನೆ ಮಾನ್ಯ ಬೊಮ್ಮಾಯಿಯವರು ಡೆಪ್ಯುಟಿ ಕಮಿಷನರಿಗೆ ಕಳಿಸಿದರು. ಅವರು ಏನೇನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ಬರೆದಿದ್ದಾರೆ. ಮಾನ್ಯ ಬೊಮ್ಮಾಯಿಯವರು ಯಾವರೀತಿಯಾಗಿ ಮಾತುಗಳನ್ನು ಹೇಳುತ್ತಾರೆ ಎಂದು ಗೊತ್ತಾಯಿತು. ನಮ್ಮ

ಗದಗ್ ಕಾನ್‌ಸ್ಟಿಟ್ಯುಯನ್ಸಿಯೊಳಗೆ ೮೫ ಲಕ್ಷ ರೂಪಾಯಿಗಳು ಖರ್ಚಾಗಿದೆ ಎಂದು ಪೇಪರಿನಲ್ಲಿ ಹೇಳಿದ್ದಾರೆ. ಅವರ ಹೇಳಿಕೆಯೊಳಗೆ ೫೩-೫೬ ಲಕ್ಷ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆಕ್ಚುಯೆಲ್ಲಾಗಿ ೨ ಲಕ್ಷ, ೨೦ ಸಾವಿರದ ೩೩೯ ರೂಪಾಯಿಯಾಗಿದೆ, ಇದರಲ್ಲಿ ಸಾಯಿಲ್ ಕನ್ಸರ್ವೇಷನ್ ಕೂಡಿಲ್ಲ, ಎನ್‌ಆರ್‌ಇಪಿ ಎಲ್ಲಾ ಕೂಡಿ ಗದಗ್ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಇಷ್ಟಾಗಿದೆ. ಎಂದು ಹೇಳಬೇಕಾಗಿತ್ತು. ನಮ್ಮ ಗದಗ್ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಇಷ್ಟಾಗಿದೆ ಎಂದು ಹೇಳಿ ಬಿಟ್ಟರೆ, ನವಲಗುಂದದವರು ಇತರೆಯವರು ನಮಗೆ ಕಡಿಮೆಯಾಗಿದೆ ಎಂದು ಹೇಳುತ್ತಾರೆ.

ಎಸ್. ಆರ್. ಬೊಮ್ಮಾಯಿ.—ಗದಗ್ ತಾಲ್ಲೂಕ್.

ಶ್ರೀ ಕೆ. ಹೆಚ್. ಪಾಟೀಲ್.—ನನ್ನನ್ನು ಆರಿಸಿದಂಥ ನನ್ನ ಕಾನ್‌ಸ್ಟಿಟ್ಯೂಯನ್ಸಿ ಜನ ದುರ್ದೈವಿಗಳು. ಮಾನ್ಯ ಬೊಮ್ಮಾಯಿಯವರ ಜಾತಿಯವರು ಆರಿಸಿ ಬಂದಿದ್ದರೆ ಅವರಿಗೆ ಪ್ರಬಲವಾದಂಥ ಹಣ ಸಿಗುತ್ತಿತ್ತು. ೨ ಲಕ್ಷದ ೨೦ ಸಾವಿರ ರೂಪಾಯಿಗಳನ್ನು ಇಷ್ಟರವರೆಗೆ ಕೊಟ್ಟಂಥ ಜನರಿಂದ ನಿಜವಾಗಿಯೂ ಬರಗಾಲದ ಜನರನ್ನು ರಕ್ಷಣೆ ಮಾಡುವಂಥ ಕೆಲಸ ಆಗುತ್ತದೆಯೋ? ಈ ರಿಪೋರ್ಟುಗಳನ್ನು ನಂಬಲಿಕ್ಕೆ ಆಗುತ್ತದೆಯೋ? ಈ ರಿಪೋರ್ಟನ್ನು ಓದಿದರೆ ತಲೆಗೆ ಹೊರೆಯಾಗುತ್ತದೆ. ಶ್ರೀಮಂತಿ ನಾಗರತ್ನಮ್ಮನವರೂ ಕೂಡ ತಲೆ ಕೆಟ್ಟು ಹೋಗುತ್ತದೆ ಎಂದು ಹೇಳಿದ್ದಾರೆ. ಈ ರಿಪೋರ್ಟನ್ನು ಆಧರಿಸಿ ಸೆಂಟ್ರಲ್ ಗವರ್ನಮೆಂಟನ್ನು ಕೇಳಬೇಕು ಎಂದು ಇಷ್ಟೆಲ್ಲಾ ಹೇಳುತ್ತಾರೆ. ಆದರೆ ಬರಗಾಲದ ಬಗ್ಗೆ ಫ್ಯಾಮಿನ್ ಕೋಡ್ ಇಲ್ಲ ಎಂದು ಹೇಳುತ್ತಾರೆ. ನಾವು ಮಾನ್ಯ ಬೊಮ್ಮಾಯಿಯವರ ಕೈ ಬಲಪಡಿಸೋಣ. ಫ್ಯಾಮಿನ್ ಕೋಡನ್ನು ದುರಸ್ತಿ ಮಾಡಲಿಕ್ಕೆ ಆಗಲಿಲ್ಲ, ವಿಶ್ವಕನ್ನಡ ಸಮ್ಮೇಳನ ಮಾಡುವವರು ಇವತ್ತಿನ ದಿವಸ ಆ ಒಂದು ಕಾನೂನನ್ನು ಮಾಡಲಿಕ್ಕೆ ಆಗಲಿಲ್ಲ. ಮಾನ್ಯ ಖರ್ಗೆಯವರು ಮಂತ್ರಿಗಳಾಗಿದ್ದಾಗ ಒಂದು ಫಾಮಿನ್ ಕೋಡನ್ನು ತಯಾರು ಮಾಡಿದ್ದಾರೆ. ಅದಕ್ಕೆ ರೂಪುರೇಷೆಗಳನ್ನು ಮಾಡಿ ಆರ್ಡಿನೆನ್ಸ್ ತೆಗೆದುಕೊಂಡು ಬನ್ನಿ. ಫ್ಯಾಮಿನ್ ಕೋಡನ್ನು ಡಿಕ್ಲೇರ್ ಮಾಡದೆ ಇದು ಆಗುವುದಿಲ್ಲ. ಇವರ ಹೇಳಿಕೆ ಪ್ರಕಾರ ಇಷ್ಟು ಹೇಳಿದ್ದಾರೆ. ಜನರ ಹೇಳಿಕೆ ಪ್ರಕಾರ ಬಹಳ ಇದೆ ಇವರು ಲ್ಯಾಂಡರೆವಿನ್ಯೂ ಸಸ್ಪೆನ್‌ಷನ್ ಮಾಡಿದ್ದಾರೆ, ರಮಿಷನ್ ಮಾಡಬೇಕು. ಕೆಲವು ಕಡೆ ಸಸ್‌ಪೆನ್‌ಷನ್ ಮಾಡಿದ್ದಾರೆ, ಕೆಲವು ಕಡೆ ರೆಮಿಷನ್ ಮಾಡಿದ್ದಾರೆ. ಇದಕ್ಕೆ ಕಾರಣವೇನೋ ಗೊತ್ತಿಲ್ಲ. ಕೇಂದ್ರಸರ್ಕಾರದವರು ಹಿಂದೆಂದೂ ಕೊಟ್ಟಿರಲಿಲ್ಲ ಅಷ್ಟು ಹಣವನ್ನು ಇವತ್ತಿನದಿವಸ ಇವರಿಗೆ ಕೊಟ್ಟಿದ್ದಾರೆ. ಫುಡ್ ಗ್ರೈನ್ಸ್ ಕಡಿಮೆಯಾಯಿತು ಎಂದು ಪ್ರಚಾರ ಮಾಡುತ್ತೀರಿ. ನಿಮ್ಮ ಸ್ಟೇಟಿಗೆ ಎಷ್ಟು ಟನ್ ಬೇಕಾದರೂ ಕೊಡುತ್ತೇವೆ, ರಿಸೋರ್ಸಸ್ ಉಪಯೋಗ ಮಾಡಿಕೊಳ್ಳಿರಿ ಎಂದು ಅವರು ಹೇಳಿದ್ದಾರೆ.

೪-೩೦ ಪಿ. ಎಂ.

ಈಗ ಗೋಧಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ, ಎಲ್ಲದನ್ನೂ ಉಪಯೋಗ ಮಾಡಿಕೊಳ್ಳಿ. ಯಾವ ದೃಷ್ಟಿಯಿಂದ ಹಣ ಬೇಕು ಅದನ್ನು ತಿಳಿಸಿ. ತಾವು ಹಣ ಕೊಡುವಾಗ ವಿರೋಧ ಪಕ್ಷದವರಿಗೆ ಹೆಚ್ಚು ಮಾಡಿಕೊಡಿ ಎಂದು ಹೇಳುವುದಿಲ್ಲ. ಆಡಳಿತ ಪಕ್ಷದ ಸದಸ್ಯರ ಕಾನ್‌ಸ್ಟಿಟ್ಯೂಯೆನ್ಸಿಗೆ ಏನು ಹಣ ಖರ್ಚು ಮಾಡುತ್ತೀರಿ ಅಷ್ಟೇ ಹಣ ವಿರೋಧ ಪಕ್ಷದ ಸದಸ್ಯರ ಕಾನ್‌ಸ್ಟಿಟ್ಯೂಯೆನ್ಸಿಯಲ್ಲೂ ಖರ್ಚು ಮಾಡಿ ರಾಜ್ಯದಲ್ಲಿ ಬರ ಬಿದ್ದಿರುವಾಗ ಜನತೆ ಕಂಗಾಲುಮಯವಾಗಿರುವಾಗ ಅವರನ್ನು ಮೇಲೆ ಎತ್ತುವುದು ನಮ್ಮ ಕರ್ತವ್ಯ. ನಿಮಗೆ ಕೀರ್ತಿ ಬಂದರೆ ಏನು, ನಮಗೆ ಕೀರ್ತಿ ಬಂದರೆ ಏನು ಜನರನ್ನು ಉಳಿಸೋಣ ಎನ್ನುವ ದೃಷ್ಟಿಯಿಂದ ಕಾಂಗ್ರೆಸ್‌ನಲ್ಲೂ ಕೆಲಸ ಮಾಡುತ್ತಿದ್ದಾರೆ. ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಈ ವಿಷಯದಲ್ಲಿ ನಮ್ಮ ರಾಮಕೃಷ್ಣ ಹೆಗಡೆಯವರ ಸರ್ಕಾರಕ್ಕೆ ಸಂಪೂರ್ಣವಾದಂಥ ಬೆಂಬಲವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಹಾಗೆಯೇ ನಮ್ಮ ರಾಜ್ಯಕ್ಕೆ ಹೊಸದಾಗಿ ಅಧ್ಯಕ್ಷರಾಗಿರತಕ್ಕ ಶ್ರೀಮಾನ್ ಆಸ್ಕರ್ ಫರ್ನಾಂಡೀಸ್ ಅವರು ಸಹ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಕೈಗೊಳ್ಳತಕ್ಕ ಜನಹಿತ ಕಾರ್ಯಕ್ರಮಗಳಿಗೆ ನಮ್ಮ ಸಂಪೂರ್ಣ ಬೆಂಬಲ ಇದೆ ಎನ್ನುವುದನ್ನು ಹೇಳಿದ್ದಾರೆ. ನಿಮಗೆ ಸಹಕಾರದ ಬಗ್ಗೆ. ನಮ್ಮ ನಿರ್ದಿಷ್ಟ ನಿಲುವೆಯನ್ನು ಒಕ್ಕೊರಲಿನಿಂದ ಹೇಳುತ್ತಿದ್ದೇವೆ. ತಪ್ಪು ಮಾಡಿದಂಥ ಸಂದರ್ಭದಲ್ಲಿ ನೀವು ಬೈಸಿಕೊಳ್ಳುವುದಕ್ಕೆ ಇರುವುದು, ನಾವು ಬಯ್ಯುವುದಕ್ಕೆ ಇಲ್ಲಿ ಇರುವುದು, ನೀವು ಒಳ್ಳೆಯ ಕೆಲಸ ಮಾಡಿದ್ದೇ ಆದರೆ ಹೂವಿನ ಮಾಲೆ ನಾವು ಹಾಕಲಿಕ್ಕೂ ತಯಾರಿದ್ದೇವೆ. ಈ ವಿಷಯವನ್ನು ನಾನು ಮಾನ್ಯ ಹೆಗಡೆಯವರಿಗೆ ವಿನಯಪೂರ್ವಕವಾಗಿ ಹೇಳುತ್ತೇನೆ. ಇವತ್ತು ಗದಗ್

ತಾಲೂಕ್ ತಹಶೀಲ್ದಾರ್ ಅವರಿಗೆ ಮಾನ್ಯ ಬಸವಣ್ಣೆಪ್ಪನವರು ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೆ, ಧಾರವಾಡದ ಡೆಪ್ಯುಟಿ ಕಮಿಷನರ್ ಆಫೀಸಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೆ. ನಿಮ್ಮ ಇನ್‌ಸ್ಟ್ರಕ್ಷನ್ ಯಾರು ಕೇಳುತ್ತಾರೆ ? ನೀವು ತಹಶೀಲ್ದಾರ್ ಅವರ ಮೇಲೆ, ಬಿ.ಡಿ.ಓ. ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಅವರ ಮೇಲೆ ಏನಾದರೂ ನೀವು ಕ್ರಮ ತೆಗೆದುಕೊಳ್ಳುವುದಾದರೆ, ನೀವೆ ಮನೆಗೆ ಹೋಗುತ್ತೀರಿ. ಅವರು ಬಹಳ ಸ್ಥಿತಿವಂತರಾಗಿದ್ದಾರೆ. ಈ ದೃಷ್ಟಿಯಿಂದ ಶ್ರೀಮಾನ್ ಬೊಮ್ಮಾಯಿಯವರು ಎಲ್ಲಿಯವರೆಗೆ ಇರುತ್ತಾರೆ, ಅಲ್ಲಿಯವರೆಗೆ ನಿರತಂಕವಾಗಿ ಆ ಕೆಲಸ ನಡೆಯುತ್ತದೆ ನಾನು ಮಾನ್ಯ ಬೊಮ್ಮಾಯಿಯವರಿಗೆ ಈ ಖಾತೆಯನ್ನು ಬದಲಾವಣೆ ಮಾಡಿ ಎಂದು ಹೇಳಿದರೂ ಮಾನ್ಯ ಮುಖ್ಯ ಮಂತ್ರಿಗಳು ಕಿವಿಗೆ ಹಾಕಿಕೊಳ್ಳಲಿಲ್ಲ. ನಾನು ಬೇಕಾದರೆ ಏನಾಗಿದೆ ಎನ್ನುವುದನ್ನು ಪ್ರೂವ್ ಮಾಡಿ ತೋರಿಸುತ್ತೇನೆ ತಾವು ಲೋಕಾಯುಕ್ತಕ್ಕೆ ಹೋಗಿ ಎಂದು ಹೇಳಬಹುದು. ನಮಗೆ ಉದ್ಯೋಗ ಇದೆ, ಅಲ್ಲಿ ಹೋಗಿ ಕೊಡಲಿಕ್ಕೆ ನಾವು ತಯಾರಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಮಗನ ಮೇಲೆ ಎನ್‌ಕ್ವೈಯರಿ ಕಮಿಷನ್ ಮಾಡಿದರು ಅದಕ್ಕೆ ನನಗೆ ಸಮ್ಮತಿ ಇಲ್ಲ. ತಾವು ಬೊಮ್ಮಾಯಿಯವರ ಮೇಲೆ ಎನ್‌ಕ್ವಯರಿ ಕಮಿಷನ್ ಮಾಡಿ, ತಾವು ರಾಜಕೀಯ ನಾಟಕ ಮಾಡುತ್ತೀರಿ. ಮೆಡಿಕಲ್ ಕಾಲೇಜು ಸೀಟು ಕೊಟ್ಟಿದ್ದಕ್ಕೆ ಎನ್‌ಕ್ವಯರಿ ಕಮಿಷನ್ ಮಾಡಿದಿರಿ. ಅದೇ ರೀತಿ ಬೊಮ್ಮಾಯಿಯವರ ಮೇಲೆ ಎನ್‌ಕ್ವಯರಿ ಕಮಿಷನ್ ಮಾಡಿ. ಇದನ್ನು ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಮಾನ್ಯ ಕೆ. ಹೆಚ್. ಪಾಟೀಲ್‌ರವರು ನನ್ನ ಮೇಲೆ ಎನ್‌ಕ್ವಯರಿ ಮಾಡಲಿಕ್ಕೆ ಕೇಳಿಕೊಂಡಿದ್ದಾರೆ. ಅವರ ಚಾರ್ಜಸ್ ಇವತ್ತೇ ಕೊಡಲಿ, ನಾಳೆ ಕೊಡಲಿ, ಮುಖ್ಯಮಂತ್ರಿಗಳು ಯಾವ ಎನ್‌ಕ್ವಯರಿ ಮಾಡಿದರೂ ಅದರ ಬಗ್ಗೆ ಸಿದ್ಧನಿದ್ದೇನೆ. ಅವರು ಮೊಗಮ್ ಆಗಿ, ಚಾರ್ಜ್ ಹೇಳದೇ ಇದ್ದರೆ ಸಾರ್ವಜನಿಕರಲ್ಲಿ ತಪ್ಪು ಅಭಿಪ್ರಾಯ ಮೂಡುತ್ತದೆ. ಅವರು ನಾವು ಸಾರ್ವಜನಿಕರ ಸೇವೆಯಲ್ಲಿದ್ದೇವೆ. ಇಂತಿಂಥ ಚಾರ್ಜಸ್ ಇದೆ ಎಂದು ಈ ಮನೆಯ ಮುಂದೆ ಅವರು ಇಡಲಿ, ಈ ಸಭೆಗೆ ಗೊತ್ತಾಗಲಿ, ಕರ್ನಾಟಕ ರಾಜ್ಯದ ಜನತೆಗೆ ಅದು ಗೊತ್ತಾಗಲಿ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನಾಳೆಯೇ ಆಜ್ಞೆ ಮಾಡಲಿ, ನಾನು ಶಿರಸಾ ವಹಿಸಿ ಅದನ್ನು ಎದುರಿಸಲಿಕ್ಕೆ ಸಿದ್ಧನಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಸನ್ಮಾನ್ಯ ಅಧ್ಯಕ್ಷರೆ, ಆಪಾದನೆ ವಿಚಾರದಲ್ಲಿ ಎನ್‌ಕ್ವಯರಿ ಕಮಿಷನ್ ಮಾಡತಕ್ಕಂಥ ಕಾಲ ಈಗ ಮುಗಿದು ಹೋಯಿತು. ಏಕೆಂದರೆ ಲೋಕಾಯುಕ್ತ ನೇಮಕವಾಗಿದೆ. ಯಾವುದೇ ತರಹದ ಆಪಾದನೆ ಇದ್ದರೂ ಅದು ಅಪ್ರಾಮಾಣಿಕತೆಯಿಂದ ಇರಲಿ, ದುಡ್ಡು ತಿಂದಿರುವುದು ಇರಲಿ, ಇನ್ನು ಮುಂದೆ ಅದು ಲೋಕಾಯುಕ್ತದ ಮುಂದೆ ಹೋಗಲಿ, ಅಷ್ಟೆ.

ಶ್ರೀ ಕೆ. ಹೆಚ್. ಪಾಟೀಲ್.—ಅಧ್ಯಕ್ಷರೆ, ನಾನು ಅವರ ಮೇಲೆ ಎನ್‌ಕ್ವಯರಿ ಕಮಿಷನ್ ಮಾಡಿಸಬೇಕೆಂದು ಇಲ್ಲ. ಮಾನ್ಯ ಬೊಮ್ಮಾಯಿಯವರು ಸುಖಿಯಾಗಿ ಆಗಬೇಕು, ಪ್ರಾಮಾಣಿಕರು ಆಗಬೇಕು. ಪ್ರಾಮಾಣಿಕತೆ ಎಂದರೆ ಏನು, ಇಷ್ಟು ಕೊಡುವುದು, ಇಷ್ಟು ತೆಗೆದುಕೊಳುವಂಥಾದ್ದು ಅಲ್ಲ. ಇವೊತ್ತು ಒಬ್ಬ ಪೋಲೀಸಿನವನು ಒಂದು ಸೈಕಲ್ ಮೋಟಾರ್ ಹಿಡಿದುಬಿಟ್ಟರೆ ಇಷ್ಟು ಬೇಕು ಎಂದು ಹೇಳುವುದು ಅಲ್ಲ. ನಿಮ್ಮ ಸರ್ಕಾರದ ಮಾತು ಕೇಳದೆ ಇರತಕ್ಕ ಅಧಿಕಾರಿಗಳು ಕಂಡುಬಂದರೆ ನಿಮ್ಮ ಯಾವ ಮಿನಿಸ್ಟ್ರಿ ಇದ್ದು ಏನು ? ಕೇಂದ್ರ ಸರ್ಕಾರದ ಹಣ ಕೊಟ್ಟರೆ, ಅದು ಸದುಪಯೋಗ ವಾಗುತ್ತದೆ ಎಂದು ಯಾವ ರೀತಿ ನಂಬಬೇಕು ? ಅಂತಹ ಅಧಿಕಾರಿಗಳ ಬಗ್ಗೆ ನೀವು ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಎಸ್ ಆರ್. ಬೊಮ್ಮಾಯಿ.—ನಮ್ಮ ಸರ್ಕಾರದ ಆಜ್ಞೆ ಪ್ರಕಾರ ಈ ಬರಗಾಲ ಕಾಮಗಾರಿ ಗಳನ್ನು ಯಾವ ಯಾವ ಗ್ರಾಮದಲ್ಲಿ ಯಾವ ಯಾವ ತರಹದಲ್ಲಿ ತೆಗೆದುಕೊಳ್ಳಬೇಕೆಂಬ ವಿಚಾರವನ್ನು ಬಿ.ಡಿ.ಓ. ಆಫೀಸಿನ ಪಬ್ಲಿಕ್ ನೋಟೀಸ್‌ನಲ್ಲಿ, ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಾಕಬೇಕೆಂದು ಆಜ್ಞೆ ಮಾಡಿದ್ದೇವೆ. ಗದಗ್‌ನಲ್ಲಿ ಸಭೆ ನಡೆಸಿದಾಗ ಕೇಳಿದೆ. ಬಿ.ಡಿ.ಓ. ಆಫೀಸಿನಲ್ಲಿ ಹಾಕದೇ ಇರುವಂಥಾದ್ದು ಹೇಳಿದರು. ಕೂಡಲೇ ನಾನು ಆಜ್ಞೆ ಮಾಡಿದ್ದೇನೆ. ಅಲ್ಲಿ ಷೋಕಾಸ್ ನೋಟೀಸ್ ಕೊಟ್ಟು ರಿಪೋರ್ಟ್ ಕೊಡಲಿಕ್ಕೆ ಹೇಳಿದ್ದೇನೆ. ರಿಪೋರ್ಟ್ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಯಾವುದೇ ವಿಚಾರ ಹೇಳಿದರೂ ವಿರೋಧ ಪಕ್ಷದವರು ಹೇಳಿದ್ದಾರೆಂದು ಹೇಳುತ್ತಾರೆ. ನನ್ನ ಕಾನ್‌ಸ್ಟಿಟ್ಯೂಯೆನ್ಸಿಗೆ ೨ ಲಕ್ಷದ ೨೦ ಸಾವಿರ ರೂಪಾಯಿಗಳನ್ನು

ಖರ್ಚು ಮಾಡಿ ಮಹದುಪಕಾರ ಮಾಡಿದ್ದಾರೆ. ಅದೇ ಪ್ರಕಾರ ಚೀಫ್ ಮಿನಿಸ್ಟರ್ ರಿಲೀಫ್ ಫಂಡ್‌ಗೆ ೧೦ ಲಕ್ಷ ರೂಪಾಯಿಗಳು ಮಾರ್ಕೆಟ್ ಕಮಿಟಿಯಿಂದ ಕೊಟ್ಟಿದ್ದೇವೆ. ಅದೇ ರೀತಿ ಉಳಿದ ಸಂಸ್ಥೆಗಳಿಗೆ ಮ್ಯಾಕ್ಸಿಮಂ ಕೊಡಲಿಕ್ಕೆ ಹೇಳಿದ್ದೇವೆ. ಜನರಿಗೂ ಸಹ ಕೊಡಲಿಕ್ಕೆ ಹೇಳಿದ್ದೇವೆ. ಇಷ್ಟು ಕಳಕಳಿಯಿಂದ ಸಹಾಯವನ್ನು ನಾವು ಮಾಡುತ್ತಿದ್ದೇವೆ. ಅದರ ಬಗ್ಗೆ ಮಾನ್ಯ ದೊಡ್ಡಮೇಟಿಯವರನ್ನೇ ತಾವು ಕೇಳಿ ತಿಳಿದುಕೊಳ್ಳಬಹುದು. ಇಷ್ಟಾದರೂ ಸಹ ಯಾವ ಯಾವ ಕೆಲಸಗಳು ಎಲ್ಲೆಲ್ಲಿ ನಡೆಯುತ್ತಿವೆ ಅಲ್ಲಿ ಜನರಿಗೆ ಸರಿಯಾಗಿ ಪಗಾರ ಕೊಡುತ್ತಿದ್ದಾರೆಯೇ ಎಂದರೆ ೧೫ ದಿವಸದ ಮೇಲೆ ಕೊಡತಕ್ಕದ್ದು ನಡೆಯುತ್ತಿದೆ. ಇದರ ಬಗ್ಗೆ ನಾವು ಹೇಳಿದರೆ ಯಾರೋ ಇಂಜಿನಿಯರ್ ಸಸ್ಪೆಂಡ್ ಮಾಡುತ್ತಾರೆಯೆ ಅವನು ಏನು ಮಾಡಬೇಕು ? ಅವನಿಗೆ ದೇವೇಗೌಡರ ಭಯ. ನಿಜವಾಗಿ ಎಲ್ಲಿ ಮುಖಭಲೂತವಾಗಿ ಕರಪ್ಷನ್ ನಡೆಯುತ್ತಿದೆ ಅದರ ಬಗ್ಗೆ ಹುಡುಕಿ ತೆಗೆಯುವುದು ಮಾನ್ಯ ಹೆಗಡೆಯವರ ಕರ್ತವ್ಯ. ಅದರ ಬಗ್ಗೆ ಲೋಕಾಯುಕ್ತ ಎಂದರೆ ಆಗುವುದಿಲ್ಲ. ಈ ರಿಪೋರ್ಟಿನ ಅಂಕಿ ಸಂಖ್ಯೆಗಳನ್ನು ನಂಬುವುದಕ್ಕೆ ಸಾಧ್ಯವಿಲ್ಲ, ಬರಗಾಲಕ್ಕೆ ನೇಮಿಸಿದಂಥ ಅಧಿಕಾರಿಗಳು ಕರ್ತವ್ಯಶೀಲಿಗಳಿದ್ದಾರೆ. ಪ್ರಾಮಾಣಿಕರಾಗಿದ್ದಾರೆ. ಅಂಕಿಸಂಖ್ಯೆ ಟ್ವಿಸ್ಟ್ ಮಾಡತಕ್ಕ ರೀತಿಯಲ್ಲಿರುವುದರಿಂದ ಏನೇನು ಸಾಧನೆಯಾಗಿದೆಯೋ ಗೊತ್ತಿಲ್ಲ. ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸುವುದು ಅಗತ್ಯ ಇದೆ. ಇವೊತ್ತಿನ ದಿವಸ ಒಂದು ಪಂಚಾಯ್ತಿಗೆ ಎರಡು ಕೆಲಸಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದಿರಿ. ಅದರ ಪ್ರಕಾರ ನೀವು ಸರ್ಕ್ಯುಲರ್ ಸಹ ಕೊಟ್ಟಿದ್ದೀರಿ ಆದರೆ ಯಾವ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿಯೂ ಸಹ ಒಂದು ಪಂಚಾಯಿತಿಗೆ ಎರಡು ಕೆಲಸ ಕೊಟ್ಟು ಮಾಡಿರುವುದು ಗೊತ್ತಿಲ್ಲ. ಆಯಾ ಪಂಚಾಯಿತಿಯಲ್ಲಿರತಕ್ಕ ಗುಮಾಸ್ತರು, ಸೆಕ್ರೆಟರಿಗಳು ಇವರೆಲ್ಲಾ ನಮ್ಮ ಊರಿನಲ್ಲಿ ಯಾವ ಕೆಲಸವೂ ಇಲ್ಲ ಎಂದು ಬರೆದುಕೊಟ್ಟಿದ್ದಾರೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ತಮ್ಮಲ್ಲಿ ಹಣ ಇಲ್ಲ ಎಂದು ಹೇಳಿ. ಹಣ ಇದ್ದರೆ ಬೇರೆಯದಕ್ಕೆ ಉಪಯೋಗ ಮಾಡಿಕೊಳ್ಳಬಹುದು. ತಾವು ಹಣ ಒದಗಿಸದೇ ಇದ್ದರೆ ನಾವು ಜನರ ಮುಂದೆ ಹೋಗಿ ನಿಂತುಕೊಂಡು ಏನು ಮಾಡಬೇಕು ನಾವು ಏನು. ಮಾಡಲಿಕ್ಕೆ ಸಾಧ್ಯವಿದೆ ? ಈಗ ನೀವು ಫುಡ್‌ಗ್ರೈನ್ಸ್ ಕೊಡುತ್ತೀರಿ. ನೀವು ತಹಶೀಲ್ದಾರ್‌ರವರಿಗೆ ಕೊಟ್ಟರೆ ಅವನು ಎಲ್ಲಾ ಫುಡ್‌ಗ್ರೈನ್ಸ್ ಕೊಟ್ಟಿದ್ದೇನೆಂದು ಬರೆದುಕೊಳ್ಳುತ್ತಾನೆ. ಸಕ್ಕರೆ ಕೊಟ್ಟರೆ ಅದನ್ನು ಸಹಾ ಕೊಟ್ಟಿದ್ದೇನೆಂದು ಬರೆದುಕೊಂಡು ಚಹಾ ಅಂಗಡಿಗೆ ಮಾರುತ್ತಾನೆ. ಅವನಿಗೆ ನೀವು ಏನು ಮಾಡುತ್ತೀರಿ ? ಇವೆಲ್ಲಾ ವಿಚಾರಗಳ ಬಗ್ಗೆ ಸೂಕ್ಷ್ಮವಾಗಿ ಆಲೋಚನೆ ಮಾಡಬೇಕು. ಧಾರವಾಡದಲ್ಲಿ ಮೂರು ಜನ ಜಿಲ್ಲಾಧಿಕಾರಿಗಳು ಬಹಳ ಚಲೋ ಇದ್ದಾರೆ. ಮಾನ್ಯ ಬೊಮ್ಮಾಯಿಯವರು ಹೇಳಿದ ಹಾಗೆ, ಅಸಿಸ್ಟೆಂಟ್ ಕಮಿಷನರ್ ತಹಶೀಲ್ದಾರ್ ಅವರು ಏನಿದ್ದಾರೆ ಅವರ ಬಗ್ಗೆ ವಿಚಾರ ಮಾಡಬೇಕು, ಈಗ ಹೆಗ್ಗಡೆಯವರು ಬೊಮ್ಮಾಯಿಯವರನ್ನು ಬಿಟ್ಟು ಯಾವಗಲ್ ನೇಮಿಸಿರುವುದು ರಾಮಕೃಷ್ಣ ಹೆಗಡೆಯವರ ಮುತ್ಸದ್ದಿತನ ಎನ್ನುವುದಕ್ಕೆ ಇದೊಂದು ಉದಾಹರಣೆ.

ಸಣ್ಣ ಹುಡುಗನನ್ನು ನೇಮಿಸಿದರೆ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ರಾಮಕೃಷ್ಣ ಹೆಗಡೆಯವರು, ಯಾವಗಲ್‌ರನ್ನು ನೇಮಿಸಿಲ್ಲ. ಇದಕ್ಕೆಲ್ಲಾ ಅನ್ವರ್ಥ ಮಾಡುವುದು ಸರಿಯಲ್ಲ.

ಶ್ರೀ ಕೆ. ಎಚ್. ಪಾಟೀಲ್.—ತಾವು ನೇಮಿಸಿದ್ದರೆ ಸಂತೋಷ. ಏತಕ್ಕೆ ನೇಮಿಸಿದಿರಿ ? ಒಂದು ತಿಂಗಳಲ್ಲಿ ೨೦ ದಿವಸ ಹುಬ್ಬಳ್ಳಿಯಲ್ಲಿಯೇ ಇರುವಂಥ ಬೊಮ್ಮಾಯಿಯವರು ಯಾವಗಲ್‌ರವರನ್ನು ನೇಮಿಸುವಂಥ ಪರಿಸ್ಥಿತಿ ಏತಕ್ಕೆ ಬಂತು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಪಾಟೀಲರ ಭಾಷಣಕ್ಕೆ ಪದೇ ಪದೇ ತಡೆ ಮಾಡುವ ಇಚ್ಛೆ ನನಗೆ ಇಲ್ಲ. ನಾನು ಇಡೀ ರಾಜ್ಯದ ತುಂಬಾ ಪ್ರವಾಸ ಮಾಡಬೇಕಾದ ಪರಿಸ್ಥಿತಿ ಇದ್ದುದರಿಂದ ಜಿಲ್ಲೆಯ ಉಸ್ತುವಾರಿಗಾಗಿ ಅವರನ್ನು ಮಾಡಲಾಗಿದೆ. ನಾನು ಕಳೆದ ಮೂರು ತಿಂಗಳಲ್ಲಿ ಮೂರು ಸಾರಿ ಮಾತ್ರ ಹುಬ್ಬಳ್ಳಿಗೆ ಹೋಗಿದ್ದೇನೆ. ಬೇರೆ ಬೇರೆ ಜಿಲ್ಲೆಗಳಿಗೂ ಹೋಗಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಹುಬ್ಬಳ್ಳಿಗೆ ಹೋಗದಿದ್ದರೆ ಬಹಳ ಕ್ಷೇಮ ಎನ್ನುವಂಥ ಮಾತನ್ನು ಪಾಟೀಲರು ಆಡಿದ್ದಾರೆ,

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಕೆ. ಎಚ್. ಪಾಟೀಲರು. ಚುನಾವಣೆಯಾದ ಮೇಲೆ ಎಂಟು ತಿಂಗಳವರೆಗೆ ಗದಗ ಕ್ಷೇತ್ರಕ್ಕೆ ಬಂದಿರಲಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಬೊಮ್ಮಾಯಿಯವರಿಗೆ ಕೆ ಎಚ್. ಪಾಟೀಲರ ಯೋಗ್ಯತೆ ಮತ್ತು ಮಹತ್ವ ಇನ್ನೂ ಗೊತ್ತಾಗಿಲ್ಲ. ಗದಗಿಗೆ ಹೋಗದೆ ಆರಿಸಿ ಬರುತ್ತೇನೆ. ಹುಬ್ಬಳ್ಳಿಗೂ ಬರುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಗತ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಬೊಮ್ಮಾಯಿಯವರ ಮನಸ್ಸನ್ನು ನೋಯಿಸಬೇಕಾಗಿಲ್ಲ. ಪತ್ರಿಕೆಗಳಿಗೆ ಸುಳ್ಳು ಹೇಳಿಕೆ ಕೊಟ್ಟಿದ್ದಾರೆ. ಬರಗಾಲದ ವಿಚಾರದಲ್ಲಿ ಕೋಲಾರ ಬಿಜಾಪುರ ಇನ್ನಿತರ ಜಿಲ್ಲೆಗಳ ಬಗ್ಗೆ ಹೇಳಿದ್ದಾರೆ. ಬೀದರ್‌ಗೆ ಎಂದೂ ಬರದಂಥ ಬರ ಬಂದಿದೆ ಎಂದು ಹೇಳಿದ್ದಾರೆ. ಬರಗಾಲ ಪ್ರದೇಶಗಳಲ್ಲಿ ಜಾನುವಾರುಗಳು ಸಾಯುತ್ತಿವೆ. ಕ್ಯಾಟಲ್ ಪ್ರೊಟೆಕ್ಷನ್ ಆಕ್ಟ್ ಮಾಡಲಿಕ್ಕೆ ನಿಮ್ಮಿಂದ ಆಗಿಲ್ಲ. ಜಾನುವಾರುಗಳು ಇವರ ಎದುರಿಗೆ ಸಾಯಬೇಕೆಂದು ಕಾಣುತ್ತದೆ. ರೈತರ ಮನೆಯಲ್ಲಿ ದನಕರುಗಳು ಸಾಯುತ್ತಿವೆ.

ಶ್ರೀ ಎಸ್. ಬಂಗಾರಪ್ಪ.— ಮನೆಯಲ್ಲಿ ಸಾಯುವ ಬದಲು ಗೋಶಾಲೆಗಳಲ್ಲಿ ಸಾಯುತ್ತಿವೆ.

ಶ್ರೀ ಕೆ. ಎಚ್. ಪಾಟೀಲ್.— ಒಬ್ಬ ರೈತ ತನ್ನ ಮನೆಯಲ್ಲಿ ದನಗಳಿಗೆ ಹಾಕಲಿಕ್ಕೆ ಮೇವು ಇಲ್ಲದ ಕಾರಣ ಆ ದನವನ್ನು ಕಾಡಿಗೆ ಬಿಟ್ಟು ಬಂದ. ಅದು ಮತ್ತೆ ತನ್ನ ಒಡೆಯನ ಮನೆಗೆ ಬಂದಾಗ ಅದನ್ನು ನೋಡಿ ಆತ ಉರುಲು ಹಾಕಿಕೊಂಡು ಸತ್ತು ಹೋದದ್ದು ಕೂಡ ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ ಇಂಥ ಒಂದು ಗಂಭೀರವಾದಂಥ ಪರಿಸ್ಥಿತಿ ಇರುವಾಗ ಮಾನ್ಯ ಮುಖ್ಯ ಮಂತ್ರಿಯವರು ಬೊಮ್ಮಾಯಿಯವರು ಕೇಂದ್ರದೊಡನೆ ಮಾತುಕತೆ ನಡೆಸಿ ಅವರ ಮನಸ್ಸನ್ನು ಪರಿವರ್ತಿಸಿ ಕೇಂದ್ರದ ಸಹಾಯವನ್ನು ತೀವ್ರವಾಗಿ ತರಿಸುವಂಥ ವ್ಯವಸ್ಥೆ ಮಾಡಬೇಕು. ಬರಗಾಲಕ್ಕೆ ತುತ್ತಾಗಿರುವ ಜನ ಜಾನುವಾರುಗಳನ್ನು ಪಾರು ಮಾಡುವ ದಿಸೆಯಲ್ಲಿ ಪಕ್ಷ ಭೇದವಿಲ್ಲದೆ ನಾವು ಸಹಾಯ ಮಾಡುತ್ತೇವೆಂದು ಈ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದರೆ ತಾವು ಮಾತ್ರ ಜನತೆಯ ಅಹಿತವನ್ನು ಮಾಡಿದ್ದೀರೆಂದು ಹೇಳುತ್ತೇನೆ. ಎಲ್ಲೆಲ್ಲಿ ಕೆಲಸಗಳಾಗಬೇಕು ಅಲ್ಲಿ ಮಾಡಿಲ್ಲ. ಭೂ ಸಾರ ಸಂರಕ್ಷಣೆ ಕೆಲಸವನ್ನು ಮಾಡುವುದರಿಂದ ಉತ್ಪಾದನಾ ಶಕ್ತಿ ಹೆಚ್ಚಾಗುತ್ತದೆ. ಆದರೆ ಅದರ ಕಡೆಗೆ ತಾವು ಗಮನ ಕೊಟ್ಟಿಲ್ಲ. ಕೆರೆ ಕುಂಟೆಗಳ ವಿಚಾರದಲ್ಲಿ ಲಕ್ಷ್ಯ ಕೊಟ್ಟಿಲ್ಲ. ಬರಗಾಲ ಕಾಮಗಾರಿ ಯೋಜನೆಯಲ್ಲಿ ಎಂಟು ರೂಪಾಯಿಗಳ ಕೂಲಿ ಕೊಡುತ್ತಿದ್ದೀರಿ. ಜಿಯಾಲಾಜಿಕಲ್ ಇಲಾಖೆಯವರಿಗೆ ಪತ್ರ ಬರೆದು ಯಾವ ಯಾವ ಭಾಗದಲ್ಲಿ ಏನೇನು ಕೆಲಸಗಳನ್ನು ತೆಗೆದುಕೊಳ್ಳಬಹುದೆಂದು ನಾನು ಜನತೆಯ ಪ್ರತಿನಿಧಿಯಾಗಿ ಪತ್ರ ಬರೆದಿದ್ದೇನೆ. ಬರಗಾಲ ಯೋಜನೆಯಲ್ಲಿ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಿದ್ದೀರಿ. ಇದು ಯಾರಪ್ಪನ ಮನೆಯ ಹಣ ? ನಿಮ್ಮ ಸರ್ಕಾರದಲ್ಲಿ ಕುಡಿಯಲಿಕ್ಕೆ ನೀರು ಇಲ್ಲದಂತಾಗಿದೆ. ಹುಲಕೋಟಿ ಗ್ರೂಪಿನಿಂದ ಕುಡಿಯಲಿಕ್ಕೆ ನೀರು ಕೊಡುತ್ತೇನೆಂದು ಹೇಳಿದ್ದೆ, ದುರ್ದೈವದಿಂದ ಇವೊತ್ತು ಅದು ಪೂರ್ತಿ ಬತ್ತಿ ಹೋಗಿದೆ. ಗದಗಿಗೆ ನೀರು ಕೊಡುವುದಿರಲಿ, ನನ್ನ ಊರಿಗೆ ನೀರು ಇಲ್ಲದಂತಾಗಿದೆ. ಬರಗಾಲದ ವಿಚಾರದಲ್ಲಿ ಸರ್ಕಾರ ಮಾಡುತ್ತಿರುವ ಕೆಲಸಕಾರ್ಯಗಳ ಬಗ್ಗೆ ಖರ್ಚು ಮಾಡುತ್ತಿರುವ ಹಣದ ಬಗ್ಗೆ ನಾವು ಟೀಕೆ ಮಾಡುತ್ತಿದ್ದೇವೆ. ಕೆ. ಎಚ್. ಪಾಟೀಲರು ಅಧಿಕಾರದಲ್ಲಿದ್ದಾಗ, ಬರಗಾಲದ ಬಗ್ಗೆ ಖರ್ಚು ಮಾಡಿದ್ದರ ಬಗ್ಗೆ ಲೆಕ್ಕ ಕೊಟ್ಟಿಲ್ಲವೆಂದು ಮಾನ್ಯ ಬೊಮ್ಮಾಯಿಯವರು ಹೇಳಿದ್ದಾರೆ. ಅವರಿಗೆ ಆಡಳಿತಾತ್ಮಕ ಪ್ರಜ್ಞೆ ಕೆಟ್ಟು ಹೋಗಿದೆಯೆಂದು ಕಾಣುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹಾಗೆ ಹೇಳಿಲ್ಲ.

ಶ್ರೀ ಕೆ ಎಚ್. ಪಾಟೀಲ್.—ಹಿಂದೂ ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆಡಿಟ್ ರಿಪೋರ್ಟ್ ಇದೆ. ಅದರಲ್ಲಿ ಲೆಕ್ಕ ಸರಿಯಾಗಿ ಕೊಟ್ಟಿಲ್ಲವೆಂದು ಹೇಳಿದ್ದೇನೆ. ೧೯೭೨-೭೩ರಲ್ಲಿ ಶ್ರೀ ಮಾಂಗ್ದಾಂ ಇದ್ದಾಗ ಎ. ಜಿ. ರಿಪೋರ್ಟ್ ಬಗ್ಗೆ ಹೇಳಿರೋದು. ನೀವು ಕೊಡಬೇಕಾಗಿಲ್ಲ ನಾನು ಅಂಥ ದಡ್ಡನಲ್ಲ.

SRI K. H. PATIL.—"Rebutting Mr. Patils charges, he said the previous Government had neither followed any system nor maintained

proper accounts of expenditure, Mr. Patil who was thenin the Ministry. had not even submitted detailed accounts of expenditure incurred on drought relief measures, he said.

ರೊಕ್ಕವನ್ನು ಅಧಿಕಾರಿಗಳ ಕೈಗೆ ಕೊಡಿ, ನಾನೂ ಕೂಡ ಮಂತ್ರಿಯಾಗಿದ್ದಾಗ ಬರಗಾಲದ ಕಾಮಗಾರಿ ಕೆಲಸವನ್ನು ಮಾಡಿಸಿದ್ದೇನೆ. ಸಾಯಿಲ್ ಕನ್ಸರ್ವೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಅಸಲಿ ಕೆಲಸ ನಡೆದಿರಲಿಲ್ಲ, ಅಂತಹ ಅಧಿಕಾರಿಗಳ ಬಗ್ಗೆ ನಾನು ಕ್ರಮ ತೆಗೆದುಕೊಂಡಾಗ ಮುಖ್ಯಮಂತ್ರಿಗಳು ಅವರುಗಳ ಬಗ್ಗೆ ಹೇಳಿದಾಗ, ಇದರಲ್ಲಿ ನೀವು ಕೈಹಾಕಬೇಡಿಯೆಂದು ಹೇಳಿದ್ದೇನೆ. ಅಧಿಕಾರಿಗಳು ನಮ್ಮ ಕೈಯಲ್ಲಿರಬೇಕು. ಕುದುರೆ, ಓಡಿಸುವವನ ಕೈಯಲ್ಲಿ ಲಗಾಮು ಇರಬೇಕು, ಲಗಾಮು ಕೈಯಲ್ಲಿ ಇಲ್ಲದಿದ್ದರೆ ಕುದುರೆ ಬೇರೆ ಕಡೆ ಓಡುತ್ತದೆ. ಬರಗಾಲ ಕಾಮಗಾರಿ ಹಣವನ್ನು ನೀವು ನಿಮ್ಮ ಇಂಜಿನಿಯರ್‌ಗಳಿಗೆ ಕೊಡಿ, ಅಧಿಕಾರಿಗಳ ಕೈಗೆ ಕೊಡಿ ಯಾರಿಗಾದರೂ ಕೊಡಿ ನಿಮ್ಮ ಪಕ್ಷದವರಿಗೆ ಕೊಡಿರಿ. ಆದರೆ ಕೆಲಸ ಮಾಡುವವರು ಯಾರು ಇದ್ದಾರೆ ಅವರುಗಳಿಗೆ ಕೊಡಿ. ಇವೊತ್ತು ಕುಡಿಯುವ ನೀರಿನ ಬವಣೆ ಇದೆ. ಕುಡಿಯುವ ನೀರಿನ ಬವಣೆ ಇರುವಾಗ ಅದನ್ನು ನಿವಾರಣೆ ಮಾಡಲಿಕ್ಕೆ ಯಾವ ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದೀರಿ? ನೀರಿನ ಬರ ಬಂತು ಎಂದರೆ ಸಾಂಕ್ರಾಮಿಕ ರೋಗಗಳು ಬರುತ್ತವೆ. ಇದರ ಬಗ್ಗೆ ಪಿ.ಎಚ್.ಇ ಡಿಪಾರ್ಟ್‌ಮೆಂಟ್‌ನವರು ಪ್ರಿಕಾಷನರಿ ಮೆಸರ್ ತೆಗೆದುಕೊಂಡ ಹಾಗೆ ಇಲ್ಲ. ಆದರೆ ಸಾಕಷ್ಟು ಹಣ ಖರ್ಚಾಗುತ್ತಿದೆ. ಇವೊತ್ತು ಬೆಂಗಳೂರಿನಲ್ಲಿ ನೀರಿನ ತೊಂದರೆ ಇದೆ. ರಾಜ್ಯದಲ್ಲಿ ದನಕರುಗಳಿಗೆ ಮೇವು ಇಲ್ಲವಾಗಿದೆ. ಮೇವು ಇಲ್ಲದಿದ್ದರೆ ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಿಂದ ತರಿಸಬಹುದು. ಆದರೆ ನೀರನ್ನು ಸಕಾಲಕ್ಕೆ ಒದಗಿಸದಿದ್ದರೆ ಪ್ಲೇಗ್ ಇನ್ನಿತರ ಕಾಯಿಲೆಗಳು ಬರುತ್ತವೆ ಆಗ ಏನು ಮಾಡುತ್ತೀರಿ? ಬರಗಾಲದ ಕಾಮಗಾರಿ ಯಾರ ಕೈಯಲ್ಲಿ ಬೇಕಾದರೂ ಇರಲಿ, ನೀವು ಹೆಲ್ತ್ ಮಿನಿಸ್ಟರ್‌ನ್ನು ಲೋಕೋಪಯೋಗಿ ಮಿನಿಸ್ಟರನ್ನು ಪುಲ್‌ಅಪ್ ಮಾಡಬೇಕು. ಇಂಥಿಂಥ ಕೆಲಸವನ್ನು ನೀವು ಮಾಡಬೇಕೆಂದು ಪುಲ್‌ಅಪ್ ಮಾಡಲಿಕ್ಕೆ ಆಗದಿದ್ದರೆ ಹೇಗೆ. ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಇದಕ್ಕಿಂಥ ಉತ್ತಮವಾದ ಉದಾಹರಣೆಗಳು ಬೇಕೇ ಆ ದೃಷ್ಟಿಯಿಂದ ನಾನು ಹೇಳಿದ್ದೆನೆ ಮಾನ್ಯ ಬೊಮ್ಮಾಯಿಯವರು ನನ್ನ ಸ್ನೇಹಿತರು ಅವರ ಮನಸ್ಸಿಗೆ ನೋವಾಗಬೇಕೆಂದು ನಾನು ಹೇಳಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಇವರಿಬ್ಬರ ಮೈತ್ರಿ ಆ ಭಗವಂತನಿಗೂ ಗೊತ್ತಾಗುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಆ ಭಗವಂತನಿಗೆ ಗೊತ್ತಾಗುವುದು ತಪ್ಪಿದರೂ ರಾಮಕೃಷ್ಣ ಹೆಗಡೆಯವರಿಗೆ ಬೇಗ ಗೊತ್ತಾಗುತ್ತದೆ. ಪರ್ಯಾಯ ಉದ್ಯೋಗ ನೀಡಿಕೆ, ಆದರಲ್ಲಿ ದಿನವೊಂದಕ್ಕೆ ೧ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಒಂದು ತಾಲ್ಲೂಕಿನಲ್ಲಿ ೧ಲಕ್ಷ ಜನ ಇದ್ದರೆ, ಒಂದು ದಿವಸಕ್ಕೆ ೬೪ಲಕ್ಷ ರೂಪಾಯಿಗಳನ್ನು ಇದ್ದಷ್ಟು ಜನರಿಗೆ ಕೊಡಬೇಕಾಗುತ್ತದೆ. ಇದನ್ನು ಅವರೇ ಹೇಳುತ್ತಿದ್ದಾರೆ, ಅಷ್ಟು ಖರ್ಚು ಮಾಡುತ್ತಿಲ್ಲ, ಕಡಿಮೆ ಖರ್ಚು ಮಾಡುತ್ತಿದ್ದೇವೆಂದು ಹೇಳಲಿ. ಉಳಿದ ಜನರಿಗೆ ಏನು ವ್ಯವಸ್ಥೆ ಮಾಡಿದ್ದೀರಿ? ಅನೇಕ ಇಂಡಸ್ಟ್ರಿಗಳು ಇವೆ. ಅವುಗಳ ಕಡೆಗೆ ಸ್ವಲ್ಪ ಲಕ್ಷ್ಯ ಕೊಡಿ. ಗ್ರೀನ್ ಕಾರ್ಡ್‌ಗಳನ್ನು ಜನರಿಗೆ ಕೊಟ್ಟಿದ್ದೀರಿ. ಇನ್ನೊಂದು ಗ್ರೀನ್ ಕಾರ್ಡ್ ಕೊಡಿರಿ, ನಿಮಗೆ ಯಾರ್ಯಾರು ಓಟು ಹಾಕಿದ್ದಾರೆ ಅಷ್ಟು ಜನರಿಗೆ ಕಾಮಗಾರಿ ಕೆಲಸವನ್ನು ಕೊಡುತ್ತೇವೆಂದು ಹೇಳಿ. ಅದರಿಂದಲಾದರೂ ಸಮಾಧಾನಪಟ್ಟು ಕೊಳ್ಳುತ್ತೇವೆ. ನಮಗೆ ಓಟು ಹಾಕಿರುವವರನ್ನು ಬಿಟ್ಟು ಬೇರೆಯವರು ಈ ಕೆಲಸ ಕಾರ್ಯದಲ್ಲಿ ಬರತಕ್ಕ ಕೂಲಿ ಹಣವನ್ನು ತೆಗೆದುಕೊಳ್ಳುವುದಕ್ಕೆ ಅರ್ಹರಲ್ಲವೆಂದು ಹೇಳಿಬಿಡಿ. ಗದಗಿಗೆ ೨ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ, ಜನರಿಗೆ ಯಾವರೀತಿ ಕೆಲಸ ಕೊಡಲಿಕ್ಕೆ ಸಾಧ್ಯವಾಗುತ್ತದೆ. ನೀವು ಎಷ್ಟು ಮಂದಿಗೆ ಕೆಲಸ ಕೊಟ್ಟಿದ್ದಿರಿ? ಸಮಯದ ಅಭಾವವಿರುವುದರಿಂದ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾನು ಇವೊತ್ತು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ, ಜನರಿಗೆ ಉದ್ಯೋಗವನ್ನು ಕೊಡತಕ್ಕದ್ದರಲ್ಲಿ ಅನ್ಯಾಯ ಮಾಡಬಾರದು. ದನಕರುಗಳನ್ನು ರಕ್ಷಣೆ ಮಾಡುವುದಕ್ಕೋಸ್ಕರ ೫೦೦ ಗೋಶಾಲೆಗಳನ್ನು ತೆರೆದಿದ್ದೇವೆಂದು ಹೇಳುತ್ತೀರಿ. ಜನಗಳು ಹೆಗಡೆಯವರು ಚಲೋ ಕೆಲಸ ಮಾಡುತ್ತಾರೆಂದು ತಿಳಿದಿದ್ದಾರೆ. ೫೦ ಎಕರೆ ಭೂಮಿಯನ್ನು ಹೊಂದಿರತಕ್ಕವನು ದೊಡ್ಡ ರೈತ ಅದಕ್ಕಿಂಥ ಕಡಿಮೆ ಭೂಮಿ ಇರತಕ್ಕವನ್ನು ದೊಡ್ಡ ರೈತ ಅಲ್ಲ. ಎಂದರೆ ೫೦ ಎಕರೆ ಭೂಮಿ ಇರತಕ್ಕ

ವನಿಗೆ ಅವನು ಇಟ್ಟು ಕೊಂಡಿರತಕ್ಕ ದನಕರುಗಳಿಗೆ ಗೋಶಾಲೆಗಳಲ್ಲಿ ಮೇವು ಇಲ್ಲ. ಅವನ ಹತ್ತಿರ ಮೇವಿನ ಭಂಡಾರ ಇಲ್ಲದಿರುವಾಗ ಅವನು ಹೊಲ ಮಾರಿಕೊಂಡು ಮೇವು ಹಾಕಲಿ ಎನ್ನುವುದು ನಿಮ್ಮ ಇಚ್ಛೆ ಏನು? ಸರ್ಕಾರದ ಲೆಕ್ಕದಲ್ಲಿ ಬರಗಾಲ ಎಂದರೆ ಎಲ್ಲರಿಗೂ ಬರಗಾಲವಿರುತ್ತದೆಂದು ತಿಳಿಯ ಬೇಕು. ಬಡವರಿಗೆ ಕೂಲಿ ಕೊಡುತ್ತೇವೆ, ಕೆ. ಎಚ್. ಪಾಟೀಲ್ ನಂಥಹವರು ಸಾಯಲಿ ಎಂದು ಹೇಳುತ್ತೀರೇನು? ಬರ ಅಂದರೆ ದೊಡ್ಡವರೇ ಇರಲಿ, ಸಣ್ಣವರೇ ಇರಲಿ ಎಲ್ಲರಿಗೂ ಬರಗಾಲ ಇರುತ್ತದೆ. ಆ ರೀತಿ ಮಾಡುವುದು ಅಕ್ಷಮ್ಯ ಅಪರಾಧ. ಆ ರೀತಿ ಮಾಡದಿರಲಿ ಎನ್ನುವುದು ನನ್ನ ಆಶಯ. ಶ್ರೀಮಾನ್ ಬೂಟಾಸಿಂಗ್‌ರವರು ನಮ್ಮ ರಾಜ್ಯಕ್ಕೆ ಬಂದು ಹೋಗಿ ಎಷ್ಟು ದಿವಸಗಳಾಯಿತು? ನೀವು ಏನು ವ್ಯವಸ್ಥೆ ಮಾಡಿದ್ದೀರಿ? ಜನರಿಗೆ ಹೆಚ್ಚು ಕೆಲಸ ಕೊಡುವುದರಿಂದ ಸರ್ಕಾರಕ್ಕೆ ಜಾಸ್ತಿ ಖರ್ಚೇನೂ ಆಗುವುದಿಲ್ಲ. ಗೋಧಿ ಅಕ್ಕಿಯನ್ನು ತರಿಸಿ ಕೊಡಿ. ಗೋಧಿ ಎಷ್ಟು ಬೇಕು, ಅಕ್ಕಿ ಎಷ್ಟು ಬೇಕೆಂದು ಕೇಳಿದ್ದೀರಾ. ಶ್ರೀಮಾನ್ ಬೂಟಾಸಿಂಗ್‌ರವರು ಈಗ ಗೋಧಿ ತೆಗೆದುಕೊಳ್ಳಿ, ಅಕ್ಕಿ ಬಂದಮೇಲೆ ಅಕ್ಕಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ನೀವು ಇನ್ನೂ ಗೋಧಿಯನ್ನು ತಂದಿಲ್ಲ. ಬೇರೆ ಬೇರೆ ಸಂಘಸಂಸ್ಥೆಗಳನ್ನು ಮಾಡಿಕೊಂಡು ನಿಮಗೆ ಗೋಧಿಯನ್ನು ತರಿಸಬೇಕೆನ್ನುವ ಆಶಯ ಇದೆಯೆ, ನೀವು ಲೀಡರ್‌ಷಿಪ್ ತೆಗೆದುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಆವೊತ್ತಿನ ದಿವಸವೇ ಪತ್ರ ಕೊಟ್ಟಿದ್ದೇವೆ. ಕೇಂದ್ರ ಸರ್ಕಾರದಲ್ಲಿ ಇದರ ಆಜ್ಞೆ ಹೊರಡಬೇಕಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ನೀವು ಆವೊತ್ತೆ ಇದು ಆಗಬೇಕೆಂದು ಹೇಳಬೇಕಾಗಿತ್ತು. ಬೇಕಾದರೆ ಮಾಡುತ್ತೀರಿ, ಇದು ನಿಮಗೆ ಬೇಡವಾಗಿದೆಯೇ? ಅದು ಆಗಬಾರದು ಕೇಂದ್ರದ ಮೇಲೆ ದೋಷ ಹೊರಿಸಬೇಕೆನ್ನುವ ಆ ಒಂದ ಪರಿಸ್ಥಿತಿಯನ್ನು ನಿರ್ಮಾಣ ಮಾಡುವುದಾದರೆ ನಮ್ಮ ಅಭ್ಯಂತರವಿಲ್ಲ. ತೆಗೆದುಕೊಳ್ಳುವುದಕ್ಕೆ ನಾವು ನೀವು ಪ್ರಯತ್ನ ಮಾಡೋಣ, ಈಗ ಕೊಡುವುದನ್ನು ತೆಗೆದುಕೊಂಡು ಬನ್ನಿ. ವ್ಯವಸಾಯ ಕೂಲಿಗಾರರ ಸಂಖ್ಯೆ ನಿಮ್ಮ ಪ್ರಕಾರ ೨೩ ಲಕ್ಷದ ೬೪ ಸಾವಿರ. ಅದರಲ್ಲಿ ಸಣ್ಣ ರೈತರನ್ನು ಬಿಡಿರಿ. ಕೃಷಿ ಕಾರ್ಮಿಕರ ಸಂಖ್ಯೆ ೨೩ ಲಕ್ಷದ ೬೪ ಸಾವಿರ ಇಷ್ಟು ಜನರಿಗೆ ನೀವು ಕೂಲಿಯನ್ನು ಕೊಡಬೇಕು. ೨೩ ಲಕ್ಷದ ೬೪ ಸಾವಿರ ಜನರಿಗೆ ನೀವು ಕೂಲಿಯನ್ನು ಕೊಡಬೇಕಾದರೆ, ನಿಮ್ಮ ಬರಗಾಲ ಕಾಮಗಾರಿ ಕೂಲಿ ರೇಟ್ ಪ್ರಕಾರ ಒಬ್ಬರಿಗೆ ೮ ರೂಪಾಯಿಗಳನ್ನು ಕೊಡಬೇಕು. ಎಷ್ಟು ಆಗುತ್ತದೆ ಎಂಬುದನ್ನು ಲೆಕ್ಕ ಹಾಕಿ, ಆದಕ್ಕೆ ಏನು ವ್ಯವಸ್ಥೆಯನ್ನು ಮಾಡಿದ್ದೀರಿ? ಇಂಥಿಂಥ ತಾಲ್ಲೂಕುಗಳು ಬರ ಇಲ್ಲದ ತಾಲ್ಲೂಕುಗಳು, ಇಂಥಿಂಥ ತಾಲ್ಲೂಕುಗಳು ಬರವನ್ನು ಎದುರಿಸುತ್ತಿವೆ ಎಂದು ಕೇಂದ್ರದ ಎದುರಿದ ಧ್ವಂಧ್ವ ಯುದ್ಧ ನಡೆಸಿದರೆ ಅವರು ಹೇಗೆ ಸಹಾಯ ಮಾಡುತ್ತಾರೆ? ನೀವು ಕಣ್ಣು ತೆರೆಯಬೇಕು ಬರಗಾಲವಿರತಕ್ಕ ಪ್ರದೇಶಗಳಲ್ಲಿ ದನಗಳ ಸಂಖ್ಯೆ ೯೩ ಲಕ್ಷದ ೨೪ ಸಾವಿರ ಎಂದು ತಿಳಿಸಿದ್ದೀರಿ. ನಮ್ಮ ಗಂಡುಗಿನ ಗೋಶಾಲೆಯಲ್ಲಿರತಕ್ಕ ದನಗಳ ಸಂಖ್ಯೆ ೨೧೭. ನೀವು ನಿಮ್ಮ ಲೆಕ್ಕದ ಪ್ರಕಾರ ೯೩ ಲಕ್ಷ ರಾಸುಗಳನ್ನು ಯಾವರೀತಿ ರಕ್ಷಣೆ ಮಾಡುತ್ತೀರಿ? ದನಗಳು ಸತ್ತಮೇಲೆ ರಕ್ಷಣೆ ಮಾಡುತ್ತೀರಾ. ರೈತ ದನಗಳನ್ನು ಕಳೆದುಕೊಂಡರೆ ಏನು ಮಾಡಬೇಕು. ನೀವು ದನಗಳನ್ನು ಯಾವಾಗ ರಕ್ಷಣೆ ಮಾಡುತ್ತೀರಿ. ಇನ್ನೆರಡು ತಿಂಗಳುಗಳಲ್ಲಿ ಮಳೆ ಬಂದರೆ ಶಿವಾಯ ನಮಃ ಮಳೆ ಬಂದಾಗ ರೈತ ಹೊಲ ಹೊಡೆಯಲಿಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ? ಬೀಜಗಳ ವ್ಯವಸ್ಥೆ ಮಾಡಿಲ್ಲ. ಹತ್ತಿ ಬೀಜಗಳ ರಕ್ಷಣೆ ಮಾಡುವ ಸಲುವಾಗಿ ಯಾವ ವ್ಯವಸೆ ಯನ್ನು ಮಾಡಿದ್ದೀರಿ. ಕೆ. ಎಚ್. ಪಾಟೀಲ್ ಬೀಜ ಕೊಟ್ಟರೆ, ಅವರ ಬೀಜ ಹುಟ್ಟಲಿಲ್ಲವೆಂದು ಹೇಳುತ್ತೀರಿ. ರೈತರಿಗೆ ಬೀಜಗಳನ್ನು ನೀವು ಯಾವರೀತಿ ಒದಗಿಸುತ್ತೀರಿ? ನಾನು ಮಂತ್ರಿಯಾಗಿದ್ದಾಗ ನನ್ನ ಅನುಭವನ್ನು ಹೇಳುತ್ತೇನೆ, ಸರ್ಕಾರ ಬೀದರ್ ಜಿಲ್ಲೆಯಲ್ಲಿ ಶೇಂಗಾ ಬೀಜವನ್ನು ಬಿತ್ತಲಿಕ್ಕೆ ಕೊಟ್ಟಿದ್ದರು, ರೈತರು ಯಾರೂ ಕೂಡ ಬೀಜವನ್ನು ಬಿತ್ತಲಿಕ್ಕೆ ಆಗಲಿಲ್ಲ. ಆದ್ದರಿಂದ ಅವರುಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ವ್ಯವಸಾಯ ಇಲಾಖೆಯ ನಿರ್ದೇಶಕರು ಹೇಳಿದಾಗ, ನಾನು ಹೇಳಿದೆ ನಿರ್ದೇಶಕರಿಗೆ ತಲೆ ಬರಾಬರಿ ಇಲ್ಲ, ರೈತನಿಗೆ ಬಿತ್ತುವತನಕ ಶಕ್ತಿ ಇಲ್ಲದಿದ ರೆ ಅವನು ಏನು ಮಾಡುತ್ತಾನೆ. ಕೊಟ್ಟಂತಹ ಶೇಂಗಾ ಬೀಜವನ್ನು ತಿಂದು ಹಾಕಿದ್ದಾರು. ಅವರುಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುವುದು ಬೇಡಬಿಡಿ ಎಂದು ಹೇಳಿದ್ದೇನೆ.

೫-೦೦ ಪಿ.ಎಂ.

ಆ ದೃಷ್ಟಿಯಿಂದ ನಾನು ಇವೊತ್ತು ಸಲಹೆ ಮಾಡುವುದೇನೆಂದರೆ, ಬೀಜಗಳನ್ನು ಶೇಖರಣೆ ಮಾಡತಕ್ಕ ವ್ಯವಸ್ಥೆ ಮಾಡಿ. ಗೊಬ್ಬರನ್ನು ಸ್ಟೋರೇಜ್ ಮಾಡುವಂತಹ ವ್ಯವಸ್ಥೆ ನಿಮ್ಮಲ್ಲಿದೆ. ಅದನ್ನು ಸ್ಟೋರೇಜ್ ಮಾಡುವುದಕ್ಕೆ ಗೊಡೋನ್ ಕಟ್ಟುವ ಸಲುವಾಗಿ ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ ಆ ರೀತಿ ಬರುವಂತಹ ಹಣವನ್ನು ಉಪಯೋಗ ಮಾಡಿಕೊಂಡು ಗೋಡೋನ್ ಕಟ್ಟುವುದಕ್ಕೆ ಪ್ರಯತ್ನ ಮಾಡಿ, ಆ ವಿಚಾರದಲ್ಲಿ ನಾವು ನಿಮಗೆ ಸಹಾಯ ಮಾಡುವುದಕ್ಕೆ ತಯಾರಿದ್ದೇವೆ. ಆದರೆ ನೀವು ಆ ಬಗ್ಗೆ ಮನಸ್ಸು ಮಾಡಬೇಕು. ಯಾವ ಯಾವ ಬೀಜ, ಎಲ್ಲೆಲ್ಲ ಎಷ್ಟೆಷ್ಟು ಬೇಕು? ಎಂಬುದನ್ನು ಪರೀಕ್ಷೆ ಮಾಡುವ ವ್ಯವಸ್ಥೆಯಾಗಬೇಕು. ವ್ಯವಸಾಯ ಮಂತ್ರಿಗಳು ಈ ದಿಕ್ಕಿನಲ್ಲಿ ಈ ಕೂಡಲೇ ಪ್ರಯತ್ನ ಮಾಡಿ, ಬೇಕಾಗಿರುವಂತಹ ಬೀಜವನ್ನು ರೆಡಿ ಇಟ್ಟಿರಬೇಕು. ಆ ರೀತಿ ವ್ಯವಸ್ಥೆ ಮಾಡಿದಾಗ ಮಾತ್ರ ಮುಂದೆ ಮಳೆ ಬಂದರೂ ಬರಗಾಲವನ್ನು ಎದುರಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ, ಬರವನ್ನು ನೀಗಿಸುವುದಕ್ಕಾಗುವುದಿಲ್ಲ. ಇದರ ಜೊತೆಗೆ ನೀರಿನ ಬವಣೆಯನ್ನು ಪರಿಹಾರ ಮಾಡಬೇಕು. ಏಕೆಂದರೆ ಭೂಮಿಯಲ್ಲಿ ನೀರಿನ ಮಟ್ಟ ಕೆಳಗಡೆ ಹೋಗುತ್ತಿದೆ. ಈಗಾಗಲೇ ತೆಗೆದಿರುವಂತಹ ಕೊಳವೆ ಬಾವಿಗಳಲ್ಲಿ ನೀರು ಇಲ್ಲದಂತಾಗಿದೆ. ಹೆಚ್ಚು ಆಳವನ್ನು ಕೊರೆಯುವಂತಹ ರಿಗ್‌ಗಳ ಅವಶ್ಯಕತೆ ಇದೆ. ಯಾವ ರೀತಿಯಿಂದಲಾದರೂ ಪ್ರಯತ್ನ ಮಾಡಿ ಮುಂದೆ ಮಳೆ ಬರುವವರೆಗೂ ನೀರಿನ ಬವಣೆ ಇಲ್ಲದಂತೆ ಮಾಡಬೇಕು. ಹೆಚ್ಚು ಹೆಚ್ಚು ಆಹಾರ ಧಾನ್ಯಗಳನ್ನು ಪಡೆದುಕೊಳ್ಳುವಲ್ಲಿ ಕೇಂದ್ರ ಸರ್ಕಾರದ ಜೊತೆ ವ್ಯವಹಾರ ಮಾಡಿ ಕೇಂದ್ರ ಸರ್ಕಾರದಲ್ಲಿ ಆಹಾರ ಧಾನ್ಯಗಳ ಸಂಗ್ರಹಣೆ ಇದೆ. ಕೂಡಲೇ ನಿಮ್ಮಲ್ಲಿ ಸಂಬಂಧಪಟ್ಟವರನ್ನು ಕಳುಹಿಸಿ ಅವರಿಂದ ಪಡೆದುಕೊಳ್ಳುವಲ್ಲಿ ತೀವ್ರ ರೀತಿಯ ಪ್ರಯತ್ನ ಮಾಡಬೇಕು. ನಮಗೆ ಮುಖ್ಯವಾಗಿ ಬೇಕಾಗಿರುವಂಥದ್ದು ನೀರು ಮೇವು ಹಾಗೂ ಹಣ. ಇದನ್ನು ಎಲ್ಲಾ ಬರಗಾಲ ಪ್ರದೇಶಗಳಿಗೂ ಅಸಮಾನತೆ ಇಲ್ಲದೆ ಒದಗಿಸುವಂತಹ ಕೆಲಸವನ್ನು ತಾವು ಮಾಡಬೇಕು. ಇವೆಲ್ಲವನ್ನು ಮಾಡುವುದರ ಮುಂದೆ ದನಕರುಗಳಿಗೆ ಬೇಕಾದಂತಹ ಹುಲ್ಲಿನ ವ್ಯವಸ್ಥೆಯನ್ನೂ ಕೂಡ ತಾವು ಮಾಡಬೇಕಾಗುತ್ತದೆ. ಅದನ್ನು ತಾವು ಮಾಡದೇ ಇದ್ದ ಪಕ್ಷದಲ್ಲಿ ಹುಲ್ಲನ್ನು ಬೆಳೆಯುವುದಕ್ಕೆ ಇಂಜೆಕ್ಷನ್ ಕೊಡಬೇಕಾಗುವಂತಹ ಪರಿಸ್ಥಿತಿ ಬರುತ್ತದೆ. ನಮ್ಮ ಭಾಗದಲ್ಲೆಲ್ಲ ಯಾವುದೇ ರೀತಿಯ ಬರಗಾಲ ಕಾಮಗಾರಿಯನ್ನು ಹೆಚ್ಚು ಸಂಖ್ಯೆಯಲ್ಲಿ ತೆಗೆದುಕೊಂಡಿಲ್ಲ. ಈ ರಾಜ್ಯದಲ್ಲಿರುವ ಸಣ್ಣ ರೈತರು ೬,೫೫,೮೪೬. ನಂತರ ಮಾರ್ಜಿನಲ್ ಫಾರ್ಮರ್ಸ್ ೯,೪೭,೬೨೬ ಜನರು ಇದ್ದಾರೆ. ಅವರಸಲುವಾಗಿ ಏನು ವ್ಯವಸ್ಥೆ ಮಾಡಿದ್ದೀರಿ? ಅವರು ತಮ್ಮ ದನಗಳನ್ನು ಗೋಶಾಲೆಗೆ ಹೊಡೆದುಕೊಂಡು ಹೋಗುವುದಕ್ಕೆ ಈಗ ಅವಕಾಶ ಇಲ್ಲ. ಅವರೆಲ್ಲರೂ ತಮ್ಮ ದನಕರುಗಳನ್ನು ಕಟುಕರಿಗೆ ಮಾರಿಬಿಟ್ಟಿದ್ದಾರೆಂದು ತಿಳಿದುಕೊಂಡಿದ್ದೇವೆ. ಕಾರಣ ೧೫ ಎಕರೆ ಭೂಮಿ ಇರುವವರು ನಿಮ್ಮ ಗೋಶಾಲೆಗೆ ಬರುವಂತಿಲ್ಲ. ತಮ್ಮಲ್ಲಿ ದನಗಳಿಗೆ ಹಾಕುವುದಕ್ಕೆ ಮೇವು ಇಲ್ಲ. ಒಂದು ವೇಳೆ ಮೇವನ್ನು ತೆಗೆದುಕೊಳ್ಳಬೇಕೆಂದಿದ್ದರೂ ಅಸಿಸ್ಟೆಂಟ್ ಕಮೀಷನರ್‌ರವರಿಂದ ತೀರ್ಮಾನ ಮಾಡಬೇಕು. ಅವರು ತೀರ್ಮಾನ ಮಾಡುವವರೆಗೆ ೧೫ ದಿವಸ ಹೊರಟು ಹೋಗುತ್ತದೆ. ಅಷ್ಟರಲ್ಲಿ ದನಗಳು ಸತ್ತು ಹೋಗುತ್ತವೆ. ಆದ್ದರಿಂದ ಬರಗಾಲ ಇರುವಂತಹ ಪ್ರದೇಶಗಳಲ್ಲಿ ದಯಮಾಡಿ ಈ ಒಂದು ನಿಯಮವನ್ನು ತೆಗೆದುಬಿಡಿ. ಎಲ್ಲರೂ ಒಂದೇ ರೀತಿಗೆ ಬಂದು ಮುಟ್ಟಿದ್ದಾರೆ. ಇವತ್ತು ಎಲ್ಲರೂ ಸಣ್ಣ ರೈತರೇ ಆಗಿದ್ದಾರೆ. ಶ್ರೀಮತಿ ನಾಗರತ್ನಮ್ಮನವರೂ ಕೂಡ ೪ ಎಕರೆಗೆ ಬಂದು ಮುಟ್ಟಿದ್ದಾರೆ. ಆ ದೃಷ್ಟಿಯಿಂದ ದೊಡ್ಡ ರೈತರಿಗಿರುವಂತಹ ಕಷ್ಟಗಳನ್ನೂ ತಾವು ನೋಡಬೇಕು. ನಮ್ಮ ಜೀವರಾಜ ಆಳ್ವರವರು ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಾಡುತ್ತೇವೆಂದು ಹೇಳಿದ್ದಾರೆ. ಪ್ರತಿದಿನವೂ ಟಿ.ವಿ.ಯಲ್ಲಿ ಅವರನ್ನೇ ನೋಡುತ್ತೇವೆ. ಹಾಗೆಯೇ ಕೆಲಸವನ್ನು ಮಾಡಿ ತೋರಿಸಿ. ಜನರ ಮೆಚ್ಚುಗೆಯನ್ನು ಪಡೆಯಿರಿ. ಭೀಕರ ಬರಗಾಲ ಇರುವಂತಹ ಸ್ಥಳಗಳಲ್ಲಿ ಅದನ್ನು ಎದುರಿಸುವ ದಿಸೆಯಲ್ಲಿ ನಿಜವಾಗಿಯೂ ಯಾವುದೇ ಪಕ್ಷವಾಗಿರಲಿ, ಅವರೆಲ್ಲರೂ ಸರ್ಕಾರಕ್ಕೆ ಸಂಪೂರ್ಣವಾಗಿ ಸಹಾಯ ಮಾಡಬೇಕು. ಕೇಂದ್ರ ಸರ್ಕಾರವನ್ನು ಬರಿ ದೂರುವುದರಿಂದ ಕೆಲಸವಾಗುವುದಿಲ್ಲ. ಕೇಂದ್ರ ಸರ್ಕಾರಕ್ಕೂ ಕೂಡ ಬರಗಾಲ ಇರುವುದರಿಂದ ಹೆಚ್ಚು ಧನಸಹಾಯವನ್ನು ಮಾಡಿ ಎಂದು ಈ ಸದನದ ಮೂಲಕ ಠರಾವನ್ನು ಮಾಡಿ ಕಳುಹಿಸೋಣ. ಹೆಚ್ಚು ಹೆಚ್ಚು ಹಣವನ್ನು ಕೊಡಿ, ಹೆಚ್ಚು ಹೆಚ್ಚು ಆಹಾರ ಧಾನ್ಯವನ್ನು ಕೊಡಿ ಎಂಬುದಾಗಿ ಕೇಳೋಣ. ಕನ್ನಡ ನಾಡಿನ ಜನತೆಯ ಗೌರವವನ್ನು ಕಾಪಾಡುವಂಥದ್ದು ನಮ್ಮ ನಿಮ್ಮ ಎಲ್ಲರ ಕರ್ತವ್ಯವಾಗಿದೆ. ಸನ್ಮಾನ್ಯ

ಮುಖ್ಯ ಮುಖ್ಯಮಂತ್ರಿಗಳು ಪ್ರಧಾನಿ ರಾಜೀವ್‌ಗಾಂಧಿಯವರು ಅತ್ಯಂತ ನಿಕಟವಾಗುತ್ತಿದ್ದಾರೆ. ಇದು ನಮಗಂತೂ ಅರ್ಥವಾಗುವುದಿಲ್ಲ. ಇದರ ಜೊತೆಗೆ ಕೇಂದ್ರ ಸರ್ಕಾರದವರು ನಮ್ಮಿಂದ ಪಡೆಯತಕ್ಕಂತಹ ಹಣ ದುರುಪಯೋಗವಾಗಬಾರದು ಎಂಬುದಾಗಿ ಹೇಳುತ್ತಾರೆ. ಹಾಗೂ ಅನವಶ್ಯಕವಾಗಿ ಖರ್ಚು ಮಾಡುವುದನ್ನು ಬಿಟ್ಟು ಬಿಡಿ ಎನ್ನುವ ಮಾತನ್ನೂ ಕೂಡ ಹೇಳಿದ್ದಾರೆ. ಇದರ ಜೊತೆಗೆ ನೀವು ಹಣವನ್ನು ಬಿಡುಗಡೆ ಮಾಡುವಾಗ ಪ್ರಚಾರ ಮಾಡಬೇಡಿ. ಕಾರಣ ಜನ ಬರಗಾಲದಿಂದ ಕಂಗಾಲಾಗಿದ್ದು, ಹಣ ಬಿಡುಗಡೆ ಮಾಡಿದ್ದೇವೆಂದ ತಕ್ಷಣ ಅಧಿಕಾರಿಗಳ ಹತ್ತಿರ ಹೋಗಿ ಗಲಾಟೆ ಮಾಡುತ್ತಾರೆ. ನೀವು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತೀರಿ, ಆದರೆ ಅಲ್ಲಿಗೆ ಹಣ ಹೋಗಿ ಮುಟ್ಟಿರುವುದೇ ಇಲ್ಲ. ಇಂತಹ ಪರಿಸ್ಥಿತಿ ಇದೆ. ಆದ್ದರಿಂದ ಹಣಕಾಸಿನ ಪರಿಸ್ಥಿತಿಯನ್ನು ಯಾವ ಗಲೂ ಸೀಕ್ರೇಟ್ ಆಗಿ ಇಟ್ಟಿರಬೇಕು. ಈ ವಿಚಾರವನ್ನು ಕೇಳಿದಾಗ ನೀವು ಸಭೆಗೆ ಬಂದಿರಲಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ ಮಾನ್ಯ ಮಂತ್ರಿಗಳು. ಎಲ್ಲಾ ಎಂ.ಎಲ್.ಎ.ಗಳು ತಾಲ್ಲೂಕು ಮಟ್ಟದಲ್ಲಿ ಹೋಗಿ ಕೆಲಸ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ನಾವು ಹೋಗಿ ಅಸಿಸ್ಟೆಂಟ್ ಕಮೀಷನರ್ ಮುಂದೆ ಕೈಕಟ್ಟಿಕೊಂಡು ಕೂಡಬೇಕೆ? ಜನತಾ ಪ್ರತಿನಿಧಿಗಳಾದಂತಹವರು, ಆ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿ. ಶ್ರೀಮಾನ್ ದೊಡ್ಡಮೇಟಿಯವರನ್ನೇ ಅಧ್ಯಕ್ಷರನ್ನಾಗಿ ಮಾಡಿ, ಅಂತಹ ಸಭೆಗಳಿಗೆ ನಾವು ಹೋಗುತ್ತೇವೆ. ಅಧಿಕಾರಿಗಳ ಮುಂದೆ ಕೈಕಟ್ಟಿಕೊಂಡು ಕುಳಿತುಕೊಂಡು, ನಮ್ಮ ತಾಲ್ಲೂಕಿನ ರಸ್ತೆ ತೆಗೆದುಕೊಳ್ಳಿ, ಇಂತಹ ಕೆಲಸ ತೆಗೆದುಕೊಳ್ಳಿ ಎಂದು ನಾವು ಹೇಳಬೇಕೆ? ಇದಕ್ಕಾಗಿ ಎಂ.ಎಲ್.ಎ. ಆಗಿರುವಂತಹವರನ್ನು ಉಪಯೋಗ ಮಾಡಬೇಡಿ. ನಾನು ಯಾವಾಗಲೂ ಹೋಗಿಲ್ಲ. ಒಂದೆರಡು ಸಲ ಹೋಗಿದ್ದೆ. ನಮ್ಮ ಗೌಡರು ಬರುತ್ತಾರೆ ಏನಾದರೂ ಸಹಾಯ ಮಾಡುತ್ತಾರೆಂದು 2 ಸಾವಿರ ಹೆಚ್ಚು ಜನ ಬಂದು ಕುಳಿತಿದ್ದರು. ನಾನು ಇವತ್ತೂ ಹೋದರೂ ಜನ ಸೇರುತ್ತಾರೆ. ಆ ನಂಬಿಕೆಯನ್ನು ಉಳಿಸಿಕೊಂಡಿದ್ದೇನೆ. ನಾನು ಸಾಕಷ್ಟು ಸಾರಿ ಹೋಗಿದ್ದೇನೆ. ಅದು ನಿಮ್ಮಂತಹವರಿಗೆ ಹೇಗೆ ಗೊತ್ತಾಗಬೇಕು? ಎಲ್ಲಾ ದೃಷ್ಟಿಯೊಳಗೆ ಬರಗಾಲವನ್ನು ಎದುರಿಸುವಲ್ಲಿ ಎಲ್ಲಾ ರೀತಿಯ ಸಹಾಯವನ್ನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರಿಗೆ ಕೊಡುತ್ತೇನೆ. ಮತ್ತೆ ಶ್ರೀಮಾನ್ ಬೊಮ್ಮಾಯಿಯವರಿಗೆ ಇದಕ್ಕಿಂತ ಹೆಚ್ಚಿನ ಸ್ಥಾನವನ್ನು ಕೊಟ್ಟು, ಈಗಿರತಕ್ಕಂತಹ ಸ್ಥಾನದಿಂದ ಅವರನ್ನು ಮುಕ್ತರನ್ನಾಗಿ ಮಾಡಬೇಕೆಂದು ಸೂಚಿಸುತ್ತಾ, ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಮುಖ್ಯಮಂತ್ರಿಯವರಿಂದ ಹೇಳಿಕೆ.

ಸರ್ಕಾರಿ ನೌಕರರ ಸಂಬಳ ಸಾರಿಗೆಗಳನ್ನು ಪುನರ್ವಿಮರ್ಶಿಸಲು ವೇತನ ಆಯೋಗದ ನೇಮಕ

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಕಳೆದ ವರ್ಷದ ಮುಂಗಡ ಪತ್ರದಲ್ಲಿ ರಾಜ್ಯ ಸರ್ಕಾರದ ನೌಕರರ ಸಂಬಳ–ಸಾರಿಗೆಯ ಪುನರ್ವಿಮರ್ಶೆಗಾಗಿ ಒಂದು ವೇತನ ಆಯೋಗವನ್ನು ರಚಿಸಿದೆಯೆಂದು ಭರವಸೆ ನೀಡಿದೆ.

ಕರ್ನಾಟಕ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಶ್ರೀ ಬಿ. ವೆಂಕಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸರ್ಕಾರವು ಈ ವೇತನ ಆಯೋಗವನ್ನು ರಚಿಸಿದೆಯೆಂದು ಸಂತೋಷದಿಂದ ಸಭೆಗೆ ತಿಳಿಸುತ್ತಿದ್ದೇನೆ. ಈ ಆಯೋಗದಲ್ಲಿ ನಮ್ಮ ಹಿಂದಿನ ಕಂದಾಯ ಆಯುಕ್ತರಾದ ಶ್ರೀ ಎಸ್. ವೆಂಕಟೇಶ್‌ರವರು ಮತ್ತು ಮೈಸೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರದ ಪ್ರಾಧ್ಯಾಪಕರಾದ